ಶನಿವಾರ, ಜುಲೈ 17, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಆರತಿ**
ಬೆಂಗಳೂರಿನ ಬನಶಂಕರಿ ದೇವಸ್ಥಾನದಲ್ಲಿ ಶುಕ್ರವಾರ ಮಹಿಳೆಯರು ಆರತಿ ಬೆಳಗಿದರು




ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಾಹಿತಿ

# ಕೋವಿಡ್ 3ನೇ ಅಲೆ: ವೈದ್ಯರಿಗೆ ಮಕ್ಕಳ ಚಿಕಿತ್ಸೆಯ ತರಬೇತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕೋವಿಡ್ ಮೂರನೇ ಅಲೆಯ ಕಾರಣ ಕೊರೊನಾ ಸೋಂಕಿತ ಮಕ್ಕಳ ಆರೈಕೆಗೆ ಸಂಬಂಧಿಸಿದಂತೆ ವೈದ್ಯರು ಹಾಗೂ ಆಸ್ಪತ್ರೆಗಳ ಸಿಬ್ಬಂದಿಗೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ತರಬೇತಿ ಕಾರ್ಯಕ್ರಮ ನಡೆಸಲಾಗುವುದು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.



ನಗರದಲ್ಲಿ ಶುಕ್ರವಾರ ಜಿಲ್ಲಾಡಳಿತ ಹಮ್ಮಿಕೊಂಡಿದ್ದ ವೈದ್ಯರ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ‘ಸದ್ಯ 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ನೀಡಲಾಗುತ್ತಿದೆ. ಮೂರನೇ ಅಲೆಯಲ್ಲಿ ಮಕ್ಕಳಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಮಧ್ಯಮ ಮತ್ತು ಹಿರಿಯ ವಯಸ್ಸಿನವರಿಗೆ ನೀಡುವ ಚಿಕಿತ್ಸೆಯನ್ನು ಮಕ್ಕಳಿಗೆ ನೀಡಲು ಸಾಧ್ಯವಿಲ್ಲ. ಹಾಗಾಗಿ, ವೈದ್ಯರಿಗೆ ತರಬೇತಿ ನೀಡಲಾಗುತ್ತಿದೆ’ ಎಂದರು.

**ಮಕ್ಕಳ ಆರೈಕೆ ವಿಭಾಗ:** ‘ಪ್ರತಿ ಜಿಲ್ಲಾ ಆಸ್ಪತ್ರೆಗಳಲ್ಲಿ ಮಕ್ಕಳ ಆರೈಕೆಗಾಗಿ ವಿಶೇಷ ವಿಭಾಗ ಆರಂಭಿಸಲಾಗುತ್ತಿದೆ. ಅದಕ್ಕೆ ಬೇಕಾದ ಮಾನವ ಸಂಪನ್ಮೂಲವನ್ನೂ ಒದಗಿಸಲಾಗಿದೆ. ಹಲವು ದೇಶಗಳಲ್ಲಿ ಮೂರನೇ ಅಲೆ ಬಂದಿದೆ. ಮೈಮರೆತರೆ ಮೂರನೇ ಅಲೆ ಅಪ್ಪಳಿಸಲಿದೆ. ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳಿಗೆ ಕಡಿವಾಣ ಹಾಕಿದರೆ ಸೋಂಕು ಹರಡುವುದನ್ನು ತಪ್ಪಿಸಬಹುದು. ಕನಿಷ್ಠ ಶೇ 70 ರಷ್ಟು ಜನಸಂಖ್ಯೆಗೆ ಲಸಿಕೆ ನೀಡುವವರೆಗೂ ಎಚ್ಚರ ಅಗತ್ಯ’ ಎಂದರು.

‘ರಾಜ್ಯವು ಕೇರಳ ಮತ್ತು ಮಹಾರಾಷ್ಟ್ರದ ಗಡಿ ಹಂಚಿಕೊಳ್ಳುವುದರಿಂದ ಕೋವಿಡ್ ಬಗ್ಗೆ ಎಚ್ಚರವಾಗಿರಬೇಕು. ಸೋಂಕು ಇನ್ನೂ ಇರುವುದರಿಂದ ಸುರಕ್ಷತಾ ಕ್ರಮ ವಹಿಸಬೇಕು’ ಎಂದು ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್, ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ಇದ್ದರು.

### ದೇಶೀಯ ಪ್ರಯಾಣಿಕರಿಗೆ ಪರೀಕ್ಷೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದೇಶೀಯ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ನಡೆಸಬೇಕು ಎಂದು ಆರೋಗ್ಯ ಇಲಾಖೆ ಆಯುಕ್ತ ಡಾ.ಕೆ.ವಿ. ತ್ರಿಲೋಕಚಂದ್ರ ಸುತ್ತೋಲೆ ಹೊರಡಿಸಿದ್ದಾರೆ.

‘ಕೊರೊನಾ ಸೋಂಕು ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಇಲ್ಲಿಗೆ ಬರುವ ಪ್ರಯಾಣಿಕರಿಗೆ ಕೋವಿಡ್ ಪರೀಕ್ಷೆ ನಡೆಸುವುದು ಅಗತ್ಯ. ವಿಮಾನ ನಿಲ್ದಾಣದಲ್ಲಿ ಈ ಪರೀಕ್ಷೆ ನಡೆಸಲು ಆರೋಗ್ಯ ನಿರೀಕ್ಷಣಾಧಿಕಾರಿಗಳನ್ನು ನಿಯೋಜಿಸಲು ಸೂಚಿಸಲಾಗಿದೆ’ ಎಂದು ಹೇಳಿದ್ದಾರೆ.

### ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

12,21,371 ▲ ಒಟ್ಟು ಸೋಂಕಿತರು

| 12,376 ▲ | 11,93,213 ▲ | 15,781 ▲ |
|---|---|---|
| ಸಕ್ರಿಯ ಪ್ರಕರಣ | ಗುಣಮುಖ ಆದವರು | ಒಟ್ಟು ಸಾವು |

ಶುಕ್ರವಾರದ ಏರಿಕೆ

| | |
|---|---|
| ಹೊಸ ಪ್ರಕರಣ | 411 ▼ |
| ಗುಣಮುಖ | 549 ▲ |
| ಸಾವು | 10 |

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

# ಲಸಿಕೆ ವಿತರಣೆಯಲ್ಲಿ ತಾರತಮ್ಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ವಿತರಣೆಯಲ್ಲಿ ತಾರತಮ್ಯ ನಡೆಯುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು ಆಸ್ಪತ್ರೆ ಎದುರು ಪ್ರತಿಭಟನೆ ನಡೆಸಿದರು.

‘ಸ್ಥಳೀಯ ರಾಜಕೀಯ ಮುಖಂಡರು ಹಾಗೂ ಕಮಿಟಿ ಸದಸ್ಯರು ತಮಗೆ ಬೇಕಾದವರಿಗೆ ಆಸ್ಪತ್ರೆಯಲ್ಲಿ ಲಸಿಕೆ ಪಡೆಯಲು ಟೋಕನ್ ವಿತರಿಸುತ್ತಿದ್ದಾರೆ. ಲಸಿಕೆ ವಿಚಾರದಲ್ಲಿ ವೈದ್ಯರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ’ ಎಂದು ಕೆ.ಆರ್.ಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ದೂರಿದರು.



ಕೆ.ಆರ್.ಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ನೇತೃತ್ವದಲ್ಲಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು

‘ಲಸಿಕೆಗಾಗಿ ಬೆಳಿಗ್ಗೆಯಿಂದ ಸಾಲುಗಟ್ಟಿ ನಿಲ್ಲುವವರಿಗೆ ಟೋಕನ್ ನೀಡದೆ ತಾರತಮ್ಯ ಮಾಡಲಾಗುತ್ತಿದೆ. ಕಾಳಸಂತೆಯಲ್ಲಿ ₹500ರಿಂದ ₹1 ಸಾವಿರದವರೆಗೆ ಟೋಕನ್ ಮಾರಾಟ ಮಾಡಲಾಗುತ್ತಿದೆ. ಲಸಿಕೆ ಅಭಿಯಾನದ ದುರುಪಯೋಗವಾಗುತ್ತಿದೆ’ ಎಂದು ಆರೋಪಿಸಿದರು.

‘ಲಸಿಕೆ ವಿಚಾರದಲ್ಲಿ ಈ ಅವ್ಯವಸ್ಥೆ ಸರಿಪಡಿಸಬೇಕು. ಟೋಕನ್ ವ್ಯವಸ್ಥೆಯಲ್ಲಿನ ಅವ್ಯವಹಾರ ನಿಲ್ಲಬೇಕು. ಈ ಬಗ್ಗೆ ಸಂಬಂಧಪಟ್ಟ ಕ್ಷೇತ್ರದ ಶಾಸಕರು, ಅಧಿಕಾರಿಗಳು ಗಮನ ಹರಿಸಬೇಕು. ಇಲ್ಲದಿದ್ದರೆ, ಹೋರಾಟ ಮುಂದುವರಿಸಲಾಗುವುದು’ ಎಂದು ಎಚ್ಚರಿಸಿದರು.

ಆಸ್ಪತ್ರೆಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ವಿ.ಸಿ.ರೆಡ್ಡಿ, ‘ಜನಜಂಗುಳಿ ತಡೆಯುವ ಉದ್ದೇಶದಿಂದ ಪಾರದರ್ಶಕವಾಗಿ ಟೋಕನ್ ವಿತರಣೆ ನಡೆಯುತ್ತಿದೆ’ ಎಂದರು.

# ಬಿಬಿಎಂಪಿ ಚುನಾವಣಾ ಸಿದ್ಧತೆ

## ಡಿಕೆಶಿ ನಿವಾಸದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡರ ಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಸಂಬಂಧ ಪಕ್ಷದ ಹಿರಿಯ ನಾಯಕರು, ನಗರದ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು ಮತ್ತು ವಿಧಾನಸಭಾ ಚುನಾವಣೆಯ ಪರಾಜಿತ ಅಭ್ಯರ್ಥಿಗಳ ಜತೆ ಶುಕ್ರವಾರ ರಾತ್ರಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ ನಿವಾಸದಲ್ಲಿ ಸಭೆ ನಡೆಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಹಿರಿಯ ಮುಖಂಡ ಎಂ. ವೀರಪ್ಪ ಮೊಯಿಲಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಸಲೀಂ ಅಹ್ಮದ್, ಸಂಸದ ಡಿ.ಕೆ. ಸುರೇಶ್, ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಹಾಗೂ ಕಾಂಗ್ರೆಸ್‌ನ ಎಲ್ಲ ಶಾಸಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ವಿಧಾನ ಸಭೆಯ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದವರು, ಮಾಜಿ ಮೇಯರ್‌ಗಳೂ ಸಭೆಯಲ್ಲಿ ಭಾಗವಹಿಸಿದ್ದರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಿವಾಸದಲ್ಲಿ ಶುಕ್ರವಾರ ರಾತ್ರಿ ನಡೆದ ಸಭೆಯಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡ ಎಂ. ವೀರಪ್ಪ ಮೊಯಿಲಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು

ಬಿಬಿಎಂಪಿ ಚುನಾವಣೆಯು ವಿಳಂಬವಾಗಿರುವುದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆ, ಚುನಾವಣೆಗೆ ಆದೇಶ ಬಂದರೆ ಮಾಡಿಕೊಳ್ಳಬೇಕಾದ ಸಿದ್ಧತೆ, ಪಾಲಿಕೆ ವ್ಯಾಪ್ತಿಯಲ್ಲಿ ಪಕ್ಷ ಸಂಘಟನಾ ಕಾರ್ಯಕ್ರಮಗಳ ಆಯೋಜನೆ ಸೇರಿದಂತೆ ಹಲವು ವಿಷಯಗಳ ಕುರಿತು ಮುಖಂಡರು ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

### ಹಿಂದೂಗಳ ಪ್ರಾಬಲ್ಯ ಅಚಲವಾಗಿರಬೇಕು: ವಿಎಚ್‌ಪಿ

**ನವದೆಹಲಿ (ಪಿಟಿಐ):** ಜನಸಂಖ್ಯೆ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಳ್ಳುವಾಗ ದೇಶದಲ್ಲಿ ಹಿಂದೂಗಳ ಪ್ರಾಬಲ್ಯ ಅಚಲವಾಗಿ ಇರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಶುಕ್ರವಾರ ಹೇಳಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ವಿಎಚ್‌ಪಿ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ, ಒಂದು ಕುಟುಂಬದಲ್ಲಿ ಕೇವಲ ಒಂದು ಮಗು ಮಾತ್ರ ಇದ್ದರೆ ಹಿಂದೂಗಳ ಜನಸಂಖ್ಯೆಯು ಹಿಂದೂಗಳಿಂದಲೇ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

‘ನಾವು ಜನಸಂಖ್ಯಾ ನಿಯಂತ್ರಣದ ಬಗ್ಗೆ ಚರ್ಚಿಸುವಾಗ, ದೇಶದಲ್ಲಿ ಹಿಂದೂ ಸಮಾಜದ ಪ್ರಾಬಲ್ಯವು ಅಚಲವಾಗಿರಬೇಕು. ಹಿಂದೂಗಳಿಂದ ದೇಶದಲ್ಲಿ ರಾಜಕೀಯ, ಜಾತ್ಯತೀತತೆ, ಸಹಿಷ್ಣುತೆ ಸೇರಿದಂತೆ ಎಲ್ಲ ತತ್ವಗಳನ್ನು ಪಾಲಿಸಲಾಗುತ್ತಿದೆ’ ಎಂದು ಹೇಳಿದರು.

ಅದೇ ಹೊತ್ತಿಗೆ ದೇಶದಲ್ಲಿ ಹಿಂದೂಗಳ ಪ್ರಾಬಲ್ಯವನ್ನು ಖಚಿತಪಡಿಸಬೇಕಿದೆ ಎಂದವರು ಪ್ರತಿಪಾದಿಸಿದರು.

# ಮೆಟ್ರೊ: ಕೆಂಗೇರಿ ಮಾರ್ಗ ಪರಿಶೀಲನೆ 23ಕ್ಕೆ?

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ‘ನಮ್ಮ ಮೆಟ್ರೊ’ ಎರಡನೇ ಹಂತದ ಬಹುನಿರೀಕ್ಷಿತ ಮೈಸೂರು ರಸ್ತೆ ವಿಸ್ತರಿತ ಮಾರ್ಗದ ಪರಿಶೀಲನೆಗೆ ಇದೇ 23 ಮತ್ತು 24ರಂದು ರೈಲ್ವೆ ಸುರಕ್ಷತಾ ಆಯುಕ್ತರ ತಂಡವು (ಸಿಎಂಆರ್‌ಎಸ್) ಭೇಟಿ ನೀಡುವ ಸಾಧ್ಯತೆ ಇದೆ.

ಉದ್ದೇಶಿತ ಮಾರ್ಗದ ಪರೀಕ್ಷಾರ್ಥ ಸಂಚಾರ ಈಗಾಗಲೇ ಪೂರ್ಣಗೊಂಡಿದ್ದು, ಪರಿಶೀಲನೆಗಾಗಿ ಬೆಂಗಳೂರು ಮೆಟ್ರೊ ನಿಗಮವು ಸಿಎಂಆರ್‌ಎಸ್ ಇತ್ತೀಚೆಗೆ ಆಹ್ವಾನ ನೀಡಿತ್ತು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳ ತಂಡವು 23ರಂದು ಭೇಟಿ ನೀಡಲಿದೆ ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಎಂಆರ್‌ಸಿಎಲ್‌ನ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ ಚೌಹಾಣ್, ‘ಸಿಎಂಆರ್‌ಎಸ್ ತಂಡ ಭೇಟಿ ನೀಡುವ ಸಂಬಂಧ ಇದುವರೆಗೆ ಯಾವುದೇ ದಿನಾಂಕ ನಿಗದಿಯಾಗಿಲ್ಲ. ಆದರೆ, ಈಗಾಗಲೇ ಆಹ್ವಾನ ನೀಡಿದ್ದು, ತಂಡವು ಶೀಘ್ರದಲ್ಲಿಯೇ ಪರಿಶೀಲನೆಗೆ ಬರಬಹುದು’ ಎಂದು ಸ್ಪಷ್ಟಪಡಿಸಿದರು.

ಸಿಎಂಆರ್‌ಎಸ್ ತಂಡ ಬಂದು ಪರಿಶೀಲನೆ ನಡೆಸಿ, ಸಮ್ಮತಿ ಸೂಚಿಸಿದ ನಂತರವೇ ಈ ಮೆಟ್ರೊ ರೈಲು ಮಾರ್ಗವು ಸಾರ್ವಜನಿಕ ಸಂಚಾರಕ್ಕೆ ಮುಕ್ತವಾಗಲಿದೆ.

ನಾಯಂಡಹಳ್ಳಿಯಿಂದ ಕೆಂಗೇರಿಯವರೆಗಿನ 7.53 ಕಿ.ಮೀ. ಉದ್ದದ ಈ ವಿಸ್ತರಿತ ಮಾರ್ಗದಲ್ಲಿ ಒಟ್ಟು ಆರು ನಿಲ್ದಾಣಗಳು ಹಾಗೂ ವಾಹನ ನಿಲುಗಡೆ ಸ್ಥಳಗಳು ಬರಲಿವೆ.

### ಸಿಧುಗೆ ಅಧ್ಯಕ್ಷ ಸ್ಥಾನ ನೀಡುವುದಕ್ಕೆ ಅಮರಿಂದರ್ ಸಿಂಗ್ ವಿರೋಧ

**ಚಂಡೀಗಡ (ಪಿಟಿಐ):** ಪಂಜಾಬ್‌ನ ಕಾಂಗ್ರೆಸ್ ಘಟಕದ ಅಧ್ಯಕ್ಷರನ್ನಾಗಿ ನವಜೋತ್ ಸಿಂಗ್ ಸಿಧು ಅವರನ್ನು ನೇಮಿಸಲಾಗುತ್ತದೆ ಎಂಬ ಮಾತುಗಳು ಕೇಳಿಬರುತ್ತಿರುವ ಬೆನ್ನಲ್ಲೇ, ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ ಎಂದು ತಿಳಿದು ಬಂದಿದೆ.

‘ಹಳಬರನ್ನು ಕಡೆಗಣಿಸಿದರೆ ಮುಂಬರುವ ಚುನಾವಣೆಯಲ್ಲಿ ಪಕ್ಷದ ಭವಿಷ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತದೆ,’ ಎಂಬುದಾಗಿ ಸಿಂಗ್ ಅವರು ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಮತ್ತೊಂದೆಡೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಪಂಜಾಬ್ ಉಸ್ತುವಾರಿ ಹರೀಶ್ ರಾವತ್ ಅವರು ಶನಿವಾರ ಚಂಡೀಗಡದಲ್ಲಿ ಅಮರಿಂದರ್ ಸಿಂಗ್ ಅವರನ್ನು ಭೇಟಿ ಮಾಡುವ ಸಾಧ್ಯತೆ ಇದೆ.

ಸಿಧು ಅವರನ್ನು ಪಂಜಾಬ್‌ನ ಕಾಂಗ್ರೆಸ್ ಮುಖ್ಯಸ್ಥರನ್ನಾಗಿ ನೇಮಕ ಮಾಡುವ ಸಾಧ್ಯತೆ ಇದೆ ಎಂದು ಗುರುವಾರ ವರದಿಗಳಾಗಿದ್ದವು. ಇವರ ಜೊತೆಗೆ ಒಬ್ಬ ದಲಿತ, ಹಿಂದುಳಿದ ವರ್ಗದ ಮತ್ತೊಬ್ಬರನ್ನು ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತದೆ ಎನ್ನಲಾಗಿತ್ತು.

**ನವದೆಹಲಿ ವರದಿ:** ಪಂಜಾಬ್ ಕಾಂಗ್ರೆಸ್‌ನಲ್ಲಿ ಆಂತರಿಕ ಬಿಕ್ಕಟ್ಟು ಮುಂದುವರಿದಿದ್ದು, ಈ ನಡುವೆ ಮಾಜಿ ಸಚಿವ ನವಜೋತ್ ಸಿಂಗ್ ಸಿಧು ಶುಕ್ರವಾರ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಇಲ್ಲಿ ಭೇಟಿಯಾಗಿದ್ದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತು ಪಂಜಾಬ್‌ನಲ್ಲಿನ ಪಕ್ಷದ ಉಸ್ತುವಾರಿ ಹರೀಶ್ ರಾವತ್ ಈ ವೇಳೆ ಹಾಜರಿದ್ದರು ಎಂದು ಮೂಲಗಳು ತಿಳಿಸಿವೆ.



ಎಸ್ಸೆಸ್ಸೆಲ್ಸಿ ಪರೀಕ್ಷೆ ಇದೇ 19ರಂದು ನಡೆಯಲಿದ್ದು, ನಗರದ ಬಸವನಗುಡಿಯಲ್ಲಿರುವ ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆಯಲ್ಲಿ ಶಿಕ್ಷಕರು ಡೆಸ್ಕ್‌ಗಳ ಮೇಲೆ ನೋಂದಣಿ ಸಂಖ್ಯೆ ಬರೆಯುತ್ತಿದ್ದುದು ಶುಕ್ರವಾರ ಕಂಡು ಬಂತು – ಪ್ರಜಾವಾಣಿ ಚಿತ್ರ

# ಒತ್ತುವರಿ ತೆರವುಗೊಳಿಸಲು ವಾರದ ಗಡುವು

ಪ್ರಜಾವಾಣಿ ವಾರ್ತೆ

**ದಾಬಸ್ ಪೇಟೆ:** ರಾಜಕಾಲುವೆ, ಬಾವಿ, ಕಲ್ಯಾಣಿ ಇನ್ನಿತರ ಸರ್ಕಾರಿ ಆಸ್ತಿಗಳನ್ನು ಸ್ಥಳೀಯ ಕೆಲವು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದಾರೆ ಎಂಬ ದೂರಿನ ಆಧಾರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವಿಕುಮಾರ್ ಅವರು ತ್ಯಾಮಗೊಂಡ್ಲು ಪಟ್ಟಣಕ್ಕೆ ಶುಕ್ರವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕೆಲವು ಸ್ಥಳೀಯರು ಬೇನಾಮಿಯಾಗಿ ಕೆಲ ಪ್ರಭಾವಿಗಳೊಂದಿಗೆ ಶಾಮೀಲಾಗಿ ಸರ್ಕಾರದ ಆಸ್ತಿಯನ್ನು ಸಬ್ ಲೀಸ್ ನೀಡಿ ಹಣ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೆ, ಕೆಲವೆಡೆ ರಾಜಕಾಲುವೆ, ಬಾವಿ, ಕಲ್ಯಾಣಿ ಹಾಗೂ ದೇವಾಲಯದ ಇನಾಮ್ತಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಸ್ಥಳೀಯರು ದೂರು ನೀಡಿದರು. ಈ ಸಂಬಂಧ ಕೂಡಲೇ ಭೂ ಕಬಳಿಕೆದಾರರಿಗೆ ನೋಟಿಸ್ ನೀಡಿ ಒಂದು ವಾರದೊಳಗೆ ಒತ್ತುವರಿ ತೆರವುಗೊಳಿಸಬೇಕು ಎಂದು ತಹಶೀಲ್ದಾರ್‌ಗೆ ಸಿಇಒ ಸೂಚಿಸಿದರು.

ತ್ಯಾಮಗೊಂಡ್ಲು ಗ್ರಾಮ ಪಂಚಾಯಿತಿಯನ್ನು ಮೇಲ್ದರ್ಜೆಗೆ ತರುವ ನಿಟ್ಟಿನಲ್ಲಿ ವಾರದೊಳಗೆ ವ್ಯಾಪ್ತಿಯ ಜನಸಂಖ್ಯೆ, ಭೂಪ್ರದೇಶ ಮತ್ತು ಹಳ್ಳಿಗಳ ನಕ್ಷೆಯ ಸಹಿತ ಸಂಪೂರ್ಣ ಮಾಹಿತಿಯನ್ನು ಕಲೆಹಾಕಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದಾಗಿ ರವಿಕುಮಾರ್ ಹೇಳಿದರು. ತಹಶೀಲ್ದಾರ್ ಮಂಜುನಾಥ್, ಇಒ ಮೋಹನ್ ಕುಮಾರ್ ಸಹಾಯಕ ನಿರ್ದೇಶಕ ಪದ್ಮನಾಬ್ ಇದ್ದರು.

### ಸುದ್ದಿ 2 ನಿಮಿಷ

## ಶಿಕ್ಷಣ ಸಂಸ್ಥೆಗಳಲ್ಲಿ ಮಾರ್ಗದರ್ಶನ ವ್ಯವಸ್ಥೆ: ದೊರೆಸ್ವಾಮಿ ಮೆಚ್ಚುಗೆ

**ಬೆಂಗಳೂರು:** ‘ಶಿಕ್ಷಣ ಸಂಸ್ಥೆಗಳಲ್ಲಿ ಮಾರ್ಗದರ್ಶನ ವ್ಯವಸ್ಥೆ (ಮೆಂಟರಿಂಗ್) ಅಳವಡಿಸಲು ರಾಜ್ಯ ಸರ್ಕಾರ ಕ್ರಮ ಕೈಗೊಂಡಿರುವುದು ಸ್ವಾಗತಾರ್ಹ’ ಎಂದು ರಾಜ್ಯ ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ಹೇಳಿದ್ದಾರೆ.



‘ಶಿಕ್ಷಣ ಸಂಸ್ಥೆಗಳಲ್ಲಿ ಈ ವ್ಯವಸ್ಥೆ ಅಳವಡಿಸಬೇಕು ಎಂದು ನಾನು ಸರ್ಕಾರಕ್ಕೆ ಶಿಫಾರಸು ಸಲ್ಲಿಸಿದ್ದೆ. ಈ ಕುರಿತು ಸರ್ಕಾರವು ಉನ್ನತ ಶಿಕ್ಷಣ ಪರಿಷತ್‌ಗೆ ಪತ್ರ ರವಾನಿಸಿದೆ’ ಎಂದು ಅವರು ತಿಳಿಸಿದ್ದಾರೆ.

‘ಕೋವಿಡ್‌ನಂತಹ ಸಾಂಕ್ರಾಮಿಕ ರೋಗಗಳು ಹಾಗೂ ನೈಸರ್ಗಿಕ ವಿಕೋಪಗಳಿಂದ ಶಿಕ್ಷಣ ಸಂಸ್ಥೆಗಳನ್ನು ನಿರ್ವಹಿಸಲಾಗದೆ ಇರುವ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ತಲುಪಲು ಈ ಮಾರ್ಗದರ್ಶನ ವ್ಯವಸ್ಥೆಯು ಮಹತ್ವದ ಪಾತ್ರ ನಿರ್ವಹಿಸುತ್ತದೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

## ಜಲಗಾಂವ್‌ನಲ್ಲಿ ವಿಮಾನ ಪತನ: ಬೆಂಗಳೂರಿನ ಪೈಲಟ್ ಸಾವು

**ಮುಂಬೈ:** ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಚೋಪ್ಡಾ ಬಳಿ ಶುಕ್ರವಾರ ತರಬೇತಿ ವಿಮಾನ ಪತನಗೊಂಡ ಪರಿಣಾಮ ಬೆಂಗಳೂರಿನ ಪೈಲಟ್ ನೂರುಲ್ ಅಮೀನ್ (28) ಮೃತಪಟ್ಟಿದ್ದಾರೆ.

ತರಬೇತಿ ಪಡೆಯುತ್ತಿದ್ದ ಮಹಿಳಾ ಪೈಲಟ್, ಮಧ್ಯ ಪ್ರದೇಶದ ಅನಿಷ್ಕಾ ಗುರ್ಜರ್ ಗಾಯಗೊಂಡಿದ್ದಾರೆ. ಇವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಗುರ್ಜರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಎರಡು ಆಸನಗಳ ಇಟಲಿ ನಿರ್ಮಿತ ತರಬೇತಿ ವಿಮಾನವು ಧುಲೆ ನಗರದ ಶಿರ್‌ಪುರದಲ್ಲಿರುವ ಎನ್‌ಎಂಐಎಂಎಸ್ ಅಕಾಡೆಮಿಗೆ ಸೇರಿದ್ದು ಎನ್ನಲಾಗಿದೆ. ವಿಮಾನವು ಶಿರ್‌ಪುರದಿಂದ ಟೇಕಾಫ್ ಆಗಿತ್ತು.

‘ನಾವು ಒಬ್ಬ ಪೈಲಟ್‌ನನ್ನು ಕಳೆದುಕೊಂಡಿದ್ದೇವೆ ಹಾಗೂ ತರಬೇತಿ ಪಡೆಯುತ್ತಿದ್ದ ಪೈಲಟ್ ಗಾಯಗೊಂಡಿದ್ದಾರೆ’ ಎಂದು ಎನ್‌ಎಂಐಎಂಎಸ್ ವಿಮಾನಯಾನ ತರಬೇತಿ ಸಂಸ್ಥೆಯ ನಿರ್ದೇಶಕ ಹಿತೇಶ್ ಪಟೇಲ್ ‘ಪ್ರಜಾವಾಣಿ’ಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿ ಟ್ವೀಟ್ ಮಾಡಿರುವ ನಾಗರಿಕ ವಿಮಾಯಾನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ತನಿಖಾ ತಂಡ ಸ್ಥಳಕ್ಕೆ ತೆರಳಿದೆ ಎಂದು ತಿಳಿಸಿದ್ದಾರೆ.

ವಿಮಾನ ಪತನಕ್ಕೆ ಕಾರಣ ಏನೆಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ.

### ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

| | ವಿಶ್ವ | ಭಾರತ |
|---|---|---|
| ಒಟ್ಟು ಪ್ರಕರಣ | 19 ಕೋಟಿ ▼ | 3.10 ಕೋಟಿ |
| ಸಕ್ರಿಯ ಪ್ರಕರಣ | 1.26 ಕೋಟಿ ▲ | 4.19 ಲಕ್ಷ ▼ |
| ಗುಣಮುಖ | 17.33 ಕೋಟಿ ▲ | 3.02 ಕೋಟಿ ▲ |
| ಸಾವು | 40.87 ಲಕ್ಷ ▲ | 4.13 ಲಕ್ಷ ▲ |

ದಿನದ ಮಾಹಿತಿ

| | ವಿಶ್ವ | ಭಾರತ |
|---|---|---|
| ಹೊಸ ಪ್ರಕರಣ | 5.63 ಲಕ್ಷ ▲ | 35,775 ▼ |
| ಗುಣಮುಖ | 3.54 ಲಕ್ಷ ▼ | 40,527 ▲ |
| ಸಾವು | 8,584 ▼ | 534 ▼ |

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

| ಬ್ರೆಜಿಲ್ | ಬ್ರಿಟನ್ | ಅಮೆರಿಕ |
|---|---|---|
| 52,789 ▼ | 48,354 ▲ | 36,674 |

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

| ಅಮೆರಿಕ | ಬ್ರೆಜಿಲ್ | ಬ್ರಿಟನ್ |
|---|---|---|
| 49.21 ▲ | 8.06 ▼ | 7.71 ▲ |

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

| | |
|---|---|
| ಮಹಾರಾಷ್ಟ್ರ | 1.26 ಲಕ್ಷ ▲ |
| ತಮಿಳುನಾಡು | 33,606 |
| ದೆಹಲಿ | 25,023 ▲ |

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

| | |
|---|---|
| ಮಹಾರಾಷ್ಟ್ರ | 61.97 ▲ |
| ಕೇರಳ | 31.30 ▲ |
| ತಮಿಳುನಾಡು | 25.28 |

ಪ್ರಜಾವಾಣಿ ಗ್ರಾಫಿಕ್ಸ್



ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಭೆಯನ್ನು ಟಿ.ಎ.ಶರವಣ ಉದ್ಘಾಟಿಸಿದರು. ಆರ್.ಪ್ರಕಾಶ್, ಇಮ್ರಾನ್ ಖಾನ್, ಕೆ.ಆರ್.ಪುರ ಘಟಕದ ಅಧ್ಯಕ್ಷ ಡಿ.ಎ.ಸುರೇಶ್ ಹಾಗೂ ಇತರರು ಇದ್ದರು.

## ‘ಪಕ್ಷಗಳ ವೈಫಲ್ಯ ಜನರಿಗೆ ತಿಳಿಸಿ’

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ‘ನಗರದಲ್ಲಿ ಜೆಡಿಎಸ್ ಪಕ್ಷವನ್ನು ಬೂತ್ ಮಟ್ಟದಲ್ಲಿ ಸಕ್ರಿಯವಾಗಿ ಬಲವರ್ಧನೆ ಮಾಡುವ ಮೂಲಕ ಪಕ್ಷ ಸಂಘಟನೆಗೆ ಒತ್ತು ನೀಡಲಾಗುವುದು’ ಎಂದು ಜೆಡಿಎಸ್ ಮುಖಂಡ ಟಿ.ಎ.ಶರವಣ ಹೇಳಿದರು.

ಕೆ.ಆರ್.ಪುರ ಕ್ಷೇತ್ರದ ಜೆಡಿಎಸ್ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

‘ಪಾಲಿಕೆ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸುವ ಕಾರ್ಯಕರ್ತರು ಈಗಿನಿಂದಲೇ ತಯಾರಿ ನಡೆಸಬೇಕು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ವೈಫಲ್ಯವನ್ನು ಜನರಿಗೆ ತಿಳಿಸುವ ಕಾರ್ಯ ಮಾಡಬೇಕು. ಎಲ್ಲ ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿ, ಎಚ್.ಡಿ.ಕುಮಾರಸ್ವಾಮಿ ಅವರಿಗೆ ಬಲ ತುಂಬಬೇಕು. ಜೆಡಿಎಸ್ ಪಕ್ಷ ಗೆದ್ದರೆ ರಾಜ್ಯದಲ್ಲಿ ಪಕ್ಷ ಗೆಲುವು ಸಾಧಿಸಿದಂತೆ’ ಎಂದು ಹೇಳಿದರು.

ಬೆಂಗಳೂರು ನಗರ ಜೆಡಿಎಸ್ ಅಧ್ಯಕ್ಷ ಆರ್.ಪ್ರಕಾಶ್,‘ಕೊರೊನಾ ವೇಳೆಯಲ್ಲಿ ಬಡವರಿಗೆ ಲಸಿಕೆ, ಆಹಾರ ಧಾನ್ಯಗಳ ಪೂರೈಕೆ, ಊಟ ವಿತರಿಸಿ ಜನರ ಕಷ್ಟಗಳಿಗೆ ಸ್ಪಂದಿಸುವ ಗುಣವನ್ನು ಕಾರ್ಯಕರ್ತರು ಮಾಡಿದ್ದಾರೆ’ ಎಂದರು.

ಶನಿವಾರ, ಜುಲೈ 17, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 198 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



**ಭೂಮಿಕಾ**
ಭಾರತದಲ್ಲಿ 'ಮಗುಮುಕ್ತ ಜೀವನಶೈಲಿ' ನಿಧಾನವಾಗಿ ಮುಂಚೂಣಿಗೆ ಬರುತ್ತಿದೆ. ಹಾಗಾದರೆ ಇದರ ಉದ್ದೇಶವೇನು?

**ಚರ್ಚೆ** ಜನಪ್ರಿಯ ಸಿನಿಮಾ ನಟರು ಮೃತಪಟ್ಟ ಬಳಿಕ ಅವರ ಹೆಸರಿನಲ್ಲಿ ಸರ್ಕಾರವೇ ಸ್ಮಾರಕ ನಿರ್ಮಿಸಬೇಕೇ? 11

ಜಗತ್ತಿನ ಹಲವೆಡೆ ಕೋವಿಡ್ ಮೂರನೇ ಅಲೆ 8

ದೆಹಲಿ ಭೇಟಿ: ಗುಟ್ಟು ಬಿಟ್ಟುಕೊಡದ ಬಿಎಸ್‌ವೈ 4

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 53,140 ▼ | 15,923 ▼ | ₹49,900 (ಬೆಂಗಳೂರು) | ₹71,200 (ಬೆಂಗಳೂರು) | 74.57 ▼ |

ಆರು ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಭೆಯಲ್ಲಿ ಪ್ರಧಾನಿ ಸೂಚನೆ

# 3ನೇ ಅಲೆ ತಡೆಗೆ ಯತ್ನಿಸಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್‌ನ ಸಂಭಾವ್ಯ ಮೂರನೇ ಅಲೆಯನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಿ ಎಂದು ಈ ಸಾಂಕ್ರಾಮಿಕದಿಂದ ಅತಿ ಹೆಚ್ಚು ತೊಂದ



ರೆಗೆ ಒಳಗಾಗಿರುವ ಆರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಸೂಚಿಸಿದ್ದಾರೆ.

ತಮಿಳನಾಡು, ಆಂಧ್ರ ಪ್ರದೇಶ, ಕರ್ನಾಟಕ, ಒಡಿಶಾ, ಮಹಾರಾಷ್ಟ್ರ ಮತ್ತು ಕೇರಳದ ಮುಖ್ಯಮಂತ್ರಿಗಳ ಜತೆಗೆ ಪ್ರಧಾನಿ ವಿಡಿಯೊ ಕಾನ್ಫರೆನ್ಸ್ ನಡೆಸಿದ್ದಾರೆ. ಈ ರಾಜ್ಯಗಳಲ್ಲಿ ದೇಶದ ಶೇ 80ರಷ್ಟು ಹೊಸ ಪ್ರಕರಣಗಳು ಕಳೆದ ವಾರ ವರದಿಯಾಗಿವೆ ಎಂದು ಪ್ರಧಾನಿ ಹೇಳಿದ್ದಾರೆ.

ತಮ್ಮ ರಾಜ್ಯಗಳ ಆರೋಗ್ಯ ವ್ಯವಸ್ಥೆಯಲ್ಲಿನ ಲೋಪ ಸರಿಪಡಿಸಲು ₹23 ಸಾವಿರ ಕೋಟಿಯ ಕೋವಿಡ್ ತುರ್ತು ಪ್ರತಿಸ್ಪಂದನಾ ನಿಧಿಯನ್ನು ಬಳಸಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದ್ದಾರೆ.

'ಎರಡನೇ ಅಲೆ ಶುರುವಾದ ರಾಜ್ಯಗಳಲ್ಲಿಯೇ ಮೊದಲಿಗೆ ಸಾಂಕ್ರಾಮಿಕವು ನಿಯಂತ್ರಣಕ್ಕೆ ಬರಬಹುದು ಎಂದು ಪರಿಣತರು ಅಂದಾಜಿಸಿದ್ದರು. ಆದರೆ, ಮಹಾರಾಷ್ಟ್ರ ಮತ್ತು ಕೇರಳದಲ್ಲಿ ಪ್ರಕರಣಗಳು ಹೆಚ್ಚುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

## '30ಗಳಿಗೆ 1.5 ಕೋಟಿ ಡೋಸ್ ಲಸಿಕೆ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಯ ಅಭಾವ ತೀವ್ರವಾಗಿದ್ದು, ಪ್ರತಿ ತಿಂಗಳು ಕನಿಷ್ಠ 1.5 ಕೋಟಿ ಡೋಸ್‌ಗಳಷ್ಟು ಲಸಿಕೆ ಪೂರೈಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬೇಡಿಕೆ ಸಲ್ಲಿಸಿದರು.

ಕೋವಿಡ್–19 ನಿಯಂತ್ರಣ ಕುರಿತು ಪ್ರಧಾನಿ ಶುಕ್ರವಾರ ನಡೆಸಿದ ವಿಡಿಯೊ ಕಾನ್ಫರೆನ್ಸ್‌ನಲ್ಲಿ ಪಾಲ್ಗೊಂಡಿದ್ದ ಅವರು, 'ಈವರೆಗೆ ರಾಜ್ಯದಲ್ಲಿ 2.62 ಕೋಟಿ ಡೋಸ್‌ಗಳಷ್ಟು ಲಸಿಕೆಯನ್ನು ನೀಡಲಾಗಿದೆ. ಮುಂದಿನ ದಿನಗಳಲ್ಲಿ ನಿತ್ಯ ಐದು ಲಕ್ಷ ಡೋಸ್‌ಗಳಂತೆ ತಿಂಗಳಿಗೆ ಕನಿಷ್ಠ 1.5 ಕೋಟಿ ಡೋಸ್ ಲಸಿಕೆಯನ್ನು ರಾಜ್ಯಕ್ಕೆ ಹಂಚಿಕೆ ಮಾಡಬೇಕು' ಎಂದು ಮನವಿ ಮಾಡಿದರು.

ರಾಜ್ಯದಲ್ಲಿ ಹೊಸ ಕೋವಿಡ್ ಪ್ರಕರಣಗಳ ಸಂಖ್ಯೆಯ ಇಳಿಮುಖವಾಗಿದೆ. ಈಗ ದಿನಕ್ಕೆ ಸರಾಸರಿ 1,900 ಪ್ರಕರಣಗಳು ಮಾತ್ರ ಪತ್ತೆಯಾಗುತ್ತಿವೆ. ಬೆಂಗಳೂರಿನಲ್ಲಿ ನಿತ್ಯ



400 ಪ್ರಕರಣಗಳು ಮಾತ್ರ ವರದಿಯಾಗುತ್ತಿವೆ. ರಾಜ್ಯದಲ್ಲಿ ಪ್ರಕರಣಗಳ ದೃಢಪ್ರಮಾಣ ದರ ಶೇ 1.42 ಮತ್ತು ಮರಣ ಪ್ರಮಾಣ ಶೇ 1.25ಕ್ಕೆ ಇಳಿದಿದೆ ಎಂದು ಪ್ರಧಾನಿಗೆ ಮಾಹಿತಿ ನೀಡಿದರು.

ಕೋವಿಡ್ ಮೂರನೇ ಅಲೆ ಎದುರಿಸಲು ಕರ್ನಾಟಕ ಸಂಪೂರ್ಣವಾಗಿ ಸಜ್ಜಾಗಿದೆ. ಎಲ್ಲ ಹಂತದ ಆಸ್ಪತ್ರೆಗಳಲ್ಲಿ ಮಕ್ಕಳ ವಾರ್ಡ್‌ಗಳನ್ನು ಮೇಲ್ದರ್ಜೆಗೇರಿಸಿದ್ದು, ಆಮ್ಲಜನಕ ಸಹಿತ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ವೈದ್ಯರು, ಶುಶ್ರೂಷಕರು ಮತ್ತು ಇತರ ವೈದ್ಯಕೀಯ ಸಿಬ್ಬಂದಿ ಒದಗಿಸಲಾಗಿದೆ. ಆಸ್ಪತ್ರೆಗಳಿಗೆ ಅಗತ್ಯ ಯಂತ್ರೋಪಕರಣಗಳನ್ನೂ ಪೂರೈಸಲಾಗಿದೆ. ಹೊಸ ಆರ್‌ಟಿ–ಪಿಸಿಆರ್ ಮತ್ತು 'ಜಿನೋಮ್ ಸೀಕ್ವೆನ್ಸಿಂಗ್' ಪ್ರಯೋಗಾಲಯಗಳನ್ನು ಆರಂಭಿಸಲಾಗುತ್ತಿದೆ ಎಂದು ಯಡಿಯೂರಪ್ಪ ವಿವರಿಸಿದರು.

4ನೇ ಪುಟ ನೋಡಿ

### 100 ದಿನ ನಿರ್ಣಾಯಕ

ಭಾರತದಲ್ಲಿ ಕೋವಿಡ್ ಲಸಿಕೆ ಅಭಿಯಾನ ಆರಂಭವಾಗಿ ಇದು ಆರನೇ ತಿಂಗಳು. 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರ ಪೈಕಿ ಸುಮಾರು ಶೇ 50ರಷ್ಟು ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆಯನ್ನು ಈಗಾಗಲೇ ನೀಡಲಾಗಿದೆ ಎಂದು ನೀತಿ ಆಯೋಗದ ಸದಸ್ಯ ವಿ.ಕೆ. ಪಾಲ್ ಹೇಳಿದ್ದಾರೆ. ಸಂಭಾವ್ಯ ಮೂರನೇ ಅಲೆ ತೀವ್ರಗೊಳ್ಳುವುದನ್ನು ತಡೆಯಲು ಮುಂದಿನ ನೂರು ದಿನಗಳು ಅತ್ಯಂತ ಮುಖ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'45 ವರ್ಷದಿಂದ ಮೇಲಿನ ಸುಮಾರು ಶೇ 50ರಷ್ಟು ಜನರಿಗೆ ಲಸಿಕೆ ಹಾಕಲಾಗಿದೆ. ಇದು ಕೋವಿಡ್ ಮರಣ ಪ್ರಮಾಣ ತಗ್ಗಿಸಲಿದೆ. ಆದರೆ, ಕೆಲವು ರಾಜ್ಯಗಳು ಮತ್ತು ಜಿಲ್ಲೆಗಳಲ್ಲಿ ಸೋಂಕು ಹರಡುವಿಕೆ ವೇಗವಾಗಿಯೇ ಇರುವುದು ಕಳವಳಕಾರಿ' ಎಂದು ಅವರು ಹೇಳಿದ್ದಾರೆ.

45 ವರ್ಷಕ್ಕೆ ಮೇಲ್ಪಟ್ಟ 17 ಕೋಟಿಗೂ ಹೆಚ್ಚು ಜನರು ಲಸಿಕೆಯ ಕನಿಷ್ಠ ಒಂದು ಡೋಸ್ ಮತ್ತು ಆರು ಕೋಟಿ ಜನರು ಎರಡೂ ಡೋಸ್ ಹಾಕಿಸಿಕೊಂಡಿದ್ದಾರೆ. 60 ವರ್ಷ ದಾಟಿದವರಲ್ಲಿ ಶೇ 50ಕ್ಕೂ ಹೆಚ್ಚು ಜನರಿಗೆ ಲಸಿಕೆ ಹಾಕಿಸುವಿಕೆಯ ಮೈಲುಗಲ್ಲನ್ನು ಕಳೆದ ತಿಂಗಳೇ ಸಾಧಿಸಲಾಗಿದೆ. ಹೀಗಾಗಿ, ಕೋವಿಡ್‌ನಿಂದ ತೀವ್ರ ಸಮಸ್ಯೆಗೆ ಒಳಗಾಗುವ ಜನರ ಪ್ರಮಾಣವನ್ನು ಕಡಿಮೆಗೊಳಿಸಲಾಗಿದೆ ಎಂದು ಅವರು ವಿವರಿಸಿದ್ದಾರೆ.

## ವಿಧಾನಸೌಧ: ಮಾಧ್ಯಮಕ್ಕೆ ಇನ್ನಷ್ಟು ನಿರ್ಬಂಧ

ಬೆಂಗಳೂರು: ವಿಧಾನಸೌಧ ಆವರಣದಲ್ಲಿ ಮಾಧ್ಯಮಗಳ ನಿತ್ಯದ ಚಟುವಟಿಕೆಗಳ ಮೇಲಿನ ನಿರ್ಬಂಧವನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ. ಅಧಿವೇಶನ ಮಾತ್ರವಲ್ಲದೆ, ಇತರ ಸಂದರ್ಭಗಳಲ್ಲೂ ವಿಧಾನಸೌಧದ ಕಾರಿಡಾರ್‌ಗಳಲ್ಲಿ ಪತ್ರಿಕಾ ಛಾಯಾಗ್ರಾಹಕರು ಛಾಯಾಗ್ರಹಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ವಿಡಿಯೋ ಚಿತ್ರೀಕರಣ ನಡೆಸುವುದನ್ನು ಸಚಿವಾಲಯ ಸಂಪೂರ್ಣ ನಿರ್ಬಂಧಿಸಿದೆ. 4

ಧಾರ್ಮಿಕ ಆಚರಣೆಗಿಂತ ಬದುಕುವ ಹಕ್ಕು ಮುಖ್ಯ: 'ಸುಪ್ರೀಂ'

## ಕನ್ವರ್ ಯಾತ್ರೆ: ನಿರ್ಧಾರ ಬದಲಿಗೆ 19ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ಧಾರ್ಮಿಕ ಆಚರಣೆಗಳಿಗಿಂತಲೂ ದೇಶದ ನಾಗರಿಕರ ಬದುಕುವ ಹಕ್ಕು ಮುಖ್ಯ. ಹಾಗಾಗಿ, ಕನ್ವರ್ ಯಾತ್ರೆಗೆ ಅನುಮತಿ ನೀಡಿರುವ ನಿರ್ಧಾರವನ್ನು ಮರುಪರಿಶೀಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚಿಸಿದೆ.

ಈ ವಿಷಯವು ಧಾರ್ಮಿಕ ಭಾವನೆಗಳೂ ಸೇರಿದಂತೆ ದೇಶದ ಪ್ರತಿಯೊಬ್ಬರ ಭಾವನೆಗಳಿಗೆ ಸಂಬಂಧಿಸಿರುವುದರ ಜೊತೆಗೆ ಅವರೆಲ್ಲರ ಕಾಳಜಿಯ ವಿಷಯವೂ ಆಗಿದೆ. ಹೀಗಾಗಿ, ಕೋವಿಡ್–19ರ ಸಂಭಾವ್ಯ ಮೂರನೇ ಅಲೆಯ ಆತಂಕದ ನಡುವೆಯೂ ಯಾತ್ರೆ ನಡೆಸಲು ಅನುಮತಿ ನೀಡಿರುವ ನಿರ್ಧಾರವನ್ನು ಪುನಃ ಪರಿಶೀಲಿಸಬೇಕು. ಇಲ್ಲದೇ ಹೋದಲ್ಲಿ, ನ್ಯಾಯಾಲಯವೇ ಈ ಬಗ್ಗೆ ಸೋಮವಾರ ಆದೇಶ ಹೊರಡಿಸಲಿದೆ ಎಂದು ನ್ಯಾಯಮೂರ್ತಿಗಳಾದ ಆರ್.ಎಫ್ ನರಿಮನ್ ಹಾಗೂ ಬಿ.ಆರ್. ಗವಾಯಿ ಅವರ ನ್ಯಾಯಪೀಠ ಸೂಚನೆ ನೀಡಿತು.



ಯಾತ್ರೆಯನ್ನು ಸಾಂಕೇತಿಕವಾಗಿ ಮಾತ್ರ ನಡೆಸಲು ಉದ್ದೇಶಿಸಿರುವುದಾಗಿ ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಹಿರಿಯ ವಕೀಲ ಸಿ.ಎಸ್. ವೈದ್ಯನಾಥನ್ ನ್ಯಾಯಾಲಯಕ್ಕೆ ತಿಳಿಸಿದರು. ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರವು ಈ ಬಗ್ಗೆ ಸಾಕಷ್ಟು ವಿಚಾರ–ವಿಮರ್ಶೆ ನಡೆಸಿದ್ದು, ಧಾರ್ಮಿಕ ಕಾರಣಗಳಿಂದಾಗಿ ಯಾರೋ ಒಬ್ಬರು ಯಾತ್ರೆ ನಡೆಸಲು ನಿರ್ಧರಿಸಿದರೆ, ಅಂಥವರು ಆರ್‌ಟಿ–ಪಿಸಿಆರ್ ಪರೀಕ್ಷೆಯ ನೆಗೆಟಿವ್ ವರದಿ ಹೊಂದಿರಬೇಕು. ಜೊತೆಗೆ ಎರಡೂ ಡೋಸ್ ಲಸಿಕೆ ಪಡೆದಿರಬೇಕು ಎಂಬ ನಿರ್ಣಯಕ್ಕೆ ಬಂದಿರುವುದಾಗಿ ಮಾಹಿತಿ ನೀಡಿದರು.

ಉತ್ತರ ಪ್ರದೇಶ ಸರ್ಕಾರವು ಭೌತಿಕವಾಗಿ ಯಾತ್ರೆ ನಡೆಸಲು ಸಾಧ್ಯವೇ ಇಲ್ಲ. ಇದು ಶೇಕಡ ನೂರರಷ್ಟು ನಿಜ ಎಂದು ನ್ಯಾಯಪೀಠ ಹೇಳಿದೆ.

ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಉತ್ತರ ಪ್ರದೇಶ ಸರ್ಕಾರವು ಕನ್ವರ್ ಯಾತ್ರೆಗೆ ಅನುಮತಿ ನೀಡಿರುವುದರಿಂದ, ಈ ಬಗ್ಗೆ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತವಾಗಿ ಮೊಕದ್ದಮೆ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಶಿವಭಕ್ತರು, ಗಂಗಾನದಿಯ ವಿವಿಧ ಸ್ನಾನಘಟ್ಟಗಳಲ್ಲಿ ಪವಿತ್ರ ಸ್ನಾನ ಮಾಡಲಿರುವ ಈ ಕನ್ವರ್ ಯಾತ್ರೆ ಜುಲೈ 25ರಿಂದ ಆಗಸ್ಟ್ 6ರವರೆಗೆ ನಡೆಯಲಿದೆ.

ಈ ಬಗ್ಗೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರವೊಂದರಲ್ಲಿ, ದೇವಾಲಯಗಳಲ್ಲಿ ಪೂಜೆ ಸಲ್ಲಿಸುವುದಕ್ಕಾಗಿ ಗಂಗಾಜಲ ತರಲು ಭಕ್ತರಿಗೆ ಹರಿದ್ವಾರದ ಪ್ರವೇಶ ನೀಡುವುದಿಲ್ಲ. ಸಂಪ್ರದಾಯ ಪಾಲನೆಗಾಗಿ ಹಾಗೂ ಭಕ್ತರ ಧಾರ್ಮಿಕ ಭಾವನೆಗಳನ್ನು ಗೌರವಿಸುವುದಕ್ಕಾಗಿ ವಿವಿಧ ಪ್ರದೇಶಗಳಲ್ಲಿ ಟ್ಯಾಂಕರ್ ಮೂಲಕ ಗಂಗಾಜಲ ಪೂರೈಸುವ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿತ್ತು.

**ಒಳ ಪುಟ**

ಮಳೆ: ಹಳಿ ಮೇಲೆ ಮಣ್ಣು ಕುಸಿತ- ರೈಲು ಸಂಚಾರ ಸ್ಥಗಿತ 7

**ರಾಜ್ಯ ಕೋವಿಡ್ ಅಂಕಿ–ಅಂಶ**

| | |
|---|---|
| 28,80,370 ▲ | ಒಟ್ಟು ಸೋಂಕಿತರು (28,78,564 ನಿನ್ನೆಯ ವಿವರ) |
| 31,399 ▼ | ಸಕ್ರಿಯ ಪ್ರಕರಣಗಳು |
| 28,12,869 ▲ | ಗುಣಮುಖರಾದವರು |
| 36,079 ▲ | ಒಟ್ಟು ಸಾವು |

**ದಿನದ ಏರಿಕೆ**

| | |
|---|---|
| ಹೊಸ ಪ್ರಕರಣ | 1,806 ▼ |
| ಗುಣಮುಖ | 2,748 ▼ |
| ಸಾವು | 42 ▼ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

## ಅಫ್ಗಾನಿಸ್ತಾನ: ಭಾರತ ಮೂಲದ ಫೋಟೊ ಜರ್ನಲಿಸ್ಟ್ ಸಿದ್ದಿಕಿ ಹತ್ಯೆ

ಕಾಬೂಲ್ (ಪಿಟಿಐ): ಅಫ್ಗನ್ ಸೇನೆ ಮತ್ತು ತಾಲಿಬಾನಿಗಳ ನಡುವೆ ಸಂಘರ್ಷ ನಡೆಯುತ್ತಿರುವ ಪ್ರದೇಶಗಳ ಸ್ಥಿತಿಗತಿ ಕುರಿತು ವರದಿ ಮಾಡಲು ಅಫ್ಗಾನಿಸ್ತಾನಕ್ಕೆ ತೆರಳಿದ್ದ ಭಾರತ ಮೂಲದ ಫೋಟೊ ಜರ್ನಲಿಸ್ಟ್ ಡ್ಯಾನಿಷ್ ಸಿದ್ದಿಕಿ (40) ಗುರುವಾರ ರಾತ್ರಿ ಹತ್ಯೆಯಾಗಿದ್ದಾರೆ.



ಡ್ಯಾನಿಷ್ ಸಿದ್ದಿಕಿ

ಮುಂಬೈನವರಾದ ಸಿದ್ದಿಕಿ, ರಾಯಿಟರ್ಸ್ ಸುದ್ದಿಸಂಸ್ಥೆಯ ಉದ್ಯೋಗಿಯಾಗಿದ್ದರು. ಅವರು ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಗೂ ಭಾಜನರಾಗಿದ್ದರು.

'ಕಂದಹಾರ್‌ನ ಸ್ಪಿನ್ ಬೋಲ್ಡಾಕ್ ಜಿಲ್ಲೆಯಲ್ಲಿ ಅಫ್ಗನ್ ಸೇನೆ ಮತ್ತು ತಾಲಿಬಾನಿಗಳ ನಡುವಿನ ಭೀಕರ ಕದನದ ದೃಶ್ಯವನ್ನು ಸೆರೆಹಿಡಿಯಲು ಅವರು ತೆರಳಿದ್ದರು' ಎಂದು ಮೂಲಗಳನ್ನು ಉಲ್ಲೇಖಿಸಿ 'ಟೊಲೊ ನ್ಯೂಸ್' ವರದಿ ಮಾಡಿದೆ.

ಅಫ್ಗಾನಿಸ್ತಾನದ ಸ್ಪಿನ್ ಬೋಲ್ಡಾಕ್ ಜಿಲ್ಲೆಯನ್ನು ತಾಲಿಬಾನ್ ವಶಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ, ಕಳೆದ ಒಂದು ವಾರದಿಂದ ಅಫ್ಗನ್ ಸೇನೆ ಮತ್ತು ತಾಲಿಬಾನಿಗಳ ನಡುವೆ ತೀವ್ರ ಸಂಘರ್ಷ ನಡೆಯುತ್ತಿದೆ. ಕೆಲವು ದಿನಗಳ ಹಿಂದೆ ಯುದ್ಧಪೀಡಿತ ಕಂದಹಾರ್‌ನ ಪರಿಸ್ಥಿತಿ ಕುರಿತು ವರದಿ ಮಾಡಲು ಅವರು ತೆರಳಿದ್ದರು.

ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪದವಿ ಪಡೆದಿದ್ದ ಡ್ಯಾನಿಷ್ ಅವರು, 2007 ರಲ್ಲಿ ಜಾಮಿಯಾದ ಎಜೆಕೆ ಸಮೂಹ ಸಂವಹನ ಸಂಶೋಧನಾ ಕೇಂದ್ರದಿಂದ ಸಮೂಹ ಸಂವಹನ ವಿಷಯದಲ್ಲೂ ಪದವಿ ಪಡೆದಿದ್ದರು.

ಟಿವಿ ವಾಹಿನಿಯ ವರದಿಗಾರರಾಗಿ ವೃತ್ತಿ ಜೀವನ ಆರಂಭಿಸಿದ್ದ ಸಿದ್ದಿಕಿ, ನಂತರ ಫೋಟೊ ಜರ್ನಲಿಸ್ಟ್ ಆಗಿ ವೃತ್ತಿಯನ್ನು ಬದಲಿಸಿದರು. 2010 ರಲ್ಲಿ ರಾಯಿಟರ್ಸ್ ಸುದ್ದಿ ಸಂಸ್ಥೆಗೆ 'ಇಂಟರ್ನಿ'ಯಾಗಿ ಸೇರಿದ್ದ ಅವರು ನಂತರ ಅದೇ ಸಂಸ್ಥೆಯ ಛಾಯಾಗ್ರಾಹಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

**ಇಂದಿನ ಪಾಡ್‌ಕಾಸ್ಟ್ ವಿಶೇಷ**
ವಚನವಾಣಿ
ಪ್ರತೀ ದಿನ: ದಿನದ ಸೂಕ್ತಿ, ಸಂಪಾದಕೀಯ, ಪ್ರಚಲಿತ
Prajavani.net/podcast

**ಚಿನಕುರಳಿ**
ಪ್ರಕಾಶ್ ಶೆಟ್ಟಿ




## ದ್ವಿತೀಯ ಪಿಯು ಫಲಿತಾಂಶ 20ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶ ಇದೇ 20ರಂದು ಪ್ರಕಟವಾಗಲಿದ್ದು, ಎಲ್ಲ ವಿದ್ಯಾರ್ಥಿಗಳಿಗೆ ನೋಂದಣಿ ಸಂಖ್ಯೆಯ ಮಾಹಿತಿಯನ್ನು ಶುಕ್ರವಾರದಿಂದಲೇ ರವಾನಿಸಲಾಗುತ್ತಿದೆ.

ಪ್ರತಿ ವರ್ಷ ನಿರ್ದಿಷ್ಟ ನೋಂದಣಿ ಸಂಖ್ಯೆ ಬಳಸಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದರು. ಈ ಬಾರಿ ಪರೀಕ್ಷೆ ನಡೆಯದ ಕಾರಣ, ನೋಂದಣಿ ಸಂಖ್ಯೆಯನ್ನು ಪದವಿಪೂರ್ವ ಶಿಕ್ಷಣ ಇಲಾಖೆ ವೆಬ್‌ಸೈಟ್‌ನಿಂದ ಪಡೆದು, ಆ ಮೂಲಕ ಫಲಿತಾಂಶ ನೋಡಬಹುದು.

https://dpue-exam.karnataka.gov.in/iipu2021registrationnumber/regnumber ಈ ಲಿಂಕ್ ಬಳಸಿ ನೋಂದಣಿ ಸಂಖ್ಯೆ ಪಡೆಯಬಹುದು.

'ಹೊಸ ಮತ್ತು ಪುನರಾವರ್ತಿತ ವಿದ್ಯಾರ್ಥಿಗಳು ಫಲಿತಾಂಶ ವೀಕ್ಷಣೆಗೆ ನೋಂದಣಿ ಸಂಖ್ಯೆ ಪಡೆಯಬೇಕು. ಶುಕ್ರವಾರದಿಂದ ವಿದ್ಯಾರ್ಥಿಗಳು ಮತ್ತು ಸಂಬಂಧಪಟ್ಟ ಕಾಲೇಜುಗಳಿಗೆ ಸಂದೇಶ ರವಾನಿಸಲಾಗುತ್ತಿದೆ' ಎಂದು ಇಲಾಖೆಯ ನಿರ್ದೇಶಕಿ ಆರ್. ಸ್ನೇಹಲ್ ತಿಳಿಸಿದ್ದಾರೆ.

'ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮಾದರಿಯಲ್ಲಿ ಎಸ್ಸೆಸ್ಸೆಲ್ಸಿ, ಪ್ರಥಮ ಪಿಯುಸಿ ಅಂಕ ಪರಿಗಣಿಸಿ ಫಲಿತಾಂಶ ಪ್ರಕಟಿಸಲಾಗುತ್ತದೆ' ಎಂದೂ ಅವರು ಹೇಳಿದ್ದಾರೆ.

## ಎನ್‌ಎಸ್‌ಯುಐ ಅಧ್ಯಕ್ಷರಾಗಿ ಕೀರ್ತಿ ಗಣೇಶ್

ಬೆಂಗಳೂರು: ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆಯಾಗಿರುವ ಎನ್‌ಎಸ್‌ಯುಐನ ರಾಜ್ಯ ಘಟಕದ ನೂತನ ಅಧ್ಯಕ್ಷರನ್ನಾಗಿ ನಗರದ ಕೀರ್ತಿ ಗಣೇಶ್ ಎನ್.ಜಿ. ಅವರನ್ನು ನೇಮಕ ಮಾಡಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಬೆಂಗಳೂರಿನ ಜಯಂದರ್‌ಶಾಹಿ, ಬೆಳಗಾವಿಯ ಪ್ರಜ್ವಲ್ ಗೌಡರ್, ರಾಮನಗರದ ಪ್ರಖ್ಯಾತ್ ಎಂ.ಪಿ. ಅವರನ್ನು ಎನ್‌ಎಸ್‌ಯುಐ ರಾಜ್ಯ ಘಟಕದ ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ.





### ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಪಿ.ಪಿ.ವಾವ ಸೂಚನೆ

# ‘ಕಾಯಂ ಉದ್ಯೋಗಕ್ಕೆ ನೀತಿ ರೂಪಿಸಿ’

ಪ್ರಜಾವಾಣಿ ವಾರ್ತೆ



ಪಿ.ಪಿ. ವಾವ ನೇತೃತ್ವದಲ್ಲಿ ಶುಕ್ರವಾರ ಸಭೆ ನಡೆಯಿತು. ಗೌರವ್ ಗುಪ್ತ, ಹರೀಶ್‌ಕುಮಾರ್ ಮತ್ತಿತರ ಅಧಿಕಾರಿಗಳು ಇದ್ದರು

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಒಳಚರಂಡಿ ಮತ್ತು ಮಲವಿಸರ್ಜನೆ ಗುಂಡಿಗಳನ್ನು ಬರಿಗೈಯಲ್ಲಿ ಸ್ವಚ್ಛಗೊಳಿಸುತ್ತಿದ್ದವರು (ಮ್ಯಾನುಯಲ್ ಸ್ಕ್ಯಾವೆಂಜರ್ಸ್) ಈಗ ನಿರಾಶ್ರಿತರಾಗಿದ್ದಾರೆ. ಅವರ ಜೀವನೋಪಾಯಕ್ಕಾಗಿ ಹಾಲಿನ ಬೂತ್, ಹಾಪ್ ಕಾಮ್ಸ್ ಸೇರಿದಂತೆ ಮತ್ತಿತರ ಕಡೆಗಳಲ್ಲಿ ಕಾಯಂ ಉದ್ಯೋಗ ವ್ಯವಸ್ಥೆ ಮಾಡಿಕೊಡುವ ನಿಟ್ಟನಲ್ಲಿ ನೀತಿ ರೂಪಿಸಿ’ ಎಂದು ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯ ಡಾ. ಪಿ.ಪಿ.ವಾವ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಬಿಬಿಎಂಪಿ ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದ ಅವರು, ‘ಈ ಕಾರ್ಮಿಕರು, ಒಳಚರಂಡಿ ಅಥವಾ ಮಲವಿಸರ್ಜನೆ ಗುಂಡಿಗಳಲ್ಲಿ ಇಳಿಯುವುದನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. ಮೊದಲು ಈ ಕೆಲಸ ಮಾಡುತ್ತಿದ್ದವರ ಜೀವನೋಪಾಯಕ್ಕಾಗಿ ಸರ್ಕಾರದಿಂದಲೇ ವ್ಯವಸ್ಥೆ ಮಾಡಬೇಕು’ ಎಂದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 17 ಸಾವಿರ ಪೌರಕಾರ್ಮಿಕರು ನೇರ ವೇತನದಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಯಂ ಪೌರಕಾರ್ಮಿಕರನ್ನು ಹೊರತು ಪಡಿಸಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪಾಲಿಕೆಯಿಂದ ನೇರ ವೇತನ ವ್ಯವಸ್ಥೆಯಡಿ ತಿಂಗಳ 7ನೇ ತಾರೀಖಿನ ವೇಳೆಗೆ ವೇತನವನ್ನು ನೀಡಲಾಗುತ್ತಿದೆ’ ಎಂದರು.

‘ಪೌರಕಾರ್ಮಿಕರಿಗೆ ಸಮವಸ್ತ್ರವನ್ನು ನೀಡಲಾಗಿದ್ದು, ಸುರಕ್ಷಾ ಸಾಮಗ್ರಿಗಳನ್ನು ಒದಗಿಸಲಾಗಿದೆ. ಜೊತೆಗೆ ಪೌರಕಾರ್ಮಿಕರ ಕಾಲೊನಿಗಳಲ್ಲಿ ಆಗಿಂದಾಗ್ಗೆ ಸೋಂಕುನಿವಾರಕ ಸಿಂಪಡಣೆ ಹಾಗೂ ಮೂರು ತಿಂಗಳಿಗೊಮ್ಮೆ ಆರೋಗ್ಯ ಶಿಬಿರ ಮಾಡಲಾಗುತ್ತಿದೆ. ಪೌರಕಾರ್ಮಿಕರು ಕೆಲಸದ ಅವಧಿಯಲ್ಲಿ ಮೃತಪಟ್ಟರೆ ಅವರ ಅವಲಂಬಿತರಿಗೆ ₹10 ಲಕ್ಷ ಪರಿಹಾರವನ್ನು ನೀಡಲಾಗುತ್ತದೆ’ ಎಂದು ಮಾಹಿತಿ ನೀಡಿದರು.

ವಿಶೇಷ ಆಯುಕ್ತ ಕೆ.ಹರೀಶ್ ಕುಮಾರ್, ರವೀಂದ್ರ, ಜಂಟಿ ಆಯುಕ್ತ ಸರ್ಫರಾಜ್ ಖಾನ್, ಸೂಪರಿಂಟೆಂಡಿಂಗ್ ಎಂಜಿನಿಯರ್ ಬಸವರಾಜ ಕಬಾಡೆ ಇದ್ದರು.

## ನಾಲ್ಕು ತಿಂಗಳಲ್ಲಿ 483 ಟನ್ ಮಾವು ರಫ್ತು



ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಈ ವರ್ಷದ ಮಾರ್ಚ್‌ನಿಂದ ಜೂನ್‌ವರೆಗಿನ ನಾಲ್ಕು ತಿಂಗಳ ಅವಧಿಯಲ್ಲಿ ಒಟ್ಟು 483 ಟನ್‌ನಷ್ಟು ಮಾವು ವಿವಿಧ ದೇಶಗಳಿಗೆ ರಫ್ತಾಗಿದೆ.

ಜೂನ್ ತಿಂಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ 169 ಟನ್‌ನಷ್ಟು ಮಾವು ರಫ್ತಾಗಿದೆ. ಮಾರ್ಚ್‌ನಲ್ಲಿ 43.7 ಟನ್, ಏಪ್ರಿಲ್ 110 ಟನ್ ಹಾಗೂ ಮೇ ತಿಂಗಳಲ್ಲಿ 158 ಟನ್ ಮಾವು ರಫ್ತಾಗಿದೆ.

ಈ ವರ್ಷದ ಮಾವಿನ ಅವಧಿಯಲ್ಲಿ ದೋಹಾ ಹೆಚ್ಚಿನ ಪ್ರಮಾಣದಲ್ಲಿ ಮಾವು ತರಿಸಿಕೊಂಡಿದ್ದು, 140 ಟನ್ ಮಾವು ರಫ್ತಾಗಿದೆ. ಲಂಡನ್‌ಗೆ 68 ಟನ್ ಹಾಗೂ ಸಿಂಗಪುರಕ್ಕೆ 55 ಟನ್ ಮಾವು ರಫ್ತಾಗಿದೆ.

‘ವಿಮಾನ ನಿಲ್ದಾಣದಲ್ಲಿರುವ ಏರ್ ಇಂಡಿಯಾ ಎಸ್‌ಎಟಿಎಸ್ ಮತ್ತು ಮೆಂಜೀಸ್ ಏವಿಯೇಷನ್ ಸಂಸ್ಥೆಗಳ ಬೆಂಬಲದೊಂದಿಗೆ ಬೆಂಗಳೂರಿನಿಂದ ಗುಣಮಟ್ಟ ಮತ್ತು ತಾಜಾ ಸ್ಥಿತಿಯಲ್ಲಿ ಮಾವು ತಲುಪಿದೆ. ಮಾವಿನ ಸಂಗ್ರಹಣೆ ಮತ್ತು ಸಾಗಣೆ ವ್ಯವಸ್ಥೆಯೂ ಸರಾಗವಾಗಿತ್ತು’ ಎಂದು ಪ್ರಕಟಣೆ ತಿಳಿಸಿದೆ.



ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಕೋವಿಡ್ ನಿಯಮಗಳನ್ನು ಪಾಲಿಸದವರಿಗೆ ಬಿಬಿಎಂಪಿ ಮಾರ್ಷಲ್‌ಗಳು ದಂಡ ವಿಧಿಸಿದರು – ಪ್ರಜಾವಾಣಿ ಚಿತ್ರ

## ಇಂದಿನಿಂದ ಭಗವದ್ಗೀತೆ ಪ್ರವಚನ

ಬೆಂಗಳೂರು: ಬೆಂಗಳೂರು ಕರಾವಳಿಗರ ಒಕ್ಕೂಟವು ತುಳು ಭಾಷೆಯಲ್ಲಿ ಭಗವದ್ಗೀತೆ ಪ್ರವಚನ ಕಾರ್ಯಕ್ರಮವನ್ನು ಜು.17ರಿಂದ 22ರವರೆಗೆ ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

ಪ್ರತಿದಿನ ಸಂಜೆ 6.30ರಿಂದ ರಾತ್ರಿ 8 ಗಂಟೆಯವರೆಗೆ ಜೂಮ್ ಮೂಲಕ ಕಾರ್ಯಕ್ರಮ ನಡೆಯಲಿದೆ. ಇಸ್ಕಾನ್ ದೇವಾಲಯದ ಬೆಂಗಳೂರು ದಕ್ಷಿಣ ವಲಯದ ಮುಖ್ಯಸ್ಥ ಪ್ರಸಾದೇಶ್ವರ್ ಕೃಷ್ಣದಾಸ ಅವರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

‘ಜು.17ರ ಕಾರ್ಯಕ್ರಮವನ್ನು ಉಡುಪಿ ಪಲಿಮಾರು ಮಠದ ವಿದ್ಯಾಧೀಶ ಶ್ರೀಪಾದರು ಉದ್ಘಾಟಿಸಲಿದ್ದಾರೆ. 18ರಂದು ಗೌರಿಗದ್ದೆಯ ವಿನಯ್ ಗುರೂಜಿ ಆಶೀರ್ವಚನ ನೀಡಲಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

### ಸುದ್ದಿ 2 ನಿಮಿಷ

## ‘ಕನ್ನಡ ಕಾಯಕ ವರ್ಷಕ್ಕೆ ಕನ್ನಡ ಕವಾಯತು ಅನುಷ್ಠಾನಗೊಳಿಸಿ’

ಬೆಂಗಳೂರು: ‘ಕನ್ನಡ ಕಾಯಕ ವರ್ಷದ ಸಂಬಂಧ ಗೃಹ ಇಲಾಖೆಯ ಎಲ್ಲ ಹಂತಗಳಲ್ಲೂ ಕನ್ನಡವನ್ನು ಜಾರಿಗೊಳಿಸಬೇಕಿದೆ. ಹೀಗಾಗಿ, ಎಲ್ಲ ಜಿಲ್ಲೆಗಳಲ್ಲೂ ‘ಕನ್ನಡ ಕವಾಯತು’ ಅನುಷ್ಠಾನಗೊಳಿಸಲು ಸರ್ಕಾರ ಅಗತ್ಯ ಕ್ರಮಕೈಗೊಳ್ಳಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಒತ್ತಾಯಿಸಿದ್ದಾರೆ.

ಈ ಸಂಬಂಧ ಅವರು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

‘2020ರ ನ.1ರಿಂದ 2021ರ ಅ.31ರವರೆಗೆ ಕನ್ನಡ ಕಾಯಕ ವರ್ಷಾಚರಣೆ ಮಾಡಲಾಗುತ್ತಿದೆ. ಮುಂಬರುವ ಅ.31ರಂದು ಕನ್ನಡ ಕಾಯಕ ವರ್ಷಾಚರಣೆಯ ಸಮಾರೋಪದಲ್ಲಿ ಕನ್ನಡದಲ್ಲಿ ಕವಾಯತನ್ನು ಹಮ್ಮಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ತರಬೇತಿಗೆ ಕ್ರಮಕೈಗೊಳ್ಳಲು ಹಾಗೂ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.



‘ಆಡಳಿತ, ಶಿಕ್ಷಣ, ತಂತ್ರಜ್ಞಾನ ಮತ್ತು ಇತರ ಎಲ್ಲ ವಲಯಗಳಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರವು ಆದೇಶಗಳನ್ನು ಹೊರಡಿಸಿದೆ. ಗೃಹ ಇಲಾಖೆಯ ಆಡಳಿತದಲ್ಲಿಯೂ ಕನ್ನಡವನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವ ಕುರಿತಂತೆ ಬೆಳಗಾವಿಯಲ್ಲಿ ‘ಕನ್ನಡ ಕವಾಯತು’ ಜಾರಿಗೊಳಿಸಿರುವುದು ಶ್ಲಾಘನೀಯ. ಕನ್ನಡ ಕಾಯಕ ವರ್ಷಕ್ಕೆ ರಾಜ್ಯದ್ಯಾದ್ಯಂತ ಕನ್ನಡ ಕವಾಯತು ಹಮ್ಮಿಕೊಳ್ಳಬೇಕು’ ಎಂದು ಹೇಳಿದ್ದಾರೆ.

## ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ರದ್ದು

ಬೆಂಗಳೂರು: ಲಾಲ್‌ಬಾಗ್ ಉದ್ಯಾನದಲ್ಲಿ ಈ ಆಗಸ್ಟ್‌ನಲ್ಲಿ ನಡೆಯಬೇಕಿದ್ದ ‘ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ’ ಕೋವಿಡ್ ಕಾರಣದಿಂದ ರದ್ದಾಗಿದೆ.

ತೋಟಗಾರಿಕೆ ಇಲಾಖೆ ಹಾಗೂ ಮೈಸೂರು ಉದ್ಯಾನ ಕಲಾ ಸಂಘಗಳು ವರ್ಷಕ್ಕೆ ಎರಡು ಬಾರಿ ಉದ್ಯಾನದಲ್ಲಿ ಫಲಪುಷ್ಪ ಪ್ರದರ್ಶನ ಆಯೋಜಿಸುತ್ತಿದ್ದವು.

ಕೋವಿಡ್ ತೀವ್ರಗೊಂಡಿರುವ ಸ್ಥಿತಿಯಲ್ಲಿ ಪ್ರದರ್ಶನಕ್ಕೆ ಹೆಚ್ಚು ಜನ ಸೇರುವುದು ಅಪಾಯ ಎಂಬ ಉದ್ದೇಶದಿಂದ ಕಳೆದ ಆಗಸ್ಟ್‌ನಲ್ಲಿ ಹಾಗೂ ಜನವರಿಯಲ್ಲಿ ನಡೆಯಬೇಕಿದ್ದ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನಗಳು ರದ್ದಾಗಿದ್ದವು.

ಎರಡನೇ ಅಲೆಯ ತೀವ್ರತೆ ತಗ್ಗಿದ್ದರಿಂದ ಆಗಸ್ಟ್‌ನಲ್ಲಿ ಪ್ರದರ್ಶನ ಆಯೋಜಿಸುವ ಉದ್ದೇಶವೂ ಹೊಂದಿತ್ತು. ಆದರೆ, ಮೂರನೇ ಅಲೆಯ ಬಗ್ಗೆ ತಜ್ಞರು ಸುಳಿವು ನೀಡಿರುವುದರಿಂದ ಈ ಬಾರಿಯೂ ಪ್ರದರ್ಶನ ನಡೆಸದಿರಲು ನಿರ್ಧರಿಸಲಾಗಿದೆ.

‘ಆಗಸ್ಟ್‌ನಲ್ಲಿ ಪ್ರದರ್ಶನ ನಡೆಸಲು ಬಹುತೇಕ ಸಿದ್ಧತೆಗಳು ಅಂತಿಮ ಹಂತ ತಲುಪಿರುತ್ತಿತ್ತು. ಕೋವಿಡ್ ಮೂರನೇ ಅಲೆಯ ಸಂಭವ ಇರುವುದರಿಂದ ಫಲಪುಷ್ಪ ಪ್ರದರ್ಶನಕ್ಕೆ ಯಾವುದೇ ತಯಾರಿ ನಡೆದಿಲ್ಲ. ಪ್ರದರ್ಶನ ನಡೆಯುವುದು ಬಹುತೇಕ ಅನುಮಾನ. ಇಲಾಖೆ ಹಾಗೂ ಮೈಸೂರು ಉದ್ಯಾನ ಕಲಾ ಸಂಘದ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ ಈ ನಿರ್ಣಯ ಅಂತಿಮಗೊಳ್ಳಲಿದೆ’ ಎಂದು ತೋಟಗಾರಿಕೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ನೀರಾವರಿ ಯೋಜನೆ ಕುರಿತು ಪ್ರಧಾನಿ ಜೊತೆ ಚರ್ಚೆ • 'ನಾಯಕತ್ವ ಬದಲಾವಣೆ ನನಗೆ ಗೊತ್ತಿಲ್ಲ, ನೀವೇ ಹೇಳಿ'

# ದೆಹಲಿ ಭೇಟಿ: ಗುಟ್ಟು ಬಿಟ್ಟುಕೊಡದ ಬಿಎಸ್‌ವೈ

ಪ್ರಜಾವಾಣಿ ವಾರ್ತೆ

**ನವದೆಹಲಿ:** 'ರಾಜ್ಯದ ಅಭಿವೃದ್ಧಿ, ಕೇಂದ್ರದ ಮುಂದೆ ಬಾಕಿ ಇರುವ ನೀರಾವರಿ ಯೋಜನೆಗಳ ಅನುಮತಿ ಪಡೆಯಲು ರಾಜಧಾನಿಗೆ ಬಂದಿದ್ದೇನೆ' ಎಂದು ಹೇಳಿಕೊಂಡಿರುವ ಕರ್ನಾಟಕದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು, ಅಭಿವೃದ್ಧಿಯ ಬಗ್ಗೆ ಚರ್ಚಿಸುವಾಗ ಜತೆಗೆ ಇರಬೇಕಾದ ಅಧಿಕಾರಿಗಳನ್ನು ಕರೆತರದೇ, ಕುಟುಂಬದವರ ಜತೆಗಷ್ಟೇ ಬಂದಿರುವುದು ನಾನಾ ರೀತಿಯ ವಿಶ್ಲೇಷಣೆಗೆ ಕಾರಣವಾಗಿದೆ.

ಹಿರಿಯ ಸಚಿವರಾದ ಗೋವಿಂದ ಕಾರಜೋಳ, ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್ ಮೊದಲಾದವರ ಜತೆ ದೆಹಲಿಗೆ ಬರುತ್ತಿದ್ದ ಯಡಿಯೂರಪ್ಪ, ಈ ಬಾರಿ, ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಹಾಗೂ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಹಾಗೂ ತಮ್ಮ ಆಪ್ತ ಲಹರ್ ಸಿಂಗ್ ಅವರ ಜತೆ ಶುಕ್ರವಾರ ಇಲ್ಲಿಗೆ ಬಂದರು.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಜೆ ಭೇಟಿಯಾಗಿ ಮಾತುಕತೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಯಡಿಯೂರಪ್ಪ, 'ರಾಜ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ನೆರವು ನೀಡುವಂತೆ ಮೋದಿ ಅವರಿಗೆ ಮನವಿ ಮಾಡಿದ್ದೇನೆ. ಈಡೇರಿಸುವ ಭರವಸೆ ದೊರೆತಿದೆ' ಎಂದರು.

ಈ ವೇಳೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಭೇಟಿಯ 'ಗುಟ್ಟು' ಏನೆಂಬುದನ್ನು ಬಿಟ್ಟುಕೊಡಲಿಲ್ಲ.

'ನಾಯಕತ್ವ ಬದಲಾವಣೆಯ ಬಗ್ಗೆ ವದಂತಿಗಳು ಹಬ್ಬಿವೆಯಲ್ಲ?' ಎಂಬ ಪ್ರಶ್ನೆಗೆ ನಗುತ್ತಲೇ ಉತ್ತರಿಸಿದ ಅವರು, 'ಈ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನೀವೇ ಹೇಳಿ' ಎಂದಷ್ಟೇ ಹೇಳಿ ಮುಗುಂ ಆದರು.

'ಸಚಿವ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆಯ ಕುರಿತು ಚರ್ಚಿಸಿದಲ್ಲಿ ಖಂಡಿತ ನಿಮಗೆ ತಿಳಿಸುವೆ' ಎಂದ ಅವರು, ರಾಜಕೀಯ ಬೆಳವಣಿಗೆಗಳ ಕುರಿತ ಚರ್ಚೆಯ ಸಾಧ್ಯತೆ ಬಗ್ಗೆ ವಿವರಿಸಲು ನಿರಾಕರಿಸಿದರು.

ಶನಿವಾರ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ಕೇಂದ್ರದ ಸಚಿವರಾದ ಅಮಿತ್ ಶಾ ಹಾಗೂ ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಬಳಿಕ ಬೆಂಗಳೂರಿಗೆ ಮರಳುವುದಾಗಿ ಅವರು ಹೇಳಿದರು.

**ಚರ್ಚೆಗೆ ಸಿಗದ ಅವಕಾಶ:** 'ಪ್ರಧಾನಿಯೊಂದಿಗೆ 30 ನಿಮಿಷ ಮಾತುಕತೆ ನಡೆಸಿರುವ ಯಡಿಯೂರಪ್ಪ ರಾಜಕೀಯ ವಿಷಯಗಳ ಕುರಿತು ಚರ್ಚೆಗೆ ಮುಂದಾದರು. ಅದಕ್ಕೆ ಅವಕಾಶ ನೀಡದ ಮೋದಿ, 'ಜೆ.ಪಿ. ನಡ್ಡಾ ಹಾಗೂ ಅಮಿತ್ ಶಾ ಅವರೊಂದಿಗೆ ಮಾತುಕತೆ ನಡೆಸುವಂತೆ ಸೂಚಿಸಿದರು' ಎಂದು ಪಕ್ಷದ ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ.

ಸಚಿವ ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆಗೆ ಅನುಮತಿ ಪಡೆಯುವ ನಿಟ್ಟಿನಲ್ಲಿ ವಿಷಯವನ್ನು ಯಡಿಯೂರಪ್ಪ ಪ್ರಸ್ತಾಪಿಸಿದರಾದರೂ ಈ ಬಗ್ಗೆ ಚರ್ಚಿಸಲು ಸಾಧ್ಯವಾಗಲಿಲ್ಲ ಎಂದೂ ಮೂಲಗಳು ಹೇಳಿವೆ.

**ಮೇಕೆದಾಟು ಶತಸಿದ್ಧ:** 'ಮೇಕೆದಾಟು ಯೋಜನೆಯಿಂದ ತಮಿಳುನಾಡಿಗೆ ಯಾವುದೇ ರೀತಿಯ ತೊಂದರೆ ಇಲ್ಲ. ಈ ಕುರಿತು ಪತ್ರ ಬರೆದು ಮನವರಿಕೆ ಮಾಡಿದರೂ ಆ ರಾಜ್ಯದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಟ ಬಿಡುತ್ತಿಲ್ಲ. ಆದರೆ, ಕಾನೂನಿನಲ್ಲಿ ಅವಕಾಶ ಇರುವುದರಿಂದ ನಾವು ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಶತಸಿದ್ಧ' ಎಂದು ಈ ಯಡಿಯೂರಪ್ಪ ಹೇಳಿದರು.

ಮುಖ್ಯಮಂತ್ರಿಯವರು ರಾತ್ರಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಭಾಗವಹಿಸಿದ್ದ ರಾಜ್ಯದ ನೂತನ ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖೂಬಾ ಹಾಗೂ ರಾಜೀವ್ ಚಂದ್ರಶೇಖರ್ ಅವರು ಯಡಿಯೂರಪ್ಪ ಅವರಿಂದ ಅಭಿನಂದನೆ ಸ್ವೀಕರಿಸಿದರು.



ಪ್ರಧಾನಿ ನರೇಂದ್ರ ಮೋದಿ ಅವರನ್ನು ಶುಕ್ರವಾರ ಭೇಟಿಯಾದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

### ನಿಖರ ಮಾಹಿತಿ ಇಂದು ಗೊತ್ತಾಗಲಿದೆ

**ನವದೆಹಲಿ:** ಯಡಿಯೂರಪ್ಪ ಅವರು ರಾಜ್ಯದ ಅಭಿವೃದ್ಧಿ ಕುರಿತು ಕೇಂದ್ರದ ನಾಯಕರೊಂದಿಗೆ ಚರ್ಚಿಸಲು ಅಧಿಕಾರಿಗಳು ಮತ್ತು ಸಚಿವರೊಂದಿಗೆ ಬರದೇ, ಏಕಾಂಗಿಯಾಗಿ ರಾಷ್ಟ್ರ ರಾಜಧಾನಿಗೆ ಭೇಟಿ ನೀಡಿರುವುದು ತೀವ್ರ ಚರ್ಚೆಗೆ ಕಾರಣವಾಗಿದೆ.

'ರಾಜ್ಯದ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿದ ನಿಖರ ಮಾಹಿತಿ ಇಂದು ಗೊತ್ತಾಗಲಿದೆ' ಎಂದು ಕರ್ನಾಟಕ ಪ್ರತಿನಿಧಿಸುವ ಕೇಂದ್ರ ಸಚಿವರೊಬ್ಬರು ಹೇಳುವ ಮೂಲಕ ಕುತೂಹಲವನ್ನು ಉಳಿಸಿದ್ದಾರೆ.

**ದುಬಾರಿ ಕಾಣಿಕೆ:** ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಬಂದಿರುವ ಯಡಿಯೂರಪ್ಪ ಕೇಂದ್ರದ ನಾಯಕರಿಗೆ ನೀಡಲು ದುಬಾರಿ ಕಾಣಿಕೆಗಳನ್ನು ತಮ್ಮೊಂದಿಗೆ ತಂದಿದ್ದಾರೆ. 'ಇಷ್ಟೊಂದು ದುಬಾರಿ ಹೂಗುಚ್ಛ ಮತ್ತು ಕಾಣಿಕೆಗಳನ್ನು ವಿಶೇಷ ಸಂದರ್ಭದಲ್ಲಿ ವಿತರಿಸಲು ಮಾತ್ರ ತರಲಾಗುತ್ತದೆ' ಎಂಬ ಮಾತುಗಳು ಕರ್ನಾಟಕ ಭವನದಲ್ಲಿ ಹರಿದಾಡಿದವು.

## ಸುದ್ದಿ 2 ನಿಮಿಷ

### 'ಪರಿಶಿಷ್ಟ ಅರ್ಚಕರ ನೇಮಕವಿಲ್ಲ'

**ಚಾಮರಾಜನಗರ:** 'ಅರ್ಚಕರ ನೇಮಕಾತಿಗೆ ಸಂಬಂಧಿಸಿ ರಾಜ್ಯದಲ್ಲಿ ಜಾರಿಯಲ್ಲಿರುವ ಪರಂಪರೆಯೇ ಮುಂದುವರಿಯುತ್ತದೆ. ಪರಿಶಿಷ್ಟ ಸಮುದಾಯದ ಅರ್ಚಕರ ನೇಮಕದ ಬಗ್ಗೆ ಸರ್ಕಾರ ಚಿಂತಿಸಿಲ್ಲ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಮುಜರಾಯಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಶುಕ್ರವಾರ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನಲ್ಲಿ ದೇವಾಲಯಗಳಿಗೆ ಪರಿಶಿಷ್ಟ ಸಮುದಾಯದ ಅರ್ಚಕರನ್ನು ನೇಮಕ ಮಾಡಿರುವ ಕುರಿತು ಪ್ರಶ್ನೆಗೆ ಮೇಲಿನಂತೆ ಉತ್ತರಿಸಿದರು.

'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಆಡಳಿತಾತ್ಮಕ ಕಾರಣಗಳಿಗಾಗಿ ದೆಹಲಿಗೆ ಹೋಗಿದ್ದಾರೆ. ಆ ಬಗ್ಗೆ ಯಾವುದೇ ಗೊಂದಲ ಬೇಡ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇಲ್ಲಿನ ಚಾಮರಾಜೇಶ್ವರ ದೇವಾಲಯಕ್ಕೆ ಭೇಟಿ ನೀಡಿದ ಸಚಿವರನ್ನು ಅರ್ಚಕರು ಪೂರ್ಣಕುಂಭದೊಂದಿಗೆ ಸ್ವಾಗತಿಸಿದರು.

### 'ಜನಸಂಖ್ಯಾ ನಿಯಂತ್ರಣ: ರಾಜ್ಯದಲ್ಲೂ ಕಾಯ್ದೆ ರಚಿಸಲಿ'

**ಕೋಲಾರ:** 'ಉತ್ತರ ಪ್ರದೇಶ ಮಾದರಿಯಲ್ಲಿ ರಾಜ್ಯದಲ್ಲೂ ಜನಸಂಖ್ಯಾ ನಿಯಂತ್ರಣ ಕಾಯ್ದೆಯನ್ನು ರಚಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಶುಕ್ರವಾರ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಜನಸಂಖ್ಯಾ ನಿಯಂತ್ರಣ ಕಾಯ್ದೆ ರಚನೆ ವಿರೋಧಿಸುವ ಶಾಸಕ ಜಮೀರ್ ಅಹಮ್ಮದ್ ಮತೀಯವಾದಿ. ಅವರು ಎಲ್ಲವನ್ನೂ ಕಾಮಾಲೆ ಕಣ್ಣಿನಿಂದ ನೋಡ್ತಾರೆ' ಎಂದು ವ್ಯಂಗ್ಯವಾಡಿದರು.

'ಉದ್ದೇಶಿತ ಜನಸಂಖ್ಯಾ ನಿಯಂತ್ರಣ ಕಾಯ್ದೆ ಯಾವುದೋ ಒಂದು ನಿರ್ದಿಷ್ಟ ಸಮುದಾಯಕ್ಕೆ ಸೀಮಿತವಾದುದಲ್ಲ. ಬದಲಿಗೆ ರಾಜ್ಯದ ಎಲ್ಲರಿಗೂ ನ್ಯಾಯ ಕೊಡುವ ಕಾಯ್ದೆ. ಈ ಕಾಯ್ದೆ ರೂಪಿಸುವುದನ್ನು ಸ್ವಾಗತಿಸುತ್ತೇವೆ' ಎಂದರು.

'ಕೋವಿಡ್ ಸಂಕಷ್ಟದ ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಮನಮೋಹನ್ ಸಿಂಗ್ ಹಾಗೂ ರಾಜ್ಯದಲ್ಲಿ ಸಿದ್ದರಾಮಯ್ಯ ಅಧಿಕಾರದಲ್ಲಿ ಇದ್ದಿದ್ದರೆ ಜಾತಿ, ಮತದ ಆಧಾರದಲ್ಲಿ ಲಸಿಕೆ ನೀಡುತ್ತಿದ್ದರು' ಎಂದು ಅವರು ಇದೇ ಸಂದರ್ಭದಲ್ಲಿ ಟೀಕಿಸಿದರು.


## ಸಂಕ್ಷಿಪ್ತ ಸುದ್ದಿ

### ಸೇನಾ ಪ್ರವೇಶ ಪರೀಕ್ಷೆ 25ಕ್ಕೆ

**ಬೆಂಗಳೂರು:** ಭಾರತೀಯ ಸೇನೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಇ) ಇದೇ 25ರಂದು ರಾಜ್ಯದ ಮೂರು ಕೇಂದ್ರಗಳಲ್ಲಿ ನಡೆಯಲಿದೆ. ದೈಹಿಕ ಸಾಮರ್ಥ್ಯ, ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಹಾಜರಾಗಬಹುದು.

ಬೆಂಗಳೂರಿನ ಕಾಮರಾಜ ರಸ್ತೆಯಲ್ಲಿರುವ ಸೇನಾ ಶಾಲೆ, ಮಂಗಳೂರಿನ ಮೂಡುಬಿದಿರೆಯಲ್ಲಿರುವ ಆಳ್ವಾಸ್ ಸಂಸ್ಥೆ, ಬೆಳಗಾವಿಯ ಕೆಎಲ್‌ಇ ಸೊಸೈಟಿ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದು ಸೇನಾ ಪ್ರಕಟಣೆ ತಿಳಿಸಿದೆ. ಈ ಮೊದಲು, ಏಪ್ರಿಲ್ 25ರಂದು ಸಿಇಇ ನಿಗದಿಯಾಗಿತ್ತು. ಆದರೆ, ಕೋವಿಡ್ ಕಾರಣದಿಂದ ಮುಂದೂಡಲಾಗಿತ್ತು.

### 'ಸಿಗಂದೂರು ದೇವಾಲಯ ಬಿಟ್ಟುಕೊಡುವುದಿಲ್ಲ'



ಪ್ರಣವಾನಂದರಾಮ ಸ್ವಾಮೀಜಿ

**ಗದಗ:** 'ಆರ್ಯ ಈಡಿಗ ಸಮಾಜದ ನೇತೃತ್ವದಲ್ಲಿ ನಡೆಯುತ್ತಿರುವ ಸಿಗಂದೂರು ಚೌಡೇಶ್ವರಿ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಬೇಕು ಎಂಬ ಪ್ರಯತ್ನ ನಡೆಯುತ್ತಿದೆ. ಸರ್ಕಾರದ ಈ ನಡೆಯನ್ನು ಸಮಾಜ ಸಹಿಸುವುದಿಲ್ಲ' ಎಂದು ಪ್ರಣವಾನಂದರಾಮ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಇಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿಗಂದೂರು ಚೌಡೇಶ್ವರಿ ಆಶೀರ್ವಾದದಿಂದ ಆ ದೇವಸ್ಥಾನವನ್ನು ನಡೆಸುವ ಶಕ್ತಿ ಸಮಾಜಕ್ಕೆ ಇದೆ. ಧರ್ಮದರ್ಶಿ ರಾಮಪ್ಪ ಅಜ್ಜನವರು ದೇವಸ್ಥಾನವನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ' ಎಂದು ಹೇಳಿದರು.

'ಯಾರದ್ದೋ ಕುಮ್ಮಕ್ಕಿನಿಂದ ಆ ದೇವಸ್ಥಾನಕ್ಕೆ ತೊಂದರೆ ನೀಡಿದ್ದೇ ಆದಲ್ಲಿ ಸಮಾಜ ಸಹಿಸುವುದಿಲ್ಲ. ಯಾವುದೇ ಕಾರಣಕ್ಕೂ ಆ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಬಿಟ್ಟುಕೊಡುವುದಿಲ್ಲ' ಎಂದೂ ಅವರು ಗುಡುಗಿದರು.

### ಸ್ನೇಹಕುಂಜ ಸಂಸ್ಥೆಗೆ 'ಈಕ್ವೆಟರ್–2021 ಪ್ರಶಸ್ತಿ'

**ಶಿರಸಿ:** ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಂಪತ್ರೆ ಜಡ್ಡಿ ಸಂರಕ್ಷಣಾ ಕಾರ್ಯ ಕೈಗೊಂಡ ಹೊನ್ನಾವರದ ಸ್ನೇಹಕುಂಜ ಸಂಸ್ಥೆಗೆ ವಿಶ್ವಸಂಸ್ಥೆ 'ಈಕ್ವೆಟರ್ 2021' ಪ್ರಶಸ್ತಿ ಘೋಷಿಸಿದೆ. ಪ್ರಶಸ್ತಿ ಮೊತ್ತ 10 ಸಾವಿರ ಯುಎಸ್ ಡಾಲರ್ ಮೊತ್ತ (ಸುಮಾರು ಏಳೂವರೆ ಲಕ್ಷ ರೂಪಾಯಿ) ಆಗಿದೆ.

ಈ ಕುರಿತು ಸಂಸ್ಥೆಯ ಕಾರ್ಯದರ್ಶಿ ನರಸಿಂಹ ಹೆಗಡೆ ವಾನಳ್ಳಿ ಮಾಹಿತಿ ನೀಡಿದ್ದು, '130 ದೇಶಗಳ 600ಕ್ಕೂ ಹೆಚ್ಚು ಸಂಸ್ಥೆಗಳು ನಾಮನಿರ್ದೇಶನಗೊಂಡಿದ್ದವು. ಪ್ರಶಸ್ತಿ ಪಡೆದ ರಾಜ್ಯದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆ ಸಂಸ್ಥೆಯದು' ಎಂದರು.

'ಅಪರೂಪದ ಜೌಗು ಪ್ರದೇಶದ ಕಾಡಿನ ಸಂರಕ್ಷಣೆ ಕೆಲಸಕ್ಕೆ ಮನ್ನಣೆ ಸಿಕ್ಕಿದೆ. ರಾಂಪತ್ರೆ ಜಡ್ಡಿ ಪುನಶ್ಚೇತನಗೊಳಿಸುವ ಜತೆಗೆ ಸಾಂಘಿಕ ಜೇನು ಕೃಷಿ, ಉಪವನ ಉತ್ಪನ್ನಗಳ ಮೌಲ್ಯವರ್ಧನೆ, ಶುದ್ಧ ಇಂಧನ ಬಳಸಿ ಕಿರು ಉದ್ದಿಮೆಗಳನ್ನು ಪ್ರೋತ್ಸಾಹಿಸಿರುವ ಕೆಲಸಗಳನ್ನು ಪರಿಗಣಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಈ ಪ್ರಶಸ್ತಿ ನೀಡಲಾಗುತ್ತಿತ್ತು. ಕೋವಿಡ್ ಕಾರಣದಿಂದಾಗಿ ಪ್ರಶಸ್ತಿ ಸಮಾರಂಭ ಈ ಬಾರಿ ಆನ್‌ಲೈನ್ ನಡೆಯುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಲಾಗಿದೆ' ಎಂದು ಹೇಳಿದ್ದಾರೆ.

# 59 ಮಂದಿಯಲ್ಲಿ ಹೊಸ ತಳಿ ವೈರಾಣು ಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ 1,806 ಮಂದಿಗೆ ಕೊರೊನಾ ಸೋಂಕು ತಗಲಿರುವುದು ಶುಕ್ರವಾರ ದೃಢಪಟ್ಟಿದೆ. ವಿಶ್ವ ಆರೋಗ್ಯ ಸಂಸ್ಥೆ ಗುರುತಿಸಿರುವ ಹೊಸ ತಳಿಯ ಕೊರೊನಾ ವೈರಾಣುಗಳು 59 ಮಂದಿಯಲ್ಲಿ ಕಾಣಿಸಿಕೊಂಡಿದೆ.



ಆಲ್ಫಾ/ಬಿ.1.1.7 ವೈರಾಣು 19 ಮಂದಿಯಲ್ಲಿ ಹಾಗೂ ಕಪ್ಪಾ/ಬಿ.1.617.1 ವೈರಾಣು 40 ಮಂದಿಯಲ್ಲಿ ಹೊಸದಾಗಿ ಪತ್ತೆಯಾಗಿದೆ. ಕ್ರಮವಾಗಿ ರಾಜ್ಯದಲ್ಲಿ ಈ ವೈರಾಣು ಕಾಣಿಸಿಕೊಂಡ ಪ್ರಕರಣಗಳ ಒಟ್ಟು ಸಂಖ್ಯೆ 159 ಹಾಗೂ 185ಕ್ಕೆ ಏರಿಕೆಯಾಗಿದೆ. ಈವರೆಗೆ 725 ಡೆಲ್ಟಾ ಹಾಗೂ 3 ಡೆಲ್ಟಾ ಪ್ಲಸ್ ಪ್ರಕರಣಗಳು ವರದಿಯಾಗಿವೆ.

ಕೊರೊನಾ ಸೋಂಕಿತರಲ್ಲಿ 42 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಕನಿಷ್ಠ ಮರಣ ಪ್ರಕರಣಗಳು ಇವಾಗಿವೆ. ರಾಜ್ಯದಲ್ಲಿ ಏಪ್ರಿಲ್ ಎರಡನೇವಾರದ ಬಳಿಕ ಮರಣ ಪ್ರಕರಣಗಳ ಸಂಖ್ಯೆ 50ರ ಗಡಿ ದಾಟಿ, ಬಳಿಕ 500ರ ಗಡಿ ತಲುಪಿತ್ತು. ಕಳೆದೊಂದು ತಿಂಗಳಿನಿಂದ ಮರಣ ಪ್ರಕರಣಗಳ ಸಂಖ್ಯೆ ಕೂಡ ಇಳಿಮುಖ ಮಾಡಿದೆ.

ರಾಜ್ಯದ 15 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ದೃಢಪಟ್ಟಿವೆ. ಮರಣ ಪ್ರಮಾಣ ದರವು ಶೇ 2.32ರಷ್ಟು ವರದಿಯಾಗಿದೆ. ಬೆಂಗಳೂರು ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 10, ಮೈಸೂರಿನಲ್ಲಿ 5 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 5ಕ್ಕಿಂತ ಕಡಿಮೆಯಿದೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 36,079ಕ್ಕೆ ತಲುಪಿದೆ.

ಒಂದು ದಿನದ ಅವಧಿಯಲ್ಲಿ 1.52 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.18ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ. ಬೆಂಗಳೂರಿನಲ್ಲಿ 411, ದಕ್ಷಿಣ ಕನ್ನಡದಲ್ಲಿ 225, ಮೈಸೂರಿನಲ್ಲಿ 174, ಹಾಸನದಲ್ಲಿ 138, ಶಿವಮೊಗ್ಗದಲ್ಲಿ 110 ಹಾಗೂ ಉಡುಪಿಯಲ್ಲಿ 105 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ.

### ವೈದ್ಯಕೀಯ ಕಾಲೇಜು: ಭೌತಿಕ ತರಗತಿ ಶುರು

ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ನರ್ಸಿಂಗ್ ಮತ್ತು ಇತರ ಆರೋಗ್ಯ ಸಂಬಂಧಿತ ಕೋರ್ಸ್‌ಗಳ ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಭೌತಿಕ ತರಗತಿಗಳನ್ನು ತಕ್ಷಣವೇ ಆರಂಭಿಸಲು ಸರ್ಕಾರ ಅನುಮತಿ ನೀಡಿದೆ.

ಕನಿಷ್ಠ ಒಂದು ಡೋಸ್ ಕೋವಿಡ್ ಲಸಿಕೆ ಪಡೆದಿರುವ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅವರು ಕಾಲೇಜು ಮತ್ತು ಶಿಕ್ಷಣ ಸಂಸ್ಥೆಗಳನ್ನು ಪ್ರವೇಶಿಸಲು ಅವಕಾಶ ನೀಡಲಾಗಿದೆ.

ತರಗತಿಗಳನ್ನು ಆರೋಗ್ಯ ಇಲಾಖೆ ಹೊರಡಿಸಿರುವ ಮಾರ್ಗಸೂಚಿಯ ಪ್ರಕಾರವೇ ಎಲ್ಲ ಕ್ರಮಗಳನ್ನು ತೆಗೆದುಕೊಂಡು ಆರಂಭಿಸಬಹುದು ಎಂದು ಕಂದಾಯ ಇಲಾಖೆ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

### 'ರಾಜ್ಯದ ಮನವಿಗೆ ಕೇಂದ್ರ ಸ್ಪಂದಿಸುವ ನಿರೀಕ್ಷೆ'

'ಕೇಂದ್ರ ಸರ್ಕಾರವು ರಾಜ್ಯದ ಮನವಿ ಪುರಸ್ಕರಿಸಿ, ಜುಲೈ ಹಾಗೂ ಆಗಸ್ಟ್‌ನಲ್ಲಿ ಎರಡನೇ ಡೋಸ್ ಪಡೆಯಬೇಕಾಗಿರುವವರಿಗೆ ಅಗತ್ಯವಿರುವಷ್ಟು ಲಸಿಕೆ ಪೂರೈಸುವ ನಿರೀಕ್ಷೆ ಇದೆ' ಎಂದು ಹೈಕೋರ್ಟ್ ಆಶಾವಾದ ವ್ಯಕ್ತಪಡಿಸಿದೆ.

ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ಹಾಗೂ ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ವಿಭಾಗೀಯ ಪೀಠ 'ರಾಜ್ಯದಲ್ಲಿ ಎರಡನೇ ಡೋಸ್ ತೆಗೆದುಕೊಳ್ಳುವವರಿಗೆ ಅಗತ್ಯವಿರುವ ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಅಭಾವ ಉಂಟಾಗಬಹುದು ಎಂಬುದು ಸರ್ಕಾರದ ಅಂಕಿ ಅಂಶಗಳಿಂದ ಮನದಟ್ಟಾಗುತ್ತದೆ' ಎಂದು ಹೇಳಿತು.

### '30ಗಳಿಗೆ 1.5 ಕೋಟಿ ಡೋಸ್ ಲಸಿಕೆ ಕೊಡಿ'

ಒಂದನೇ ಪುಟದಿಂದ...

ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಮತ್ತು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಉಪ ಮುಖ್ಯಮಂತ್ರಿಗಳಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಗೋವಿಂದ ಎಂ. ಕಾರಜೋಳ, ಸಚಿವರಾದ ಆರ್. ಅಶೋಕ, ಬಸವರಾಜ ಬೊಮ್ಮಾಯಿ, ಡಾ.ಕೆ. ಸುಧಾಕರ್, ಅರವಿಂದ ಲಿಂಬಾವಳಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಉಪಸ್ಥಿತರಿದ್ದರು.

ನವಜಾತ ಶಿಶುಗಳಿಗೆ 800 ವೆಂಟಿಲೇಟರ್ ಕೊಡಿ: 'ನವಜಾತ ಶಿಶುಗಳ ಆರೈಕೆಗೆ ಬಳಸುವ (ನಿಯೋನೇಟಲ್) 800 ವೆಂಟಿಲೇಟರ್‌ಗಳನ್ನು ಪಿಎಂ–ಕೇರ್ಸ್ ಅಡಿಯಲ್ಲಿ ತುರ್ತಾಗಿ ರಾಜ್ಯಕ್ಕೆ ಒದಗಿಸಿ' ಎಂಬ ಬೇಡಿಕೆಯನ್ನೂ ಯಡಿಯೂರಪ್ಪ ಸಲ್ಲಿಸಿದರು.

ತಾಲ್ಲೂಕು ಆಸ್ಪತ್ರೆಗಳಲ್ಲಿ ಬಳಸುವುದಕ್ಕಾಗಿ 40 ಪಿಎಸ್‌ಎ ಆಮ್ಲಜನಕ ಉತ್ಪಾದನಾ ಘಟಕಗಳನ್ನು ಒದಗಿಸಬೇಕು. ದ್ರವರೂಪದ ವೈದ್ಯಕೀಯ ಆಮ್ಲಜನಕದ ವಿತರಣೆಯನ್ನು ವಿಕೇಂದ್ರೀಕರಣ ಮಾಡಬೇಕು. ಕಪ್ಪು ಶಿಲೀಂಧ್ರ ಸೋಂಕಿತರ ಚಿಕಿತ್ಸೆಗಾಗಿ ಆ್ಯಂಪೋಟೆರಿಸಿನ್– ಬಿ ಮತ್ತು ಮಕ್ಕಳಿಗಾಗಿ ಇಂಟ್ರಾವೀನಸ್ ಇಮ್ಯುನೋಗ್ಲೋಬಿನ್ (ಐವಿಐಜಿ) ಚುಚ್ಚುಮದ್ದುಗಳನ್ನು ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಪೂರೈಸಲು ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

## ಸಿ.ಎಸ್.ಪುಟ್ಟರಾಜು ಸೇರಿ 24 ಮಂದಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

**ಮಂಡ್ಯ:** ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) 107 ನಿವೇಶನ ಅಕ್ರಮ ಹಂಚಿಕೆ ಪ್ರಕರಣದಲ್ಲಿ ಸಿಬಿಐ ವಿಶೇಷ ನ್ಯಾಯಾಲಯ ಶಾಸಕರಾದ ಸಿ.ಎಸ್. ಪುಟ್ಟರಾಜು, ಎಂ.ಶ್ರೀನಿವಾಸ್, ಮಾಜಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಮುಡಾ ಮಾಜಿ ಅಧ್ಯಕ್ಷೆ ವಿದ್ಯಾ ನಾಗೇಂದ್ರ ಸೇರಿ 24 ಆರೋಪಿಗಳಿಗೆ ಗುರುವಾರ ಸಮನ್ಸ್ ಜಾರಿಗೊಳಿಸಿದೆ.

ಜುಲೈ 20ರಂದು 11 ಗಂಟೆಗೆ ಕೋರ್ಟ್‌ಗೆ ಹಾಜರಾಗುವಂತೆ ಸಮನ್ಸ್‌ನಲ್ಲಿ ಸೂಚಿಸಲಾಗಿದೆ. 2009ರಲ್ಲಿ ಅಭಿವೃದ್ಧಿಗೊಳಿಸಲಾದ ವಿವೇಕಾನಂದ ಬಡಾವಣೆಯ ಲೇಔಟ್‌ನಲ್ಲಿ 107ನಿವೇಶನಗಳ ಅಕ್ರಮ ಹಂಚಿಕೆ ಕುರಿತು 2010ರಲ್ಲಿ ಆರ್‌ಟಿಐ ಕಾರ್ಯಕರ್ತ ಕೆ.ಆರ್.ರವೀಂದ್ರ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

ನಿವೇಶನಕ್ಕಾಗಿ ಸಾರ್ವಜನಿಕ ಪ್ರಕರಣೆ ಹೊರಡಿಸುವ ಮುನ್ನವೇ ಆರೋಪಿಗಳು ತಮಗೆ, ತಮ್ಮ ಕುಟುಂಬ ಸದಸ್ಯರಿಗೆ ನಿವೇಶನ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ನಂತರ ಸಿಐಡಿ ತನಿಖೆಯೂ ನಡೆದಿತ್ತು. 2015ರಲ್ಲಿ ರಾಜ್ಯ ಸರ್ಕಾರ ಸಿಬಿಐಗೆ ವಹಿಸಿತ್ತು. 2016ರಲ್ಲಿ ಆರೋಪಿಗಳ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

# ವಿಧಾನಸೌಧ: ಮಾಧ್ಯಮಕ್ಕೆ ಇನ್ನಷ್ಟು ನಿರ್ಬಂಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸೌಧ ಆವರಣದಲ್ಲಿ ಮಾಧ್ಯಮಗಳ ನಿತ್ಯದ ಚಟುವಟಿಕೆಗಳ ಮೇಲಿನ ನಿರ್ಬಂಧವನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ.

ವಿಧಾನಸಭೆ ಕಲಾಪದ ವೇಳೆ ಸದನದೊಳಗೆ ಛಾಯಾಗ್ರಾಹಕರು ಮತ್ತು ವಿಡಿಯೊ ಚಿತ್ರೀಕರಣಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಇದೀಗ ಅಧಿವೇಶನ ಮಾತ್ರವಲ್ಲದೆ, ಇತರ ಸಂದರ್ಭಗಳಲ್ಲೂ ವಿಧಾನಸೌಧದ ಕಾರಿಡಾರ್‌ಗಳಲ್ಲಿ ಪತ್ರಿಕಾ ಛಾಯಾಗ್ರಾಹಕರು ಛಾಯಾಗ್ರಹಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ವಿಡಿಯೋ ಚಿತ್ರೀಕರಣ ನಡೆಸುವುದನ್ನು ಸಚಿವಾಲಯ ಸಂಪೂರ್ಣ ನಿರ್ಬಂಧಿಸಲಾಗಿದೆ. ಈ ಸಂಬಂಧ ಸರ್ಕಾರದ ಅಧೀನ ಕಾರ್ಯದರ್ಶಿ ಕೆ.ರವೀಂದ್ರ ಅವರು ಸುತ್ತೋಲೆ ಹೊರಡಿಸಿದ್ದಾರೆ.

'ವಿಧಾನಸೌಧದ ಕಾರಿಡಾರುಗಳಲ್ಲಿ ವಿಡಿಯೋ ಚಿತ್ರೀಕರಣ ಮತ್ತು

ಮತ್ತು ಪತ್ರಿಕಾ ಛಾಯಾಗ್ರಹಣ ಮಾಡುತ್ತಿದ್ದು, ಇದರಿಂದ ಹಲವಾರು ಹಲವಾರು ಬಾರಿ ಗಣ್ಯ ವ್ಯಕ್ತಿಗಳ ಸುಗಮ ಚಲನವಲನಕ್ಕೆ ಅಡ್ಡಿಯುಂಟಾಗುತ್ತಿರುವುದು ಗಮನಕ್ಕೆ ಬಂದಿದೆ' ಎಂದು ಸುತ್ತೋಲೆಯಲ್ಲಿ ಪ್ರತಿಪಾದಿಸಿದ್ದಾರೆ.

ಸುಗಮ ಚಲನೆ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಮುಖ್ಯಮಂತ್ರಿಯವರು ಮತ್ತು ಇತರ ಸಚಿವರಿಂದ ಹೇಳಿಕೆ ಪಡೆಯಲು ವಿಧಾನಸೌಧದ ಕೆಂಗಲ್ ದ್ವಾರದ ಬಳಿ ಅವಕಾಶ ಮಾಡಿಕೊಡಲಾಗಿದೆ. ಇನ್ನು ಮುಂದೆ ನಿಗದಿ ಮಾಡಿದ ಈ ಸ್ಥಳವನ್ನು ಬಿಟ್ಟು ಕಾರಿಡಾರ್‌ಗಳಲ್ಲಿ ಚಿತ್ರೀಕರಣ ಮಾಡುವುದನ್ನು ಭದ್ರತೆ ಮತ್ತು ಶಿಸ್ತನ್ನು ಕಾಪಾಡಬೇಕಾದ ಕಾರಣ ನಿರ್ಬಂಧಿಸುವುದು ಸೂಕ್ತ ಎಂಬ ಪ್ರಸ್ತಾವನೆಗೆ ಮುಖ್ಯಮಂತ್ರಿಯವರು ಅನುಮೋದನೆ ನೀಡಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಸಚಿವರು ಇಲಾಖೆಯ ಪ್ರಗತಿ ಮತ್ತು ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ನೀಡಲು ಮಾಧ್ಯಮಗಳಿಗೆ ಹೇಳಿಕೆ ನೀಡುವ ಸಂದರ್ಭದಲ್ಲಿ ಸಭಾ ಕೊಠಡಿ ಅಥವಾ ಸಂಬಂಧಪಟ್ಟ ಸಚಿವರ ಕೊಠಡಿಗಳಲ್ಲೇ ವ್ಯವಸ್ಥೆ ಮಾಡಬೇಕು ಎಂದು ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ.

**ಕಲಾಪ ಚಿತ್ರೀಕರಣಕ್ಕೆ ಕೊಕ್ಕೆ:** ವಿಧಾನಸಭೆಯ ಕಲಾಪದ ವಿಡಿಯೋ ಮತ್ತು ಛಾಯಾಚಿತ್ರ ಗ್ರಹಣಕ್ಕೆ ಈಗಾಗಲೇ ನಿರ್ಬಂಧ ವಿಧಿಸಲಾಗಿದೆ. ಕಲಾಪದ ನೇರ ಪ್ರಸಾರದ ಕೇಬಲ್ ಅನ್ನು ಸುದ್ದಿ ವಾಹಿನಿಗಳಿಗೆ ಒದಗಿಸಿಕೊಡಲಾಗಿದೆ. ಅದರ ದೃಶ್ಯಾವಳಿಗಳನ್ನು ಬಿತ್ತರಿಸಬಹುದಾಗಿದೆ. ಆದರೆ, ಕಲಾಪದ ಸಂದರ್ಭದಲ್ಲಿ ಮಹತ್ವದ ದೃಶ್ಯಾವಳಿಗಳನ್ನು ಮರೆಮಾಚಲಾಗುತ್ತದೆ ಎಂಬ ಟೀಕೆಯೂ ಕೇಳಿ ಬಂದಿದೆ.

ಆದರೆ, ವಿಧಾನಪರಿಷತ್ತಿನಲ್ಲಿ ವಿಡಿಯೋ ಚಿತ್ರೀಕರಣ ಮತ್ತು ಛಾಯಾಚಿತ್ರ ಸೆರೆ ಹಿಡಿಯಲು ಯಾವುದೇ ನಿರ್ಬಂಧ ವಿಧಿಸಿಲ್ಲ. ಅಲ್ಲಿ ಈ ಮೊದಲಿನಂತೆಯೇ ಕಾರ್ಯನಿರ್ವಹಿಸಲು ಅವಕಾಶ ಇದೆ.

## 'ಸೂಕ್ಷ್ಮ ನೀರಾವರಿಗೆ ಸಬ್ಸಿಡಿ'

**ಬೆಂಗಳೂರು:** 'ಮುಖ್ಯಮಂತ್ರಿಗಳ ಸೂಕ್ಷ್ಮ ನೀರಾವರಿ ಯೋಜನೆ'ಯಡಿ ಎಲ್ಲಾ ವರ್ಗದ ರೈತರಿಗೆ ಈ ಹಿಂದೆ ನೀಡುತ್ತಿದ್ದ ಸಬ್ಸಿಡಿಯನ್ನು ಅದೇ ಮಾದರಿಯಲ್ಲಿ ಮುಂದುವರಿಸುತ್ತಿರುವುದಾಗಿ ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ.

ಜಿಲ್ಲಾ ಕೃಷಿ ಅಧಿಕಾರಿಗಳ ಜೊತೆ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆಗಳ ಪ್ರಗತಿ ಪರಿಶೀಲನೆ ಸಭೆಯನ್ನು ಶುಕ್ರವಾರ ನಡೆಸಿದ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಈ ಹಿಂದೆ ಎಲ್ಲಾ ವರ್ಗದ 2 ಹೆಕ್ಟೇರ್ ಭೂಮಿ ಹೊಂದಿರುವ ರೈತರಿಗೆ ಶೇ 90 ರಷ್ಟು, 5 ಹೆಕ್ಟೇರ್ ಭೂಮಿ ಹೊಂದಿರುವ ರೈತರಿಗೆ ಶೇ 45 ರಷ್ಟು ಸಬ್ಸಿಡಿ ನೀಡಲಾಗುತ್ತಿತ್ತು. ಮುಖ್ಯಮಂತ್ರಿ ಆದೇಶದ ಮೇರೆಗೆ ಇದೀಗ ಮತ್ತೆ ಹಳೆಯ ಮಾದರಿಯಲ್ಲೇ ಸಬ್ಸಿಡಿ ಮುಂದುವರೆಸಲಾಗುವುದು, 5 ಹೆಕ್ಟೇರ್ ಮೇಲ್ಪಟ್ಟ ಯಾವುದೇ ರೈತರಿಗೆ ಸಬ್ಸಿಡಿ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಹೋಟೆಲ್ ಸಿಬ್ಬಂದಿ ಮೇಲೆ ದರ್ಶನ್ ಹಲ್ಲೆ ಪ್ರಕರಣ: ತನಿಖೆ ಆರಂಭ

# ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ವಶಕ್ಕೆ

ಪ್ರಜಾವಾಣಿ ವಾರ್ತೆ

**ಮೈಸೂರು:** ನಟ ದರ್ಶನ್ ಅವರು ಹೋಟೆಲ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ ಎನ್ನಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ದೇವರಾಜ ಉಪವಿಭಾಗದ ಎಸಿಪಿ ಶಶಿಧರ್ ನೇತೃತ್ವದಲ್ಲಿ ಪೊಲೀಸರು ಶುಕ್ರವಾರ 'ಸಂದೇಶ್ ದ ಪ್ರಿನ್ಸ್' ಹೋಟೆಲ್‌ಗೆ ಭೇಟಿ ನೀಡಿ ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ವಶಕ್ಕೆ ಪಡೆದರು.

ಹಲ್ಲೆಗೆ ಒಳಗಾದರು ಎನ್ನಲಾದ ಹೋಟೆಲ್ ಸಿಬ್ಬಂದಿ ಗಂಗಾಧರ್ ಹಾಗೂ ಮಾಲೀಕ ಸಂದೇಶ್ ನಾಗರಾಜ್ ಅವರ ಪುತ್ರ ಸಂದೇಶ್ ಅವರನ್ನು ವಿಚಾರಣೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಗಂಗಾಧರ್, 'ನಮ್ಮದು ನಾಯರ್ ಸಮುದಾಯ. ಸರ್ವೀಸ್ ತಡವಾಗಿದ್ದರಿಂದ ನಟ ದರ್ಶನ್ ಏರುದನಿಯಲ್ಲಿ ಮಾತನಾಡಿದರು. ಹಲ್ಲೆ ನಡೆಸಿಲ್ಲ' ಎಂದು ಹೇಳಿದರು.

ಸಂದೇಶ್ ಪ್ರತಿಕ್ರಿಯಿಸಿ, 'ದರ್ಶನ್ ಮತ್ತು ಇಂದ್ರಜಿತ್ ಈ ವಿಚಾರವನ್ನು ಇಲ್ಲಿಗೆ ಬಿಟ್ಟರೆ ನನಗೂ ಒಳ್ಳೆಯದು, ಅವರಿಗೂ ಒಳ್ಳೆಯದು. ವಿವಾದದಿಂದ ಕಾರ್ಮಿಕರು ಕೆಲಸಕ್ಕೆ ಬರುವುದಿಲ್ಲ ಎನ್ನುತ್ತಿದ್ದಾರೆ. ಲಸಿಕೆ ತೆಗೆದುಕೊಂಡ ಕಾರ್ಮಿಕರು ಸಿಗುತ್ತಿಲ್ಲ. ಕಾಲು, ಕೈ ಹಿಡಿದು ಕೆಲಸಕ್ಕೆ ಕರೆದುಕೊಂಡು ಬಂದಿದ್ದೇನೆ' ಎಂದು ಹೇಳಿದರು.

### ಕ್ಷಮೆ ಕೇಳಿ ದೊಡ್ಡವರಾಗಿ: ದರ್ಶನ್‌ಗೆ ಇಂದ್ರಜಿತ್ ಆಗ್ರಹ



**ಬೆಂಗಳೂರು:** 'ನಾನು ಸಮಾಜದ ಹಿತದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ನನ್ನ ಮಾತುಗಳಿಗೆ ನಾನು ಬದ್ಧ. ಹೋಟೆಲ್‌ನ ಕಾರ್ಮಿಕರಿಗೆ ನ್ಯಾಯ ಕೊಡಿಸಲು ಮುಂದೆ ಬಂದು ಮಾತನಾಡಿದ್ದೇನೆಯೇ ಹೊರತು ಸೆಲಿಬ್ರಿಟಿ ಕೇಸ್ ಎಂದಲ್ಲ' ಎಂದು ನಿರ್ದೇಶಕ ಇಂದ್ರಜಿತ್ ಲಂಕೇಶ್ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅನ್ಯಾಯ ಆಗಿರುವುದು ಸಮಾಜದ ಸಾಮಾನ್ಯರಿಗೆ. ವೈಯಕ್ತಿಕ ದ್ವೇಷದಿಂದ ಅಥವಾ ಯಾವುದೇ ವ್ಯಕ್ತಿಯ ತೇಜೋವಧೆ ಮಾಡಲು ನಾನು ಮಾತನಾಡುತ್ತಿಲ್ಲ. ಸಮಾಜದ ಹಿತದೃಷ್ಟಿಯಿಂದ ಕ್ಷಮೆ ಕೇಳಿ. ಕುಮಾರಸ್ವಾಮಿ ಅವರಿಗಾಗಲಿ ಅಥವಾ ಸಿದ್ದರಾಮಯ್ಯನವರಿಗಾಗಲಿ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಅವರ ಹೆಸರನ್ನು ಮಾಧ್ಯಮ ಪ್ರಸ್ತಾಪ ಮಾಡಬಾರದು. ನನಗೆ ಯಾರೂ ಕುಮ್ಮಕ್ಕು ನೀಡಿಲ್ಲ' ಎಂದಿದ್ದಾರೆ.

'ನಾಳೆ ಕೆಲಸ ಹೋಗುತ್ತದೆ, ಜೀವನಕ್ಕೆ ಏನು ಮಾಡುವುದು ಎನ್ನುವ ಯೋಚನೆಯಿಂದ ಹೋಟೆಲ್ ಕಾರ್ಮಿಕರು ಮಾತನಾಡುವುದಕ್ಕೆ ಆಗುವುದಿಲ್ಲ. ಇನ್ನೂ ಮುಂದುವರಿಸಿದರೆ ಮತ್ತಷ್ಟು ತೇಜೋವಧೆ ಆಗುತ್ತದೆ. ಕಾರ್ಮಿಕರ ಬಳಿ ಕ್ಷಮೆ ಕೇಳಿ ದೊಡ್ಡವರಾಗಿ. ನೀವು ಏನನ್ನೂ ಕಳೆದುಕೊಳ್ಳುವುದಿಲ್ಲ. ನಾನು ಪೊಲೀಸರ ತನಿಖೆಗೆ ಸಹಕರಿಸುತ್ತೇನೆ. ನ್ಯಾಯ ಕೊಡಿಸುವ ಉದ್ದೇಶವಷ್ಟೇ ನನ್ನದು' ಎಂದರು.

### ಇಂದ್ರಜಿತ್ ಇತ್ತೀಚೆಗೆ ಭೇಟಿಯಾಗಿಲ್ಲ: ಎಚ್‌ಡಿಕೆ

**ಬೆಂಗಳೂರು:** ಸಿನಿಮಾ ನಿರ್ದೇಶಕ ಇಂದ್ರಜಿತ್ ಲಂಕೇಶ್ ಇತ್ತೀಚಿಗೆ ತಮ್ಮನ್ನು ಭೇಟಿ ಮಾಡಿಲ್ಲ. ಅವರ ಜತೆಗಿನ ಫೋಟೊವನ್ನು ಯಾರು? ಏಕೆ? ವೈರಲ್ ಮಾಡುತ್ತಿದ್ದಾರೊ ತಿಳಿಯದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ಹೇಳಿದರು.

ಇಂದ್ರಜಿತ್ ಅವರು ನಟ ದರ್ಶನ್ ವಿರುದ್ಧ ದೂರು ನೀಡಿದ ಬೆನ್ನಲ್ಲೇ ಅವರ ಜತೆಗಿನ ಫೋಟೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವುದರ ಕುರಿತು ಪ್ರತಿಕ್ರಿಯಿಸಿದ ಅವರು, 'ನಾನು ನೇರವಾಗಿ ರಾಜಕಾರಣ ಮಾಡುತ್ತೇನೆ. ಆ ಫೋಟೊ ಬಳಸಿಕೊಂಡು ನನ್ನ ಹೆಸರನ್ನು ಗುರುವಾರದಿಂದ ನಡೆಯುತ್ತಿರುವ ಘಟನಾವಳಿಗಳಿಗೆ ತಳಕು ಹಾಕಬೇಡಿ' ಎಂದರು.

ನಿತ್ಯವೂ ನೂರಾರು ಮಂದಿ ತಮ್ಮನ್ನು ಭೇಟಿಯಾಗುತ್ತಾರೆ. ಇಂದ್ರಜಿತ್ ಕೂಡ ಹಿಂದೆ ತಮ್ಮನ್ನು ಭೇಟಿ ಮಾಡಿ, ಸಿನಿಮಾ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಿದ್ದರು ಎಂದು ತಿಳಿಸಿದರು.



### ಮಹದಾಯಿ ಹೋರಾಟ: ಏಳನೇ ವರ್ಷಕ್ಕೆ ಪದಾರ್ಪಣೆ

ಪ್ರಜಾವಾಣಿ ವಾರ್ತೆ

**ನರಗುಂದ (ಗದಗ ಜಿಲ್ಲೆ):** ಮಹದಾಯಿ ಯೋಜನೆ ಅನುಷ್ಠಾನಕ್ಕೆ ಆಗ್ರಹಿಸಿ ನಡೆಯುತ್ತಿರುವ ರೈತ ಸೇನೆ ಹಾಗೂ ಮಹದಾಯಿ ಹೋರಾಟ ಸಮಿತಿಯ ಹೋರಾಟ ಶುಕ್ರವಾರದಂದು ಏಳನೇ ವರ್ಷಕ್ಕೆ ಪದಾರ್ಪಣೆ ಮಾಡಿತು.

ರೈತ ಸೇನೆ ರಾಜ್ಯ ಘಟಕದ ಅಧ್ಯಕ್ಷ ವೀರೇಶ ಸೊಬರದಮಠ ನೇತೃತ್ವದಲ್ಲಿ ಈ ದಿನವನ್ನು ಕರಾಳ ದಿನವಾಗಿ ಆಚರಿಸಲಾಯಿತು.

ಪುರಸಭೆ ಆವರಣದಲ್ಲಿ ಭಾಸ್ಕರರಾವ್ ರಾವ್ ಭಾವೆ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ರೈತರು ಕಪ್ಪು ಬಾವುಟ ಪ್ರದರ್ಶಿಸಿ ಮೌನ ಪ್ರತಿಭಟನೆ ಆರಂಭಿಸಿದರು. ಬಳಿಕ ಮಳೆಯಲ್ಲೇ ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು. ನೂರಾರು ಮಹಿಳೆಯರು ರೈತಸೇನೆ ಸಮವಸ್ತ್ರ, ಹಸಿರು ಶಾಲು ಧರಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ರೈತ ಮುಖಂಡ ವೀರೇಶ ಸೊಬರದಮಠ, 'ಮಹದಾಯಿ ಯೋಜನೆ ಜಾರಿಗೆ ಮಧ್ಯಪ್ರವೇಶಕ್ಕೆ ಆಗ್ರಹಿಸಿ ಸುಪ್ರೀಂಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವುದು, ಮಲಪ್ರಭಾ ಬಲದಂಡೆ ನೀರಾವರಿ ಕಾಲುವೆಗಳ ಪುನರ್ ನಿರ್ಮಾಣ ಕಾಮಗಾರಿ ಕಳಪೆಯಾಗಿದ್ದು ಸಿಬಿಐ ತನಿಖೆ ಒಪ್ಪಿಸಬೇಕು, ಹೋರಾಟದಲ್ಲಿ ಮೃತಪಟ್ಟ 11 ರೈತರಿಗೆ ಪರಿಹಾರ ನೀಡಬೇಕು, ಶಾಶ್ವತ ಬೆಂಬಲ ಬೆಲೆ ಖರೀದಿ ಕೇಂದ್ರ ಸ್ಥಾಪಿಸಬೇಕು ಹಾಗೂ ಮಹದಾಯಿ ಯೋಜನೆ ಅನುಷ್ಠಾನ ಕುರಿತು ಚರ್ಚಿಸಲು ರಾಜ್ಯಪಾಲರ ಭೇಟಿಗೆ ಅವಕಾಶ ನೀಡಬೇಕು' ಎಂಬ ಐದು ನಿರ್ಣಯಗಳನ್ನು ಪ್ರಕಟಿಸಿದರು.

# ಅಕ್ರಮ ವಿದೇಶಿಯರ ಪತ್ತೆ, ಗಡಿಪಾರಿಗೆ ಸಮಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆ ಮಾಡಿ, ಗಡಿಪಾರು ಮಾಡಲು ಒಳಾಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.

ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬಾಂಗ್ಲಾದೇಶಿಯರು ಅಕ್ರಮವಾಗಿ ನೆಲೆಸಿದ್ದು, ಇತ್ತೀಚೆಗೆ ಬಾಂಗ್ಲಾ ಮಹಿಳೆಯ ಮೇಲೆ ಅದೇ ದೇಶದ ಪ್ರಜೆಗಳಿಂದ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ಮತ್ತು ಅವರ ಅಕ್ರಮ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿತ್ತು. ಇದೇ ರೀತಿ ಬಹಳಷ್ಟು ಜನ ವಾಸವಾಗಿದ್ದಾರೆ ಎಂಬ ದೂರುಗಳು ಕೇಳಿ ಬಂದಿವೆ.

ಅಲ್ಲದೇ, ನೈಜೀರಿಯಾ ಮತ್ತು ಆಫ್ರಿಕಾ ಮೂಲದ ಪ್ರಜೆಗಳಿಂದ ಮಾದಕ ದ್ರವ್ಯ ಮಾರಾಟ, ವೇಶ್ಯಾವಾಟಿಕೆ ಹೆಚ್ಚಾಗಿದ್ದು, ಇವರಿಂದ ಅಪರಾಧ ಪ್ರಮಾಣವೂ ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕುವ ಅಗತ್ಯವಿದೆ ಎಂದು ಗೃಹ ಇಲಾಖೆಯ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ವೀಸಾ ಅವಧಿ ಮುಗಿದ ಮೇಲೂ ಉಳಿದುಕೊಂಡಿರುವ ಮತ್ತು ನಾಪತ್ತೆಯಾಗಿರುವ ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚಲು ಈ ಸಮಿತಿಯು ಕಾರ್ಯೋನ್ಮುಖವಾಗಲಿದೆ. ಪತ್ತೆಯಾಗುವ ಅಕ್ರಮ ವಿದೇಶಿಗರನ್ನು ವಿಚಾರಣೆ ನಡೆಸಿ ಬಳಿಕ ಅವರ ದೇಶಗಳಿಗೆ ಗಡಿಪಾರು ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮೂಲಗಳು ಹೇಳಿವೆ.

ಈ ಪತ್ತೆ ಕಾರ್ಯಕ್ಕೆ ವಿದೇಶಿ ನೋಂದಣಾಧಿಕಾರಿಗಳ ಸಹಾಯ ಪಡೆದುಕೊಳ್ಳಲಾಗುವುದು. ಈ ಬಗ್ಗೆ ಎಲ್ಲ ಜಿಲ್ಲೆಗಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸಂದೇಶ ರವಾನಿಸಲಾಗುವುದು ಎಂದು ಗೃಹ ಇಲಾಖೆ ಪ್ರಕಟಣೆ ತಿಳಿಸಿದೆ.

ಪ್ರತಿ ತಿಂಗಳು ಪತ್ತೆಯಾದ ಮತ್ತು ಗಡಿಪಾರು ಮಾಡಲಾಗಿರುವ ವಿದೇಶಿ ಪ್ರಜೆಗಳ ಕುರಿತು ಕೇಂದ್ರ ಗೃಹ ಇಲಾಖೆಗೆ ವರದಿ ಸಲ್ಲಿಸಲಾಗುವುದು. ಒಳಾಡಳಿತ ಇಲಾಖೆ ಪ್ರಧಾನ ಕಾರ್ಯದರ್ಶಿ ಈ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಪ್ರಾದೇಶಿಕ ವಿದೇಶಿ ನೋಂದಣಾಧಿಕಾರಿ, ರಾಜ್ಯ ಗುಪ್ತ ವಾರ್ತೆ ಪೊಲೀಸ್ ಅಧೀಕ್ಷಕರು, ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರು, ಎನ್‌ಐಸಿ ಸಮಿತಿ ಸದಸ್ಯರಾಗಿರುತ್ತಾರೆ.

# ಗಾಂಜಾ ಮಾರಾಟ: ಆಂಧ್ರ ಗ್ಯಾಂಗ್ ಸೆರೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಆಂಧ್ರಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪದಡಿ ನಾಲ್ವರನ್ನು ಕೋಣನಕುಂಟೆ ಪೊಲೀಸರು ಬಂಧಿಸಿದ್ದಾರೆ.


'ಆಂಧ್ರಪ್ರದೇಶದ ಎಂ. ಸೇಮಂತ್ (32), ಸಿದಾರಿ ಬೊಂಜಿ ಬಾಬು ಅಲಿಯಾಸ್ ಫಿಲಿಪ್ (23), ವಂತಲ್ ನಾಗೇಶ್ (30) ಹಾಗೂ ಸಿದಾರಿ ಮಹೇಶ್ (22) ಬಂಧಿತರು. ಅವರಿಂದ 134 ಕೆ.ಜಿ ಗಾಂಜಾ ಜಪ್ತಿ ಮಾಡಲಾಗಿದೆ. ಪ್ರಮುಖ ಆರೋಪಿ ಅಂಚಟ್ಟಿ ಗೋವಿಂದ್ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಆಂಧ್ರಪ್ರದೇಶದಲ್ಲಿ ಗಾಂಜಾ ಖರೀದಿಸುತ್ತಿದ್ದ ಆರೋಪಿಗಳು, ಕಾರಿನಲ್ಲಿ ಬೆಂಗಳೂರಿಗೆ ತರುತ್ತಿದ್ದರು. ಇಲ್ಲಿಯ ವಸತಿಗೃಹವೊಂದರಲ್ಲಿ ಗಾಂಜಾ ಸಂಗ್ರಹಿಸಿಡುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿ ಉದ್ಯೋಗಿಗಳು ಹಾಗೂ ಇತರರಿಗೆ ಗಾಂಜಾ ಮಾರುತ್ತಿದ್ದರು.'

'ಡ್ರಗ್ಸ್ ಜಾಲದ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಆರೋಪಿಗಳ ಬಂಧನಕ್ಕೆ ಬಲೆ ಬೀಸಲಾಯಿತು. ಇತ್ತೀಚೆಗೆ ಆಂಧ್ರದಿಂದ ಗಾಂಜಾ ತಂದಿದ್ದ ಆರೋಪಿಗಳು, ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ನೈಸ್ ರಸ್ತೆ ಟೋಲ್ ಬಳಿ ಗುರುವಾರ ಮಾರಾಟ ಮಾಡುತ್ತಿದ್ದರು. ದಾಳಿ ಮಾಡಿ ಗಾಂಜಾ ಜಪ್ತಿ ಮಾಡಲಾಯಿತು. ಆರೋಪಿ ಸೇಮಂತ್ ಸಿಕ್ಕಿಬಿದ್ದ. ಇನ್ನೊಬ್ಬ ಆರೋಪಿ ಅಂಚಟ್ಟಿ ಗೋವಿಂದ್ ತಪ್ಪಿಸಿಕೊಂಡ' ಎಂದೂ ಪೊಲೀಸರು ತಿಳಿಸಿದರು.

**ವಸತಿಗೃಹದಲ್ಲಿ ಗಾಂಜಾ:** 'ಸೇಮಂತ್ ನೀಡಿದ್ದ ಮಾಹಿತಿ ಆಧರಿಸಿ ಬನ್ನೇರುಘಟ್ಟ ರಸ್ತೆಯ ಕೋಳಿಫಾರಂ ಗೇಟ್ ಬಳಿಯ 'ದಿ ಪಾರ್ಕ್ ಇನ್ ಹೋಟೆಲ್ ಮತ್ತು ವಸತಿಗೃಹ' ಮೇಲೆ ದಾಳಿ ಮಾಡಲಾಯಿತು. ಗಾಂಜಾ ಸಮೇತ ಮೂವರು ಆರೋಪಿಗಳು ಸಿಕ್ಕಿಬಿದ್ದರು' ಎಂದು ಪೊಲೀಸರು ಹೇಳಿದರು.

'ಆಂಧ್ರಪ್ರದೇಶದ ನಿವಾಸಿಗಳಾದ ಆರೋಪಿಗಳು, ತಮ್ಮದೇ ಗ್ಯಾಂಗ್ ಕಟ್ಟಿಕೊಂಡು ಗಾಂಜಾ ಮಾರುತ್ತಿದ್ದರು. ಗ್ಯಾಂಗ್‌ನಲ್ಲಿರುವ ಹಲವರು ತಲೆಮರೆಸಿಕೊಂಡಿದ್ದಾರೆ' ಎಂದೂ ಹೇಳಿದರು.



## ಗಮನಸೆಳೆದ ಕುರಿ

ಬಕ್ರೀದ್ ಹಬ್ಬದ ಪ್ರಯುಕ್ತ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಮಾರಾಟಕ್ಕೆ ಇರಿಸಲಾದ ರಾಜಸ್ಥಾನದ ಪಾಟನವಾಡಿ ತಳಿಯ ಕುರಿ ಎಲ್ಲರ ಗಮನಸೆಳೆಯಿತು – ಪ್ರಜಾವಾಣಿ ಚಿತ್ರ

### ಬಸವೇಶ್ವರನಗರ ಪೊಲೀಸರಿಂದ ಆರೋಪಿ ಬಂಧನ

# 'ಪ್ರಿಯತಮೆ ಮಾತು ಬಿಟ್ಟಿದ್ದಕ್ಕೆ ಕಾರು ಜಖಂಗೊಳಿಸಿದ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ತನ್ನ ಪ್ರಿಯತಮೆ ಸರಿಯಾಗಿ ಮಾತನಾಡುತ್ತಿಲ್ಲವೆಂಬ ಕಾರಣಕ್ಕೆ ಸಿಟ್ಟಾದ ಆರೋಪಿ ಸತೀಶ್ ಎಂಬಾತ, ರಸ್ತೆ ಅಕ್ಕ-ಪಕ್ಕದಲ್ಲಿ ನಿಲ್ಲಿಸಿದ್ದ ಕಾರುಗಳಿಗೆ ದೊಣ್ಣೆಯಿಂದ ಹೊಡೆದು ಜಖಂಗೊಳಿಸಿದ್ದಾನೆ.

ಬಸವೇಶ್ವರನಗರ ಠಾಣೆ ವ್ಯಾಪ್ತಿಯ ಕುರುಬರಹಳ್ಳಿ ಪೈಪ್‌ಲೈನ್ ರಸ್ತೆಯಲ್ಲಿ ಗುರುವಾರ ರಾತ್ರಿ 1.30ರ ಸುಮಾರಿಗೆ ಈ ಘಟನೆ ನಡೆದಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿ ಸತೀಶ್‌ನನ್ನು ಬಂಧಿಸಿದ್ದಾರೆ.

'ಸ್ಥಳೀಯ ಜೆ.ಸಿ. ನಗರ ನಿವಾಸಿ ಸತೀಶ್, ಪೀಠೋಪಕರಣ ಕೆಲಸ ಮಾಡುತ್ತಿದ್ದ. ತಮಿಳುನಾಡಿನ ಯುವತಿಯನ್ನು ಕೆಲ ವರ್ಷದಿಂದ ಪ್ರೀತಿಸುತ್ತಿದ್ದ. ಪ್ರೇಮಿಗಳು ನಿತ್ಯವೂ ಮಾತನಾಡುತ್ತಿದ್ದರು. ಹಲವು ಬಾರಿ ಭೇಟಿ ಆಗಿದ್ದರು. ಈ ಬಗ್ಗೆ ಆರೋಪಿಯೇ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



ಸತೀಶ್

'ಸತೀಶ್‌ನಿಂದ ದೂರವಿರಲಾರಂಭಿಸಿದ್ದ ಯುವತಿ ಹೆಚ್ಚು ಮಾತನಾಡುತ್ತಿರಲಿಲ್ಲ. ಕರೆಯನ್ನೂ ಸ್ವೀಕರಿಸುತ್ತಿರಲಿಲ್ಲ. ಸ್ವೀಕರಿಸಿದರೂ ಕೆಲ ಕ್ಷಣಗಳಲ್ಲಿ ಕರೆ ಕಡಿತಗೊಳಿಸುತ್ತಿದ್ದರು. ಗುರುವಾರ ರಾತ್ರಿಯೂ ಯುವತಿ ಕರೆ ಸ್ವೀಕರಿಸಿರಲಿಲ್ಲ. ಸಿಟ್ಟಾದ ಸತೀಶ್, ಮದ್ಯ ಕುಡಿದು ದ್ವಿಚಕ್ರ ವಾಹನದಲ್ಲಿ ಸುತ್ತಾಡಿದ್ದ. ಪೈಪ್‌ಲೈನ್ ರಸ್ತೆಯಲ್ಲಿ ನಿಲ್ಲಿಸಿದ್ದ 12 ವಾಹನಗಳಿಗೆ ದೊಣ್ಣೆಯಿಂದ ಹೊಡೆದು ಗಾಜು, ಕಿಟಕಿ ಹಾಗೂ ಕನ್ನಡಿ ಒಡೆದು ಹಾಕಿದ್ದ' ಎಂದೂ ಮೂಲಗಳು ತಿಳಿಸಿವೆ.



ಆರೋಪಿಯು ಕಾರಿನ ಗಾಜು ಒಡೆದಿರುವುದು

'ಆರೋಪಿ ಕೃತ್ಯದ ಬಗ್ಗೆ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಗಸ್ತಿನಲ್ಲಿದ್ದ ಇನ್‌ಸ್ಪೆಕ್ಟರ್ ಯರ್ರಿಸ್ವಾಮಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಹೋಗಿ ಆರೋಪಿಯನ್ನು ಬಂಧಿಸಿದರು. ದೊಣ್ಣೆ ಜಪ್ತಿ ಮಾಡಿದ್ದಾರೆ' ಎಂದೂ ಮೂಲಗಳು ಹೇಳಿವೆ.

### ಬಕ್ರೀದ್ ಹಬ್ಬ ಆಚರಣೆಗೆ ಮಾರ್ಗಸೂಚಿ ಪ್ರಕಟ

# ಮಸೀದಿಗಳಲ್ಲಿ ಪ್ರಾರ್ಥನೆಗೆ 50 ಜನರ ಮಿತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇದೇ 21ರಂದು ನಡೆಯಲಿರುವ ಬಕ್ರೀದ್ ಹಬ್ಬ ಆಚರಣೆಯ ವೇಳೆ ಮಸೀದಿಗಳಲ್ಲಿ ಒಮ್ಮೆಗೆ 50 ಜನರು ಮಾತ್ರ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡುವಂತೆ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಪ್ರಾರ್ಥನಾ ಸ್ಥಳಗಳಲ್ಲಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ನಮಾಜ್ ಮಾಡುವಾಗ ಕನಿಷ್ಠ ಆರು ಅಡಿಗಳ ಅಂತರ ಕಾಯ್ದುಕೊಳ್ಳಬೇಕು. 65 ವರ್ಷಕ್ಕಿಂತ ಮೇಲ್ಪಟ್ಟವರು ಮತ್ತು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮನೆಯಲ್ಲೇ ಪ್ರಾರ್ಥನೆ ಸಲ್ಲಿಸಬೇಕು. ಮಸೀದಿ ಪ್ರವೇಶಿಸುವ ಮುನ್ನ ದೇಹದ ತಾಪಮಾನ ಪರೀಕ್ಷಿಸಬೇಕು. ಕೈಗಳನ್ನು ಸೋಪಿನಿಂದ ಅಥವಾ ಸ್ಯಾನಿಟೈಸರ್‌ನಿಂದ ಸ್ವಚ್ಛಗೊಳಿಸಿಕೊಳ್ಳಬೇಕು ಎಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ಪ್ರಾರ್ಥನೆ ಸಲ್ಲಿಸಲು ಅಗತ್ಯವಿರುವ ಮುಸಲ್ಲಾವನ್ನು (ವಸ್ತ್ರ) ಮನೆಯಿಂದಲೇ ತರುವಂತೆ ಸೂಚಿಸಬೇಕು. ಆಲಿಂಗನ ಮತ್ತು ಹಸ್ತಲಾಘವಕ್ಕೆ ಅವಕಾಶ ನೀಡಬಾರದು. 50ಕ್ಕಿಂತ ಹೆಚ್ಚು ಜನರು ಸೇರಿದಲ್ಲಿ ಪಂಕ್ತಿಯ ಆಧಾರದಲ್ಲಿ ಪ್ರಾರ್ಥನೆ ಸಲ್ಲಿಸಲು ವ್ಯವಸ್ಥೆ ಮಾಡಬೇಕು ಎಂದು ಸೂಚಿಸಲಾಗಿದೆ.

**ಪ್ರಾಣಿ ವಧೆಗೆ ನಿರ್ಬಂಧ:** ಬಕ್ರೀದ್ ಹಬ್ಬದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿ ವಧೆ ಮಾಡುವುದನ್ನು ನಿಷೇಧಿಸಲಾಗಿದೆ.

ರಸ್ತೆಗಳು, ಪಾದಚಾರಿ ಮಾರ್ಗಗಳು, ಆಸ್ಪತ್ರೆಗಳ ಆವರಣಗಳು, ನರ್ಸಿಂಗ್ ಹೋಂಗಳ ಒಳ ಮತ್ತು ಹೊರಾಂಗಣಗಳು, ಶಾಲಾ, ಕಾಲೇಜುಗಳ ಒಳಾಂಗಣ ಮತ್ತು ಹೊರಾಂಗಣ, ಆಟದ ಮೈದಾನ, ಮಸೀದಿ ಮತ್ತು ಇತರೆ ಧಾರ್ಮಿಕ ಸ್ಥಳಗಳು, ಉದ್ಯಾನದ ಒಳಗೆ, ಹೊರಗೆ ಸೇರಿದಂತೆ ಯಾವುದೇ ಸಾರ್ವಜನಿಕ ಪ್ರದೇಶಗಳಲ್ಲಿ ಪ್ರಾಣಿವಧೆ ಮಾಡುವಂತಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಗೂಂಡಾ ಕಾಯ್ದೆಯಡಿ ಜಿಬ್ರಾನ್ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದ ಜಿಬ್ರಾನ್‌ನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗಟ್ಟಲಾಗಿದೆ.

'ಹೊಸಗುಡ್ಡದಹಳ್ಳಿಯ ಮಂಜುನಾಥನಗರದ ಜಿಬ್ರಾನ್ ವಿರುದ್ಧ ಕೊಲೆ, ಕೊಲೆ ಯತ್ನ, ಸುಲಿಗೆ, ಅತ್ಯಾಚಾರ, ಪೊಲೀಸರ ಮೇಲೆ ಹಲ್ಲೆ ಸೇರಿದಂತೆ 15ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದವು. ಜೈಲು ಸೇರಿದ್ದ ಆತ ಜಾಮೀನು ಮೇಲೆ ಹೊರಬಂದು ಪುನಃ ಅಪರಾಧ ಕೃತ್ಯ ಎಸಗಲಾರಂಭಿಸಿದ್ದ' ಎಂದು ಪೊಲೀಸರು ಹೇಳಿದರು.

'ಜಾಮೀನು ಷರತ್ತು ಉಲ್ಲಂಘಿಸಿ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ ಆರೋಪಿ, ಸಾರ್ವಜನಿಕರ ಶಾಂತಿ ನೆಮ್ಮದಿಗೆ ಭಂಗವನ್ನುಂಟು ಮಾಡಿದ್ದ. ಆತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಬ್ಯಾಟರಾಯನಪುರ ಇನ್‌ಸ್ಪೆಕ್ಟರ್ ಅವರು ಡಿಸಿಪಿ ಮೂಲಕ ಕಮಿಷನರ್ ಅವರಿಗೆ ವರದಿ ಸಲ್ಲಿಸಿದ್ದರು. ಪರಿಶೀಲನೆ ನಡೆಸಿದ ಕಮಿಷನರ್, ಆರೋಪಿಯನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಅನುಮತಿ ನೀಡಿದ್ದರು' ಎಂದೂ ತಿಳಿಸಿದರು.

**ವಾಹನ ಜಪ್ತಿ- ಇಬ್ಬರ ಬಂಧನ:** ದ್ವಿಚಕ್ರ ವಾಹನ ಕಳವು ಆರೋಪದಡಿ ವಿಜಯನಗರ ಠಾಣೆ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

'ಕಾರ್ತಿಕ್ ಹಾಗೂ ಕಬೀರ್ ಪಾಷಾ ಬಂಧಿತರು. ಅವರಿಂದ ₹ 2.20 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.



ಎಸ್ಪಿ ಕೋನ ವಂಶಿ ಕೃಷ್ಣ ಮಾತನಾಡಿದರು. ಡಿವೈಎಸ್ಪಿ ಜಗದೀಶ್ ಇದ್ದಾರೆ

# 'ಡ್ರಗ್ಸ್ ಜಾಲ ನಿಗ್ರಹಕ್ಕೆ ಆದ್ಯತೆ'

ಪ್ರಜಾವಾಣಿ ವಾರ್ತೆ

**ನೆಲಮಂಗಲ:** 'ಮಾದಕ ವ್ಯಸನದಿಂದ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮಾದಕ ವಸ್ತುಗಳ ಸರಬರಾಜು ಜಾಲ ಮತ್ತು ಅದರ ಕಿಂಗ್‌ಪಿನ್‌ಗಳನ್ನು ಪತ್ತೆಹಚ್ಚಲು ಆದ್ಯತೆ ನೀಡಲಾಗುವುದು' ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೋನ ವಂಶಿ ಕೃಷ್ಣ ತಿಳಿಸಿದರು.

ನೆಲಮಂಗಲ ಉಪವಿಭಾಗದ ಪೊಲೀಸರು ಪತ್ತೆ ಹಚ್ಚಿದ ವಿವಿಧ ಅಪರಾಧ ಪ್ರಕರಣಗಳ ಸಂಬಂಧ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಶೀಘ್ರದಲ್ಲೇ ಕಾಲ್ನಡಿಗೆ ಗಸ್ತನ್ನು ಪ್ರಾರಂಭಿಸಲಾಗುವುದು. ಸಾರ್ವಜನಿಕರ ಸುರಕ್ಷತೆಗಾಗಿ ಹೆಚ್ಚು ಜನ ಸಂದಣಿಯಾಗುವ ಮಳಿಗೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸುವುದು ಕಡ್ಡಾಯ. ಸದಾ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸರಿಗೆ ಸಾರ್ವಜನಿಕರೊಂದಿಗೆ ಮೃದುವಾಗಿ ಮಾತನಾಡಲು ಕೌಶಲ ತರಬೇತಿ ನೀಡಲಾಗುತ್ತಿದೆ' ಎಂದರು.

'ಒಂದು ತಿಂಗಳಲ್ಲಿ 10 ಅಪರಾಧ ಪ್ರಕರಣಗಳಿಂದ ಅಂತರರಾಜ್ಯ ಆರೋಪಿಗಳು ಸೇರಿದಂತೆ 14 ಮಂದಿಯನ್ನು ಬಂಧಿಸಲಾಗಿದೆ. ₹19.13 ಲಕ್ಷ ಬೆಲೆ ಬಾಳುವ 490 ಗ್ರಾಂ ಚಿನ್ನಾಭರಣ, ಮೀನು ಪೆಟ್ಟಿಗೆಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹3 ಲಕ್ಷ ಮೌಲ್ಯದ 12 ಕೆ.ಜಿ. ಗಾಂಜಾ, ₹4.61 ಲಕ್ಷ ನಗದು ಸೇರಿದಂತೆ ಒಟ್ಟು ₹26.74 ಲಕ್ಷ ಮೌಲ್ಯದ ಮಾಲು ಜಪ್ತಿ ಮಾಡಲಾಗಿದೆ' ಎಂದರು.

ಪೊಲೀಸ್ ಅಧಿಕಾರಿಗಳಾದ ಜಗದೀಶ್, ಎ.ವಿ.ಕುಮಾರ್, ಹರೀಶ್, ಮಂಜುನಾಥ್ ಇದ್ದರು.

### ಕೆಎಸ್‌ಆರ್‌ಪಿ ಸಿಬ್ಬಂದಿ ಕವಾಯತು

# ತೂಕ ಇಳಿಸಿದ, ಮದ್ಯ ತ್ಯಜಿಸಿದವರಿಗೆ ಪ್ರಶಂಸೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಪೊಲೀಸ್ ಮೀಸಲು ಪಡೆಯ (ಕೆಎಸ್‌ಆರ್‌ಪಿ) ಸಿಬ್ಬಂದಿ ನಗರದಲ್ಲಿ ಶುಕ್ರವಾರ ಸೇವಾ ಕವಾಯತು ನಡೆಸಿದರು.

ಕೋರಮಂಗಲದ ಕೆಎಸ್‌ಆರ್‌ಪಿ ಮೈದಾನದಲ್ಲಿ ಆಯೋಜಿಸಿದ್ದ ಕವಾಯತನ್ನು ಎಡಿಜಿಪಿ ಅಲೋಕ್‌ಕುಮಾರ್ ವೀಕ್ಷಿಸಿದರು.

ಕೆಎಸ್‌ಆರ್‌ಪಿ ಬೆಂಗಳೂರಿನ ನಾಲ್ಕು ಪಡೆಯ ಸಿಬ್ಬಂದಿ ಕವಾಯತಿನಲ್ಲಿ ಪಾಲ್ಗೊಂಡು ಶಿಸ್ತಿನಿಂದ ಹೆಜ್ಜೆ ಹಾಕಿದರು. ಕವಾಯತಿಗೆ ತಕ್ಕ ವಾದ್ಯಮೇಳದ ಸಂಗೀತ ಗಮನ ಸೆಳೆಯಿತು.

ಕೋವಿಡ್ ಸಂದರ್ಭದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು 400ಕ್ಕೂ ಹೆಚ್ಚು ಸಿಬ್ಬಂದಿ, 10 ಕೆ.ಜಿ.ಗಿಂತ ಹೆಚ್ಚು ದೇಹದ ತೂಕ ಇಳಿಸಿದ್ದಾರೆ. 100ಕ್ಕೂ ಹೆಚ್ಚು ಸಿಬ್ಬಂದಿ ಧೂಮಪಾನ ಹಾಗೂ ಮದ್ಯಪಾನ ತ್ಯಜಿಸಿದ್ದಾರೆ. ಅವರೆಲ್ಲರಿಗೂ ಪ್ರಶಂಸನಾ ಪತ್ರ ನೀಡಿ ಮೆಚ್ಚುಗೆ ವ್ಯಕ್ತಪಡಿಸಲಾಯಿತು.

'ಕೋವಿಡ್ ಸಂದರ್ಭದಲ್ಲಿ ಸಾಕಷ್ಟು ಮಂದಿ ಮೃತಪಟ್ಟಿದ್ದಾರೆ. ಸದ್ಯದ ಸಿಬ್ಬಂದಿಯನ್ನು ಮಾನಸಿಕ ಹಾಗೂ ದೈಹಿಕವಾಗಿ ಸದೃಢಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಸಿಬ್ಬಂದಿ ಸಹ ತಮ್ಮ ಹಾಗೂ ಕುಟುಂಬದವರ ಆರೋಗ್ಯ ಸುಧಾರಣೆಗೆ ಒತ್ತು ನೀಡಿರುವುದು ಖುಷಿ ಸಂಗತಿ' ಎಂದು ಅಲೋಕ್‌ಕುಮಾರ್ ಹೇಳಿದರು.



ಕೋವಿಡ್ ನಿರ್ಬಂಧಗಳನ್ನು ಮತ್ತಷ್ಟು ಸಡಿಲಿಸಿರುವ ಕಾರಣ ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಶುಕ್ರವಾರ ಜನದಟ್ಟಣೆ ಉಂಟಾಗಿತ್ತು – ಪ್ರಜಾವಾಣಿ ಚಿತ್ರ



ಮಂಗಳೂರಿನ ಹೊರವಲಯದ ಕುಲಶೇಖರದ ರೈಲ್ವೇ ಸುರಂಗದ ಬಳಿ ಶುಕ್ರವಾರ ತಡೆಗೋಡೆಯೊಂದಿಗೆ ರೈಲ್ವೇ ಹಳಿ ಮೇಲೆ ಮಣ್ಣು ಕುಸಿದು ಬಿದ್ದಿದೆ –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್



ಕಾರವಾರ ತಾಲ್ಲೂಕಿನ ಅಸ್ನೋಟಿ ಗ್ರಾಮದ ಬಳಿ ಸದಾಶಿವಗಡ–ಔರಾದ್ ರಾಜ್ಯ ಹೆದ್ದಾರಿಯಲ್ಲಿ ನೀರು ತುಂಬಿಕೊಂಡು ಸವಾರರು ಪರದಾಡುವಂತಾಯಿತು

## ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 93.30 | 22,027 | 2,197 |
| ಹಾರಂಗಿ | 2,859 | 2,857.36 | 3,340 | 11,800 |
| ಕಬಿನಿ | 2,284.00 | 2,280.51 | 19,190 | 15,000 |
| ಹೇಮಾವತಿ | 2,922 | 2,901.45 | 16,669 | 200 |
| ಲಿಂಗನಮಕ್ಕಿ | 1,819 | 1,789.55 | 34,905 | - |
| ಸೂಪಾ (ಮೀ) | 564 | 540.70 | 21,158 | 320 |
| ಮಾಣಿ | 594.36 | 575.94 | 4,360 | - |
| ತುಂಗಭದ್ರಾ | 1,633 | 1,611.35 | 11,920 | 291 |
| ಮಲಪ್ರಭಾ | 2,079.50 | 2,064.80 | 8,678 | 194 |
| ಘಟಪ್ರಭಾ | 2,175 | 2,141.91 | 13,123 | 121 |
| ಭದ್ರಾ | 186 | 161.10 | 23,217 | 786 |
| ಆಲಮಟ್ಟಿ (ಮೀ) | 519.60 | 517.69 | 45,534 | 43,960 |
| ನಾರಾಯಣಪುರ (ಮೀ) | 492.25 | 491.38 | 45,500 | 45,720 |

* ನೆಲಮಟ್ಟದಿಂದ

ಕರಾವಳಿ, ಮಲೆನಾಡಿನಲ್ಲಿ ಮುಂದುವರಿದ ಮಳೆ • ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 31 ಮನೆಗಳಿಗೆ ಹಾನಿ

# ಹಳಿ ಮೇಲೆ ಮಣ್ಣು ಕುಸಿತ: ರೈಲು ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿ ನಿರಂತರ ಮಳೆ ಸುರಿಯುತ್ತಿದೆ. ಹಲವೆಡೆ ಮನೆಗಳಿಗೆ ಹಾನಿಯಾಗಿದ್ದು, ಮರಗಳು ರಸ್ತೆಗೆ ಬಿದ್ದಿವೆ.

ಮಂಗಳೂರು ಹೊರವಲಯದ ಕುಲಶೇಖರ ಬಳಿ ರೈಲ್ವೆ ಹಳಿಮೇಲೆ ಮಣ್ಣು ಕುಸಿದಿದ್ದು, ಮಂಗಳೂರಿನ ಮೂಲಕ ಕೊಂಕಣ ರೈಲು ಮಾರ್ಗದಲ್ಲಿ ಸಂಚರಿಸುವ ರೈಲುಗಳ ಓಡಾಟ ಸ್ಥಗಿತಗೊಂಡಿದೆ. ಕೆಲ ರೈಲುಗಳನ್ನು ಶೋರನೂರ್, ಸೇಲಂ, ಜೋಲಾರಪೇಟೆ, ರೇಣಿಗುಂಟಾ ಮಾರ್ಗದಲ್ಲಿ ಓಡಿಸಲು ನಿರ್ಧರಿಸಲಾಗಿದೆ.

ಮಂಗಳೂರು ಜಂಕ್ಷನ್–ತೋಕೂರು ನಿಲ್ದಾಣಗಳ ನಡುವೆ ಈ ಘಟನೆ ನಡೆದಿದ್ದು, ಮುಂಬೈಯಿಂದ ಮಂಗಳೂರಿಗೆ ಬರುವ ರೈಲುಗಳು ತೋಕೂರು ನಿಲ್ದಾಣದವರೆಗೆ ಮಾತ್ರ ಸಂಚರಿಸಿದ್ದು, ಅಲ್ಲಿಂದಲೇ ಮರಳಿ ಮುಂಬೈಗೆ ಪ್ರಯಾಣಿಸಿವೆ. ಶುಕ್ರವಾರ ಸಂಚರಿಸಬೇಕಿದ್ದ ಕಾರವಾರ–ಕೆಎಸ್‌ಆರ್ ಬೆಂಗಳೂರು (ರೈ. ಸಂ.06586) ದೈನಂದಿನ ವಿಶೇಷ ರೈಲನ್ನು ರದ್ದುಪಡಿಸಲಾಗಿತ್ತು.

ಎರಡು ವರ್ಷದ ಹಿಂದೆಯೂ ಇದೇ ಜಾಗದಲ್ಲಿ ಮಣ್ಣು ಕುಸಿದು ಎರಡು ದಿನ ರೈಲು ಸಂಚಾರ ಸ್ಥಗಿತವಾಗಿತ್ತು. ಬಳಿಕ ಮಣ್ಣು ಕುಸಿಯುವ ಜಾಗದಲ್ಲಿ ತಡೆಗೋಡೆ ನಿರ್ಮಿಸಲಾಗಿತ್ತು. ಇದೀಗ ತಡೆಗೋಡೆಯಲ್ಲಿ ಬಿರುಕು ಬಿಟ್ಟು, ಹಳಿ ಮೇಲೆ ಬಿದ್ದಿದೆ.

**ಧಾರಾಕಾರ ಮಳೆ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ 31 ಮನೆಗಳಿಗೆ ಹಾನಿಯಾಗಿದೆ. ಇವುಗಳಲ್ಲಿ ನಾಲ್ಕು ಮನೆಗಳು ಪೂರ್ಣ ಹಾಗೂ 27 ಮನೆಗಳು ಭಾಗಶಃ ಹಾನಿಗೊಂಡಿವೆ. ಕೊಟ್ಟಾರ ಚೌಕಿಯಲ್ಲಿ ರಾಜಕಾಲುವೆ ತುಂಬಿ ಹರಿದಿದ್ದು, ರಸ್ತೆಯ ಮೇಲೆ ನೀರು ಹರಿದು ಸಂಚಾರಕ್ಕೆ ತೊಂದರೆ ಉಂಟಾಗಿತ್ತು. ಮಳೆ, ಗಾಳಿಯಿಂದಾಗಿ ಉಳ್ಳಾಲದ ಸುತ್ತ ಸಮುದ್ರದ ಅಬ್ಬರ ಹೆಚ್ಚಾಗಿದ್ದು, ಕಡಲ್ಕೊರೆತ ಉಂಟಾಗಿದೆ.

ಉಡುಪಿ ಜಿಲ್ಲೆಯಲ್ಲೂ ಮಳೆ ಬಿರುಸುಗೊಂಡಿದ್ದು, ಬಿರುಗಾಳಿ ಮಳೆಗೆ 18ಕ್ಕೂ ಅಧಿಕ ಮನೆಗಳಿಗೆ ಹಾನಿಯಾಗಿದೆ. ಕುಂದಾಪುರ ತಾಲ್ಲೂಕಿನ ಇಡೂರು, ಅಂಪಾರಿನಲ್ಲಿ ಅಡಿಕೆ ತೋಟಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಕೋಗೆ ಗ್ರಾಮ ಬಳಿ ಮರ ನೆಲಕ್ಕೆ ಉರುಳಿದ್ದು, ಎಂಟು ವಿದ್ಯುತ್ ಕಂಬಗಳು ಬಿದ್ದಿವೆ. ಕಡೂರು, ಮೂಡಿಗೆರೆ, ಶೃಂಗೇರಿ, ಕೊಪ್ಪ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

### ಗರಿಷ್ಠ ಮಳೆ ಪ್ರಮಾಣ

ಎಲ್ಲಿ, ಎಷ್ಟು: ಸೆಂ.ಮೀ. ಗಳಲ್ಲಿ

| ಸ್ಥಳ | ಸೆಂ.ಮೀ. |
|---|---|
| **ದಕ್ಷಿಣ ಕನ್ನಡ ಜಿಲ್ಲೆ** | |
| ಮೂಲ್ಕಿ | 20 |
| ಮಂಚಿ | 15.8 |
| ಮಾಣಿ | 15 |
| **ಉಡುಪಿ ಜಿಲ್ಲೆ** | |
| ಹೆಬ್ರಿ | 17.5 |
| **ಚಿಕ್ಕಮಗಳೂರು ಜಿಲ್ಲೆ** | |
| ಹೊರನಾಡು | 15.2 |
| ಕೆರೆಕಟ್ಟೆ | 12.1 |
| ಕಿಗ್ಗಾ | 9.1 |
| **ಕೊಡಗು ಜಿಲ್ಲೆ** | |
| ಶಾಂತಳ್ಳಿ | 9.4 |
| ಭಾಗಮಂಡಲ | 8.5 |
| ಮಡಿಕೇರಿ | 7.8 |
| **ಹಾಸನ ಜಿಲ್ಲೆ** | |
| ಮಾರನಹಳ್ಳಿ | 7 |
| ಹೆತ್ತೂರು | 6 |
| ಸಕಲೇಶಪುರ | 5 |
| ಹಾನುಬಾಳು | 5 |
| ಹೊಸೂರು | 5 |
| ಹಾನುಬಾಳು | 5 |

## ಕೊಡಗು, ಹಾಸನದಲ್ಲಿ ಇಳಿದ ಅಬ್ಬರ

**ಮಡಿಕೇರಿ/ಹಾಸನ:** ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಮಳೆಯ ಅಬ್ಬರ ತಗ್ಗಿದ್ದು, ಬಿಡುವು ಕೊಟ್ಟು ಅಲ್ಲಲ್ಲಿ ಉತ್ತಮ ಮಳೆ ಸುರಿದಿದೆ. ಭಾಗಮಂಡಲದ ತ್ರಿವೇಣಿ ಸಂಗಮ ಹಾಗೂ ಕಾವೇರಿ ನದಿಯಲ್ಲೂ ನೀರಿನಮಟ್ಟ ಸ್ವಲ್ಪ ಇಳಿಕೆಯಾಗಿದೆ.

ಹಾಸನ ಜಿಲ್ಲೆಯಲ್ಲೂ ಮಳೆ ಆರ್ಭಟ ಕಡಿಮೆಯಾಗಿದೆ. ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಕಾಫಿ, ಅಡಿಕೆ ತೋಟ ಜಲಾವೃತಗೊಂಡಿದ್ದು, ಬೆಳೆ ನಷ್ಟದ ಭೀತಿ ಎದುರಾಗಿದೆ. ಬಿರುಗಾಳಿಯಿಂದಾಗಿ ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಿದೆ. ಯಸಳೂರು ಹೋಬಳಿ ಚಂಗಡಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋನಹಳ್ಳಿ ಗ್ರಾಮದಲ್ಲಿ ಮನೆಯ ಗೋಡೆಯೊಂದು ಕುಸಿದು ಬಿದ್ದಿದೆ.

ಜಲಾನಯನ ಪ್ರದೇಶದಲ್ಲಿ ಜೋರು ಮಳೆಯಿಂದಾಗಿ ಹೇಮಾವತಿ ಜಲಾಶಯದ ಒಳಹರಿವು ಏರಿದೆ. ಜಿಟಿಜಿಟಿ ಮಳೆಯಿಂದಾಗಿ ಗ್ರಾಮೀಣ ಭಾಗದಲ್ಲಿ ಕೃಷಿ ಚಟುವಟಿಕೆ ಸ್ಥಗಿತೊಂಡಿದೆ. ಹಾರಂಗಿ ಜಲಾಶಯದಿಂದ ಹೆಚ್ಚುವರಿ ನೀರು ಹೊರ ಬಿಟ್ಟಿರುವುದರಿಂದ ರಾಮನಾಥಪುರದಲ್ಲಿ ಕಾವೇರಿ ನದಿ ನೀರಿನ ಮಟ್ಟ ಏರಿಕೆಯಾಗಿದೆ.

**ಒಳಹರಿವು ಹೆಚ್ಚಳ:** ಕಾವೇರಿ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆಯಾಗುತ್ತಿರುವುದರಿಂದ ಮಂಡ್ಯ ಜಿಲ್ಲೆ ಕೆಆರ್‌ಎಸ್ ಜಲಾಶಯದ ಒಳಹರಿವಿನ ಪ್ರಮಾಣ 22,027 ಕ್ಯುಸೆಕ್‌ಗೆ ಹೆಚ್ಚಿದೆ.

ಮೈಸೂರು ಜಿಲ್ಲೆಯ ಕಬಿನಿ ಜಲಾಶಯದ ಒಳಹರಿವಿನ ಪ್ರಮಾಣ 19,190 ಕ್ಯುಸೆಕ್‌ಗೆ ಹೆಚ್ಚಿದೆ. ಮುನ್ನೆಚ್ಚರಿಕೆ ಕ್ರಮವಾಗಿ 15,000 ಕ್ಯುಸೆಕ್ ನೀರನ್ನು ಹೊರಬಿಡಲಾಗಿದೆ.

ಬೆಟ್ಟದಪುರ ಸಮೀಪದ ರಾಜನಬಿಳುಗೂಲಿ ಗ್ರಾಮದಲ್ಲಿ ಗುರುವಾರ ಸಂಜೆ ಬಿದ್ದ ಮಳೆಗೆ, ಉಮೇಶ್ ಎಂಬುವರ ಮನೆಯ ಚಾವಣಿ ಹಾಗೂ ಗೋಡೆ ಕುಸಿದಿದೆ.



ಮೈಸೂರು ಜಿಲ್ಲೆ ಚುಂಚನಕಟ್ಟೆಯಲ್ಲಿರುವ ಧನುಷ್ಕೋಟಿ ಜಲಪಾತದ ಮನೋಹರ ದೃಶ್ಯ

## ಶಿವಮೊಗ್ಗದಲ್ಲಿ ತಗ್ಗಿದ ಮಳೆ

**ಶಿವಮೊಗ್ಗ:** ಜಿಲ್ಲೆಯಾದ್ಯಂತ ಮಳೆ ಪ್ರಮಾಣ ತಗ್ಗಿದ್ದು, ಜಲಾಶಯಗಳ ಒಳಹರಿವು ಪ್ರಮಾಣ ಇಳಿಕೆಯಾಗಿದೆ.

ಲಿಂಗನಮಕ್ಕಿ ಜಲಾಶಯದ ಒಳ ಹರಿವು 34,905 ಕ್ಯುಸೆಕ್‌ಗೆ ಇಳಿಕೆಯಾಗಿದೆ. ಜಲಾಶಯದ ನೀರಿನ ಮಟ್ಟ 1789.55 ಅಡಿಗಳಷ್ಟಿದೆ. ಇನ್ನು, ಭದ್ರಾ ಜಲಾಶಯಕ್ಕೆ 23,217 ಕ್ಯುಸೆಕ್ ನೀರು ಹರಿದುಬರುತ್ತಿದೆ. ನೀರಿನ ಮಟ್ಟ 161.10 ಅಡಿಯಷ್ಟಿದೆ.

ಗಾಜನೂರಿನ ತುಂಗಾ ಜಲಾಶಯದಲ್ಲಿ ಒಳ ಮತ್ತು ಹೊರಹರಿವು ಪ್ರಮಾಣ ಕೂಡ ಕುಸಿತ ಕಂಡಿದೆ. 38,963 ಕ್ಯುಸೆಕ್ ನೀರು ಹರಿದು ಬಂದಿದೆ. ಅಷ್ಟೇ ಪ್ರಮಾಣದ ನೀರನ್ನು ಹೊರಗೆ ಬಿಡಲಾಗುತ್ತಿದೆ.

ದಾವಣಗೆರೆ ನಗರ ಸೇರಿದಂತೆ ತ್ಯಾವಣಿಗಿ, ಮಲೇಬೆನ್ನೂರು ಭಾಗಗಳಲ್ಲಿ ಮಳೆಯಾಗಿದೆ. ಮಲೇಬೆನ್ನೂರು ಸಮೀಪದ ಉಕ್ಕಡಗಾತ್ರಿ ಗ್ರಾಮದಲ್ಲಿ ತುಂಗಭದ್ರಾ ನದಿ ನೀರಿನ ಹರಿವಿನ ಪ್ರಮಾಣ ಹೆಚ್ಚಾಗಿದ್ದು, ನದಿಪಾತ್ರಕ್ಕೆ ಜನ–ಜಾನುವಾರು ತೆರಳದಂತೆ ಸೂಚನೆ ನೀಡಲಾಗಿದೆ.

## ಅಸ್ನೋಟಿ ಬಳಿ ರಾಜ್ಯ ಹೆದ್ದಾರಿ ಜಲಾವೃತ: ಸಂಚಾರಕ್ಕೆ ಅಡಚಣೆ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಶುಕ್ರವಾರವೂ ಮಳೆ ಮುಂದುವರಿದಿದೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಶುಕ್ರವಾರ ವ್ಯಾಪಕ ಮಳೆ ಸುರಿದಿದ್ದು, ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಅಬ್ಬರ ಸ್ವಲ್ಪ ಕಡಿಮೆಯಾಗಿದೆ.

ಸದಾಶಿವಗಡ – ಔರಾದ್ ರಾಜ್ಯ ಹೆದ್ದಾರಿ ಅಸ್ನೋಟಿ ಬಳಿ ಜಲಾವೃತವಾಗಿ ಸಂಚಾರಕ್ಕೆ ಕೆಲಹೊತ್ತು ಅಡಚಣೆಯಾಗಿತ್ತು. ಗೋಕರ್ಣದ ರಥಬೀದಿಯಲ್ಲೂ ನೀರು ತುಂಬಿಕೊಂಡಿತ್ತು. ಹೊನ್ನಾವರ ತಾಲ್ಲೂಕಿನ ಗುಂಡಬಾಳ ನದಿ ಉಕ್ಕೇರುತ್ತಿದ್ದು ಅಕ್ಕಪಕ್ಕದ ಅಡಿಕೆ ತೋಟಗಳಿಗೆ ನೀರು ನುಗ್ಗಿದೆ. ಶಿರಸಿ, ಕುಮಟಾ, ಸಿದ್ದಾಪುರ, ಮುಂಡಗೋಡದಲ್ಲಿ ಮಳೆ ಸಾಧಾರಣವಾಗಿದ್ದರೆ, ಜೋಯಿಡಾದಲ್ಲಿ ಇಳಿಮುಖಗೊಂಡಿದೆ.

ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯಲ್ಲಿ ಮಳೆಯಾಯಿತು. ಘಟಪ್ರಭಾದಲ್ಲಿ ಜೋರಾಗಿತ್ತು. ಎರಡು ದಿನಗಳಿಂದ ಮಹಾರಾಷ್ಟ್ರದ ಘಟ್ಟ ಪ್ರದೇಶಗಳಲ್ಲಿ ಮಳೆ ಮುಂದುವರಿದಿದ್ದು, ಕೃಷ್ಣಾ ನದಿಯಲ್ಲಿ ನೀರಿನ ಹರಿವು ಹೆಚ್ಚಳವಾಗಿದ್ದು, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ-ಯಡೂರು ಕೆಳ ಸೇತುವೆ ಜಲಾವೃತಗೊಂಡಿದೆ. ಜನರ ಸಂಚಾರಕ್ಕೆ ಪರ್ಯಾಯ ಸೇತುವೆ ಇದೆ. ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 44,750 ಕ್ಯುಸೆಕ್ ಮತ್ತು ದೂಧ್‌ಗಂಗಾ ನದಿಯಿಂದ 11,649 ಕ್ಯುಸೆಕ್ ಸೇರಿ 56,399 ಕ್ಯುಸೆಕ್ ನೀರು ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಸೇರುತ್ತಿದೆ.

ಧಾರವಾಡ, ಹುಬ್ಬಳ್ಳಿ, ಬಾಗಲಕೋಟೆ ಹಾಗೂ ವಿಜಯನಗರ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿಯಲ್ಲಿ ಮಳೆಯಾಗಿದೆ.



ಕೊಡಗು ಜಿಲ್ಲೆಯ ಹಾರಂಗಿ ಜಲಾಶಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಶುಕ್ರವಾರ ಬಾಗಿನ ಅರ್ಪಿಸಿದರು

## ಕರಾವಳಿ ಜಿಲ್ಲೆಗಳಲ್ಲಿ 'ರೆಡ್ ಅಲರ್ಟ್'

**ಬೆಂಗಳೂರು:** ಕರಾವಳಿ ಭಾಗದ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಜು.17 ಮತ್ತು 18ರಂದು ಗುಡುಗು, ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆ ಇದ್ದು, 'ರೆಡ್ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮುಂಗಾರು ಬಿರುಸುಗೊಂಡಿದ್ದು, ಈ ಭಾಗಗಳ ಜಿಲ್ಲೆಗಳಲ್ಲಿ ಜು.20ರವರೆಗೆ ಮಳೆಯಾಗುವ ಮುನ್ಸೂಚನೆ ಇದೆ. ಕರಾವಳಿಯಲ್ಲಿ ಗಂಟೆಗೆ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುತ್ತಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಇಲಾಖೆ ಸೂಚಿಸಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲೂ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ತುಮಕೂರು, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

## ಜಿಂದಾಲ್‌ಗೆ ಜಮೀನು: ಆಕ್ಷೇಪಣೆ ಸಲ್ಲಿಸದ ಸರ್ಕಾರಕ್ಕೆ ತರಾಟೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜೆಎಸ್‌ಡಬ್ಲ್ಯು ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಭೂಮಿ ಮಾರಾಟ ಮಾಡುವ ಪ್ರಸ್ತಾಪ ಪ್ರಶ್ನಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಆಕ್ಷೇಪಣಾ ಹೇಳಿಕೆ ಸಲ್ಲಿಸದ ರಾಜ್ಯ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

'ಮುಂದಿನ ದಿನಾಂಕದ ತನಕ ಕ್ರಯ ಪತ್ರ ಕಾರ್ಯಗತಗೊಳಿಸುವುದಿಲ್ಲ ಎಂಬ ಹೇಳಿಕೆ ಸಲ್ಲಿಸಲು ಸರ್ಕಾರ ಸಿದ್ಧವಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಹೇಳಿಕೆ ಸಲ್ಲಿಸಲು ಸಮಯ ಕೇಳಿ ಅಡ್ವೊಕೇಟ್ ಜನರಲ್ ಮಾಡಿದ ಮನವಿ ಮೇರೆಗೆ ವಿಚಾರಣೆಯನ್ನು ಪೀಠ ಸೋಮವಾರಕ್ಕೆ ಮುಂದೂಡಿತು.

ಸಂಪುಟದ ಹಲವು ಸಚಿವರ ವಿರೋಧ ಇದ್ದರೂ ಕಡಿಮೆ ದರದಲ್ಲಿ ಸರ್ಕಾರದ ಜಾಗವನ್ನು ಜೆಎಸ್‌ಡಬ್ಲ್ಯು ಕಂಪನಿಗೆ ಮಾರಾಟ ಮಾಡಲು ಸರ್ಕಾರ ಹೊರಟಿದೆ ಎಂದು ಕೆ.ಎ. ಪಾಲ್ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.



## ಸಿಡಿ ಪ್ರಕರಣ: 19ಕ್ಕೆ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಾಜಿ ಸಚಿವ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸಿ.ಡಿ ಪ್ರಕರಣದ ತನಿಖೆಯ ಸಮಗ್ರ ವರದಿಯನ್ನು ಇದೇ 19ರಂದು ಸಲ್ಲಿಸಲಾಗುವುದು ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಶುಕ್ರವಾರ ತಿಳಿಸಿತು.

ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠವು, ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ರಚನೆ ಮತ್ತು ಅದು ನಡೆಸಿದ ತನಿಖೆಯ ಪ್ರಗತಿಯ ಬಗ್ಗೆ ಪ್ರಶ್ನಿಸಿದಾಗ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವಡಗಿ ಈ ಉತ್ತರ ನೀಡಿದರು.

'ಪ್ರಕರಣಕ್ಕೆ ಸಂಬಂಧಿಸಿದ ಸಮಗ್ರ ತನಿಖಾ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ಅವರು ಹೇಳಿದರು.

'ಎಸ್‌ಐಟಿಯು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಪಾರದರ್ಶಕ ತನಿಖೆ ನಡೆಯಬೇಕೆಂದರೆ ಪ್ರಕರಣದ ತನಿಖೆಯ ಹೊಣೆಯನ್ನು ಬೇರೆ ಸಂಸ್ಥೆಗೆ ವರ್ಗಾಯಿಸಬೇಕು' ಎಂದು ಸಂತ್ರಸ್ತ ಯುವತಿಯು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

'ಗೃಹಸಚಿವರು ನಗರ ಪೊಲೀಸ್ ಕಮಿಷನರ್ ಅವರಿಗೆ ಬರೆದ ಪತ್ರದ ಆಧಾರದ ಮೇಲೆ ಎಸ್‌ಐಟಿಯನ್ನು ರಚಿಸಲಾಗಿದೆ. ರಮೇಶ ಜಾರಕಿಹೊಳಿ ಅವರ ಮನವಿಯ ಮೇರೆಗೇ ಗೃಹ ಸಚಿವರು ಈ ಪತ್ರ ಬರೆದಿದ್ದು, ತನಿಖೆಯು ಪಾರದರ್ಶಕವಾಗಿ ನಡೆದಿಲ್ಲ' ಎಂದು ಯುವತಿ ದೂರಿದ್ದರು.

ಇದರ ನಂತರ, ಮತ್ತೊಂದು ಅರ್ಜಿ ಸಲ್ಲಿಸಿದ್ದ ಯುವತಿ, 'ಸದಾಶಿವನಗರ ಠಾಣೆಯಲ್ಲಿ ರಮೇಶ ಜಾರಕಿಹೊಳಿಯವರ ಪರವಾಗಿ ಎಂ.ವಿ. ನಾಗರಾಜು ಅವರು ನೀಡಿದ್ದ ದೂರನ್ನೂ ರದ್ದು ಮಾಡಬೇಕು' ಎಂದೂ ಕೋರಿದ್ದರು.

ಈ ಎರಡೂ ಅರ್ಜಿಗಳ ವಿಚಾರಣೆಯು ಶುಕ್ರವಾರ ನಡೆಯಿತು.

## ನದಿಯಲ್ಲಿ ಕೊಚ್ಚಿಕೊಂಡು ಹೋದ ಮಹಿಳೆ

**ಕಲಬುರ್ಗಿ:** ಜಿಲ್ಲೆಯ ಸೇಡಂ ತಾಲ್ಲೂಕಿನ ಸಂಗಾವಿ (ಎಂ) ಗ್ರಾಮದ ಬಳಿಯ ಕಾಗಿಣಾ ನದಿಯಲ್ಲಿ ಬಟ್ಟೆ ತೊಳೆಯಲು ಹೋದ ಮಹಿಳೆ ಮಾಣಿಕಮ್ಮ (28) ಶುಕ್ರವಾರ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧೆಡೆ ಧಾರಾಕಾರ ಮಳೆ ಸುರಿದಿದ್ದು, ಕಾಗಿಣಾ ನದಿಯಲ್ಲಿ ಪ್ರವಾಹ ಸ್ಥಿತಿ ಉಂಟಾಗಿದೆ.

ಯಾದಗಿರಿ, ಸುರಪುರ ನಗರದಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ. ರಾಯಚೂರು ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

## ಹಾರಂಗಿಗೆ ಬಾಗಿನ ಅರ್ಪಣೆ

ಪ್ರಜಾವಾಣಿ ವಾರ್ತೆ

**ಕುಶಾಲನಗರ (ಕೊಡಗು ಜಿಲ್ಲೆ):** ಕಾವೇರಿ ಕಣಿವೆಯ ಪ್ರಮುಖ ಜಲಾಶಯವಾದ ಹಾರಂಗಿ ಭರ್ತಿಯಾಗಿದ್ದು, ಶುಕ್ರವಾರ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಜಲಾಶಯಕ್ಕೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿದರು. ಅದಕ್ಕೂ ಮೊದಲು ಜಲಾಶಯದ ಉದ್ಯಾನದಲ್ಲಿರುವ ಕಾವೇರಿ ಮಾತೆಯ ಪ್ರತಿಮೆಗೂ ಪೂಜೆ ಸಲ್ಲಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಸರ್ಕಾರಕ್ಕೆ ಪ್ರಕೃತಿಯೂ ಆಶೀರ್ವಾದ ಮಾಡುತ್ತಿದೆ. ಎರಡು ವರ್ಷಗಳಿಂದ ರಾಜ್ಯದಲ್ಲಿ ಎಲ್ಲೂ ಬರದ ಛಾಯೆ ಆವರಿಸಿಲ್ಲ. ಆದರೆ, ಅತಿವೃಷ್ಟಿಯಿಂದ ಸ್ವಲ್ಪ ತೊಂದರೆ ಉಂಟಾಗಿದೆ. ಭಾರಿ ಮಳೆಯಿಂದ ತೊಂದರೆಗೆ ಒಳಗಾದವರಿಗೆ ಸೂಕ್ತ ಪರಿಹಾರವನ್ನೂ ನೀಡಲಾಗುತ್ತಿದೆ' ಎಂದರು.

'ಕೊಡಗು ಸೇರಿದಂತೆ ಕೆ.ಆರ್. ನಗರ, ಮೈಸೂರು, ಹಾಸನ, ಅರಕಲಗೂಡು, ಹುಣಸೂರಿನ 1.65 ಲಕ್ಷ ಹೆಕ್ಟೇರ್ ಪ್ರದೇಶಗಳಿಗೆ ಹಾರಂಗಿ ಜಲಾಶಯವು ನೀರು ಒದಗಿಸುತ್ತಿದೆ' ಎಂದು ಮಾಹಿತಿ ನೀಡಿದರು.

ಕೊಡಗಿನಲ್ಲಿ ಒಂದು ವಾರ ಸುರಿದ ಭಾರಿ ಮಳೆ ಹಾಗೂ ಗಾಳಿಯಿಂದ ಅಂದಾಜು ₹ 1 ಕೋಟಿಯಷ್ಟು ನಷ್ಟವಾಗಿದೆ. ಮಡಿಕೇರಿ ತಾಲ್ಲೂಕಿನ ಅವಂದೂರಿನ ಹೊಳೆಯಲ್ಲಿ ವ್ಯಕ್ತಿಯೊಬ್ಬರು ಕೊಚ್ಚಿ ಹೋಗಿ ಮೃತಪಟ್ಟಿದ್ದು, ಅವರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು ಎಂದು ಮಾಹಿತಿ ನೀಡಿದರು.




ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

# ಪ್ರಜ್ಞಾ ಸಿಂಗ್ ಲಸಿಕೆ ವಿವಾದ

ಪ್ರಜಾವಾಣಿ ವಾರ್ತೆ

**ಭೋಪಾಲ್:** ಭೋಪಾಲ್‌ನ ಬಿಜೆಪಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ಅವರು ತಮ್ಮ ಮನೆಯಲ್ಲಿಯೇ ಕೋವಿಡ್ ಲಸಿಕೆ ಹಾಕಿಸಿಕೊಂಡದ್ದು ಈಗ ವಿವಾದಕ್ಕೆ ಕಾರಣವಾಗಿದೆ. 'ಸಂಸದೆಗೆ ಮನೆಯಲ್ಲಿಯೇ ಲಸಿಕೆ ಹಾಕುವ ಮೂಲಕ ಲಸಿಕೆ ನಿಯಮಗಳನ್ನು ಉಲ್ಲಂಘಿಸಲಾಗಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

ಪ್ರಜ್ಞಾ ಸಿಂಗ್ ಅವರು ಶುಕ್ರವಾರ ತಮ್ಮ ಮನೆಯಲ್ಲಿಯೇ ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದರು. ಜತೆಗೆ ಇದು ತಮ್ಮ ಮೊದಲ ಡೋಸ್ ಎಂದು ಅವರು ಹೇಳುತ್ತಿರುವ ವಿಡಿಯೊವನ್ನು ಅವರು ಟ್ವೀಟ್ ಮಾಡಿದ್ದರು.

'ರಾಜ್ಯದ ಜನರು ಗಂಟೆಗಟ್ಟಲೆ ಕಾದು ನಿಂತು ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ. ಆದರೆ ಸಂಸದೆ ಜನರನ್ನು ಬದಿಗೊತ್ತಿ, ಮನೆಯಲ್ಲಿಯೇ ಲಸಿಕೆ ಹಾಕಿಸಿಕೊಂಡಿದ್ದಾರೆ' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಟೀಕಿಸಿದೆ.


ಇದಕ್ಕೆ ರಾಜ್ಯದ ಆರೋಗ್ಯ ಇಲಾಖೆ ಅಧಿಕಾರಿಗಳು ಸ್ಪಷ್ಟನೆ ನೀಡಿದರು. 'ವೃದ್ಧರಿಗೆ ಮತ್ತು ಅಂಗವಿಕಲರಿಗೆ ಮನೆಯಲ್ಲಿಯೇ ಲಸಿಕೆ ಹಾಕಲು ಅವಕಾಶವಿದೆ. ಪ್ರಜ್ಞಾ ಸಿಂಗ್ ಅವರಿಗೆ ಲಸಿಕೆ ಹಾಕಿದ್ದರಲ್ಲಿ ಯಾವುದೇ ನಿಯಮವನ್ನು ಉಲ್ಲಂಘನೆ ಮಾಡಿಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ. ಇದನ್ನೂ ಕಾಂಗ್ರೆಸ್ ನಾಯಕರು ಟೀಕಿಸಿದ್ದಾರೆ.


ಪ್ರಜ್ಞಾ ಸಿಂಗ್

'ಒಂದೆರಡು ದಿನಗಳ ಹಿಂದೆಯಷ್ಟೇ ಪ್ರಜ್ಞಾ ಸಿಂಗ್ ಅವರು ತಮ್ಮ ಮನೆಯಲ್ಲಿ ಮದುವೆಯೊಂದನ್ನು ಆಯೋಜಿಸಿದ್ದರು. ಆ ಮದುವೆಯಲ್ಲಿ ಅವರು ನೃತ್ಯ ಮಾಡಿದ್ದಾರೆ. ಈಚೆಗೆ ಬ್ಯಾಸ್ಕೆಟ್‌ಬಾಲ್ ಸಹ ಆಡಿದ್ದರು. ಎರಡೂ ವಿಡಿಯೊಗಳನ್ನು ಅವರೇ ಟ್ವೀಟ್ ಮಾಡಿದ್ದಾರೆ. ನೃತ್ಯ ಮಾಡುವಷ್ಟು ಶಕ್ತಿ ಇರುವವರಿಗೆ ಮನೆಯಲ್ಲಿಯೇ ಲಸಿಕೆ ನೀಡಲಾಗಿದೆ. ಕೇವಲ 51 ವರ್ಷ ವಯಸ್ಸಿನ ಪ್ರಜ್ಞಾ ಸಿಂಗ್ ಅವರು ವೃದ್ಧರೂ ಅಲ್ಲ. ವೃದ್ಧರೂ ಅಲ್ಲದ, ಅಂಗವಿಕಲರೂ ಅಲ್ಲದ ಪ್ರಜ್ಞಾ ಸಿಂಗ್ ಅವರಿಗೆ ಮನೆಯಲ್ಲಿಯೇ ಲಸಿಕೆ ನೀಡುವ ಮೂಲಕ ನಿಯಮ ಉಲ್ಲಂಘಿಸಲಾಗಿದೆ' ಎಂದು ಕಾಂಗ್ರೆಸ್‌ನ ವಕ್ತಾರ ನರೇಂದ್ರ ಸಲೂಜಾ ಅವರು ಆರೋಪಿಸಿದ್ದಾರೆ.

# ಜಗತ್ತಿನ ಹಲವೆಡೆ ಕೋವಿಡ್ 3ನೇ ಅಲೆ

ಅತ್ಯಂತ ಕ್ಷಿಪ್ರವಾಗಿ ಹರಡುವ ಸಾಮರ್ಥ್ಯವಿರುವ ಡೆಲ್ಟಾ ತಳಿಯ ಕೊರೊನಾವೈರಾಣು 100ಕ್ಕೂ ಹೆಚ್ಚು ದೇಶಗಳಲ್ಲಿ ಪತ್ತೆಯಾಗಿದೆ. ಈ ತಳಿಯ ಕಾರಣದಿಂದಲೇ ವಿಶ್ವದ ಹಲವೆಡೆ ಕೋವಿಡ್‌ನ ಮೂರನೇ ಅಲೆ ಆರಂಭವಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ. ಆದರೆ ಈಗಾಗಲೇ ಕೆಲವು ಐರೋಪ್ಯ ದೇಶಗಳು, ದಕ್ಷಿಣ ಅಮೆರಿಕದ ಹಲವು ದೇಶಗಳು ಮತ್ತು ಆಫ್ರಿಕಾದ ಹಲವು ದೇಶಗಳಲ್ಲಿ ಮೂರನೇ ಅಲೆ ಕಾಣಿಸಿಕೊಂಡಿದೆ. ಮುಂದಿನ ದಿನಗಳಲ್ಲಿ ಮೂರನೇ ಅಲೆ ಮತ್ತಷ್ಟು ತೀವ್ರವಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ



- ರಷ್ಯಾದಲ್ಲಿ ಮೂರನೇ ಅಲೆ ಕಾಣಿಸಿಕೊಂಡಿದ್ದು, ಈಗಾಗಲೇ ಅದು ತೀವ್ರ ಸ್ವರೂಪ ಪಡೆದುಕೊಂಡಿದೆ. ಮುಂದಿನ ದಿನಗಳಲ್ಲಿ ಅದು ಮತ್ತಷ್ಟು ತೀವ್ರಗೊಳ್ಳುವ ಆತಂಕವಿದೆ. ಈಗ ವಿಶ್ವದಲ್ಲಿ ಪ್ರತಿದಿನ ಅತಿಹೆಚ್ಚು ಕೋವಿಡ್ ಹೊಸ ಪ್ರಕರಣಗಳು ಪತ್ತೆಯಾಗುತ್ತಿರುವ ದೇಶಗಳ ಪಟ್ಟಿಯಲ್ಲಿ ರಷ್ಯಾ ಎರಡನೇ ಸ್ಥಾನದಲ್ಲಿದೆ. ಕೋವಿಡ್ ಹರಡುವುದನ್ನು ತಡೆಯಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದು ಬಹಿರಂಗವಾಗಿಲ್ಲ
- ಬ್ರೆಜಿಲ್‌ನಲ್ಲಿ ಈಗ ಕೋವಿಡ್‌ನ ನಾಲ್ಕನೇ ಅಲೆ ಕಾಣಿಸಿಕೊಂಡಿದೆ. ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿದೆ. ಈಗ ವಿಶ್ವದಲ್ಲಿ ಪ್ರತಿದಿನ ಅತಿಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿರುವುದು ಬ್ರೆಜಿಲ್‌ನಲ್ಲಿಯೆ. ನಾಲ್ಕನೇ ಅಲೆಯು ಇನ್ನೂ ಎರಡು ತಿಂಗಳವರೆಗೆ ಇರುವ ಸಾಧ್ಯತೆ ಇದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಗುಂಪುಗೂಡುವಿಕೆ, ಸಭೆ-ಸಮಾರಂಭಗಳ ಮೇಲೆ ನಿರ್ಬಂಧ ಹೇರಲಾಗಿದೆ. ಅಲ್ಲಲ್ಲಿ ಲಾಕ್‌ಡೌನ್‌ನಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ
- ಐರೋಪ್ಯ ದೇಶಗಳಲ್ಲಿ ಬ್ರಿಟನ್‌ನಲ್ಲೇ ಪ್ರತಿದಿನ ಅತಿಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಬ್ರಿಟನ್‌ನಲ್ಲಿ ಡೆಲ್ಟಾ ತಳಿಯ ಕೊರೊನಾವೈರಾಣುವಿನ ಕಾರಣದಿಂದಲೇ ಮೂರನೇ ಅಲೆ ಪ್ರಾರಂಭವಾಗಿದೆ. ದೇಶದ ಹಲವೆಡೆ ಲಾಕ್‌ಡೌನ್‌ನಂತಹ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನೆರೆಯ ದೇಶಗಳಿಗೆ ವಿಮಾನ ಸಂಚಾರ ಮತ್ತು ಹಡಗು ಪ್ರಯಾಣವನ್ನು ನಿರ್ಬಂಧಿಸಲಾಗಿದೆ
- ದಕ್ಷಿಣ ಅಮೆರಿಕ ಖಂಡದ ದೇಶಗಳಲ್ಲಿ ಈಗ ಪ್ರತಿದಿನ ಅತಿಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿರುವ ದೇಶಗಳ ಪಟ್ಟಿಯಲ್ಲಿ ಕೊಲಂಬಿಯಾ ಎರಡನೇ ಸ್ಥಾನದಲ್ಲಿದೆ. ಇಲ್ಲಿ ಪ್ರತಿದಿನ 20,000ಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ದೇಶದ ಶೇ 44ಕ್ಕೂ ಹೆಚ್ಚು ಜನರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಲಸಿಕೆ ನೀಡಲಾಗುತ್ತಿದೆ ಎಂಬ ಕಾರಣದಿಂದಲೇ ನಿರ್ಬಂಧಗಳನ್ನು ಸಡಿಲಿಸಲಾಗಿತ್ತು. ಆನಂತರ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಯಿತು. ಕೋವಿಡ್ ನಿರ್ಬಂಧವನ್ನು ಮತ್ತೆ ಹೇರಲಾಗಿದೆ
- ಆಫ್ರಿಕಾ ಖಂಡದ ಹಲವು ದೇಶಗಳಲ್ಲಿ ಕೋವಿಡ್‌ನ ಮೂರನೇ ಅಲೆ ಕಾಣಿಸಿಕೊಂಡಿದೆ. ಹಲವು ದೇಶಗಳಲ್ಲಿ ಆಲ್ಫಾ, ಡೆಲ್ಟಾ, ಡೆಲ್ಟಾ ಪ್ಲಸ್ ತಳಿಗಳು ಪತ್ತೆಯಾಗಿವೆ. ಸಂಪನ್ಮೂಲದ ಕೊರತೆಯಿಂದ ದೊಡ್ಡಮಟ್ಟದಲ್ಲಿ ಪರೀಕ್ಷೆಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮೂರನೇ ಅಲೆ ಎಷ್ಟು ತೀವ್ರವಾಗಿದೆ ಎಂಬುದರ ಸ್ಪಷ್ಟ ಚಿತ್ರಣ ದೊರೆಯುತ್ತಿಲ್ಲ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಕೆಲವು ಸ್ವಯಂಸೇವಾ ಸಂಸ್ಥೆಗಳು ಪರೀಕ್ಷೆ ನಡೆಸುತ್ತಿವೆ. ಆರ್ಥಿಕ ಮುಗ್ಗಟ್ಟು ಮತ್ತು ರಾಜಕೀಯ ಅಸ್ಥಿರತೆಯ ಕಾರಣ ಹಲವು ದೇಶಗಳಲ್ಲಿ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ
- ದಕ್ಷಿಣ ಮತ್ತು ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ಜುಲೈ ಎರಡನೇ ವಾರದ ನಂತರ ಕೋವಿಡ್‌ನ ಮೂರನೇ ಅಲೆ ಕಾಣಿಸಿಕೊಂಡಿದೆ. ಬಾಂಗ್ಲಾದೇಶ, ಮ್ಯಾನ್ಮಾರ್, ಥಾಯ್ಲೆಂಡ್, ವಿಯೆಟ್ನಾಂಗಳಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿದೆ

ಆಧಾರ: ವಿಶ್ವ ಆರೋಗ್ಯ ಸಂಸ್ಥೆ, ಪಿಟಿಐ, ರಾಯಿಟರ್ಸ್, ಬಿಬಿಸಿ

## ಲಸಿಕೆ ಕೊರತೆ

ಜಗತ್ತಿನ ಬಹುತೇಕ ಎಲ್ಲೆಡೆ ಕೋವಿಡ್ ಮೂರನೇ ಅಲೆ ಕಾಣಿಸಿಕೊಳ್ಳುತ್ತಿರುವ ಸಂದರ್ಭದಲ್ಲೇ ಹಲವು ರಾಷ್ಟ್ರಗಳಲ್ಲಿ ಕೋವಿಡ್ ಲಸಿಕೆಯ ಕೊರತೆ ಕಾಡಲಾರಂಭಿಸಿದೆ. ಅದರಲ್ಲೂ ಮುಖ್ಯವಾಗಿ ಬಡ ರಾಷ್ಟ್ರಗಳಲ್ಲಿ ಕೋವಿಡ್ ಲಸಿಕೆಯ ಕೊರತೆ ತೀವ್ರವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

ವಿಶ್ವದ 92 ಬಡ ದೇಶಗಳಿಗೆ ಕೋವಿಡ್ ಲಸಿಕೆ ಪೂರೈಸುವ ಕೋವ್ಯಾಕ್ಸ್ ಒಪ್ಪಂದದ ಅಡಿ, ವಿಶ್ವ ಆರೋಗ್ಯ ಸಂಸ್ಥೆಯ ಗವಿ ಘಟಕವು 98 ಕೋಟಿ ಡೋಸ್‌ನಷ್ಟು ಲಸಿಕೆಯನ್ನಷ್ಟೇ ಪೂರೈಸಿದೆ. 92 ದೇಶಗಳು ಮಾತ್ರವಲ್ಲದೆ ಕೋವ್ಯಾಕ್ಸ್ ಒಪ್ಪಂದದ ಅಡಿ 131 ದೇಶಗಳಿಗೆ ಲಸಿಕೆ ಪೂರೈಸಲಾಗಿದೆ. ಲಸಿಕೆ ತಯಾರಿಸುವ ಅಮೆರಿಕ, ಬ್ರಿಟನ್, ಭಾರತ, ಚೀನಾ ಮತ್ತು ರಷ್ಯಾದಲ್ಲೇ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾದ ಕಾರಣ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಈ ಕಾರಣದಿಂದ ಈ ದೇಶಗಳಲ್ಲಿ ಲಸಿಕೆ ಕೊರತೆ ಉಂಟಾಗಿದೆ.

ಆಫ್ರಿಕಾದ ದೇಶಗಳ ಒಟ್ಟು ಜನಸಂಖ್ಯೆಯಲ್ಲಿ ಶೇ 2ರಷ್ಟು ಜನರಿಗೆ ಮಾತ್ರವೇ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ. ಆದರೆ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಕಾರಣ ಹಲವು ದೇಶಗಳಲ್ಲಿ ಲಸಿಕೆ ಕಾರ್ಯಕ್ರಮವನ್ನು ಸ್ಥಗಿತಗೊಳಿಸಲಾಗಿದೆ. ಜರ್ಮನಿ ಮತ್ತು ಅಮೆರಿಕವು ಕಳೆದ ವಾರ 25 ಲಕ್ಷ ಡೋಸ್‌ಗಳಷ್ಟು ಲಸಿಕೆಯನ್ನು ಈ ದೇಶಗಳಿಗೆ ಪೂರೈಸಿವೆ.

ರಷ್ಯಾದ ಸ್ಪುಟ್ನಿಕ್-ವಿ ಲಸಿಕೆಯನ್ನು ವಿಶ್ವದ ಹಲವು ದೇಶಗಳಲ್ಲಿ ಬಳಸಲಾಗುತ್ತಿದೆ. ಆದರೆ ರಷ್ಯಾದಲ್ಲೇ ಮೂರನೇ ಅಲೆ ತೀವ್ರವಾಗಿರುವ ಕಾರಣ ಸ್ಪುಟ್ನಿಕ್-ವಿ ಲಸಿಕೆ ಪೂರೈಕೆಯಲ್ಲೂ ವ್ಯತ್ಯವಾಗಿದೆ. ಭಾರತಕ್ಕೂ ಈ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯವಾಗುವ ಆತಂಕ ಎದುರಾಗಿದೆ

- **50+** ಚೀನಾದ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **50+** ಅಮೆರಿಕ, ಕೆನಡಾದ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **50+** ಐರೋಪ್ಯ ದೇಶಗಳ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **40-50** ದಕ್ಷಿಣ ಅಮೆರಿಕದ ದೇಶಗಳಲ್ಲಿ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **35** ರಷ್ಯಾದಲ್ಲಿ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **28.4** ಭಾರತದ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **4-8** ಮಧ್ಯಪ್ರಾಚ್ಯ ದೇಶಗಳ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ
- **2** ಆಫ್ರಿಕಾ ಖಂಡದ ದೇಶಗಳ ಪ್ರತಿ 100 ಮಂದಿಯಲ್ಲಿ ಲಸಿಕೆಯ ಒಂದು ಡೋಸ್ ಪಡೆದುಕೊಂಡವರ ಸಂಖ್ಯೆ

# ಝೀಕಾ: ಕೇರಳದಲ್ಲಿ ಸೋಂಕಿತರ ಸಂಖ್ಯೆ 30ಕ್ಕೆ ಏರಿಕೆ

**ತಿರುವನಂತಪುರ (ಪಿಟಿಐ):** ಕೇರಳದಲ್ಲಿ ಮತ್ತೆ ಎರಡು ಝೀಕಾ ವೈರಸ್ ಪ್ರಕರಣಗಳು ಕಂಡುಬಂದಿದ್ದು, ಇದುವರೆಗೆ ಸೋಂಕಿತರ ಸಂಖ್ಯೆ 30ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ಶುಕ್ರವಾರ ತಿಳಿಸಿದ್ದಾರೆ.

ತಿರುವನಂತಪುರ ಜಿಲ್ಲೆಯ ವೈದ್ಯಕೀಯ ಕಾಲೇಜಿನ ವೈರಾಲಜಿ ಪ್ರಯೋಗಾಲಯದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಇಬ್ಬರಿಗೆ ಝೀಕಾ ಸೋಂಕು ತಗುಲಿರುವುದು ದೃಢಪಟ್ಟಿದೆ.

ಝೀಕಾ ವೈರಸ್ ಹರಡುವುದನ್ನು ಸಮರ್ಪಕವಾಗಿ ನಿಭಾಯಿಸಲು ಆರೋಗ್ಯ ಸಚಿವೆ ಹಾಗೂ ಕಂದಾಯ ಸಚಿವ ಕೆ. ಬಾಲನ್ ನೇತೃತ್ವದಲ್ಲಿ ಸಭೆ ನಡೆಯಿತು. ಶುಚಿತ್ವಕ್ಕಾಗಿ ವಾರ್ಡ್ ಮಟ್ಟದಲ್ಲಿ ಸಮಿತಿ ಬಲಪಡಿಸಲು ತೀರ್ಮಾನಿಸಲಾಯಿತು. ವೈದ್ಯಕೀಯ ಮೂಲಸೌಕರ್ಯಗಳ ವರ್ಧನೆ, ಸೊಳ್ಳೆಗಳ ನಿರ್ಮೂಲನೆಗೆ ಆದ್ಯತೆ ನೀಡಲಾಗಿದೆ. ಸ್ವಯಂಸೇವಾ ಸಂಸ್ಥೆಗಳ ಮೂಲಕ ಜನಜಾಗೃತಿ ಮೂಡಿಸಲು ಸಹ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

# ಜಾಮೀನು ಆದೇಶ ತಲುಪುವಿಕೆ ವಿಳಂಬ: 'ಸುಪ್ರೀಂ' ಆಕ್ರೋಶ



**ನವದೆಹಲಿ:** ಜಾಮೀನಿಗೆ ಸಂಬಂಧಪಟ್ಟಂತೆ ತಾನು ನೀಡಿರುವ ಆದೇಶಗಳು ವಿಳಂಬವಾಗಿ ತಲುಪುತ್ತಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಇನ್ನು ಮುಂದೆ ಇಂಥ ಆದೇಶಗಳನ್ನು ತ್ವರಿತವಾಗಿ ಜೈಲುಗಳಿಗೆ ತಲುಪಿಸುವ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಿದೆ.

ಡಿಜಿಟಲ್ ವ್ಯವಸ್ಥೆಯ ಮೂಲಕ ತರಬಹುದಾದ ವಿಶ್ವಾಸಾರ್ಹ ಯೋಜನೆಯೊಂದನ್ನು ರೂಪಿಸುವ ಬಗ್ಗೆ ಎರಡು ವಾರಗಳಲ್ಲಿ ಸಮಗ್ರ ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್‌ನ ಸೆಕ್ರೆಟರಿ ಜನರಲ್‌ಗೆ ಶುಕ್ರವಾರ ಸೂಚಿಸಿತು.

'ಮಾಹಿತಿ ಮತ್ತು ತಂತ್ರಜ್ಞಾನದ ಈ ಯುಗದಲ್ಲಿಯೂ, ನ್ಯಾಯಾಲಯದ ಆದೇಶಗಳಿಗಾಗಿ ನಾವು ಪಾರಿವಾಳದ ನಿರೀಕ್ಷೆಯಲ್ಲಿ ಆಗಸವನ್ನು ನೋಡುತ್ತಿದ್ದೇವೆ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠ ಅಸಮಾಧಾನ ವ್ಯಕ್ತಪಡಿಸಿತು. ಇಂಥ ವಿಳಂಬದಿಂದಾಗಿ ನಾಗರಿಕರ ಹಕ್ಕುಗಳಿಗೂ ಚ್ಯುತಿ ಬರುತ್ತಿರುವುದಾಗಿ ಅಭಿಪ್ರಾಯಪಟ್ಟಿತು.

ಹೊಸ ವ್ಯವಸ್ಥೆಯನ್ನು ಎಲೆಕ್ಟ್ರಾನಿಕ್ ದಾಖಲೆಗಳ ತ್ವರಿತ ಮತ್ತು ಸುರಕ್ಷಿತ ರವಾನೆ (FASTER) ಎಂದು ಕರೆದಿರುವ ಪೀಠ, ಈ ಯೋಜನೆಯು ಸಂಬಂಧಿತ ಜೈಲುಗಳಿಗೆ, ಜಿಲ್ಲಾ ನ್ಯಾಯಾಲಯಗಳಿಗೆ, ಹೈಕೋರ್ಟ್‌ಗಳಿಗೆ ತುರ್ತಾಗಿ ತಲುಪಬೇಕಾದ ತನ್ನ ಆದೇಶಗಳನ್ನು ಒಳಗೊಂಡಿರುತ್ತದೆ ಎಂದು ಹೇಳಿದೆ.

## ಬ್ಲಾಕ್‌ಚೇನ್ ಟೆಕ್ನಾಲಜಿ: ಆನ್‌ಲೈನ್‌ನಲ್ಲಿ ಉಚಿತ ಕೋರ್ಸ್

**ತಿರುವನಂತಪುರಂ (ಪಿಟಿಐ):** ಆಧುನಿಕ ತಂತ್ರಜ್ಞಾನಗಳ ಬಗ್ಗೆ ತಾಂತ್ರಿಕೇತರ ಹಿನ್ನೆಲೆಯ ವಿದ್ಯಾರ್ಥಿಗಳಿಗೂ ಅರಿವು ಮೂಡಿಸುವ ಉದ್ದೇಶದಿಂದ ಬ್ಲಾಕ್‌ಚೇನ್ ಟೆಕ್ನಾಲಜಿ ಕುರಿತು (ವ್ಯವಸ್ಥಿತವಾಗಿ ಮಾಹಿತಿ ಸಂಗ್ರಹಿಸುವ ಕ್ರಮ) ಉಚಿತವಾಗಿ ಕೋರ್ಸ್ ಆಯೋಜಿಸಲು ಇಲ್ಲಿನ ಡಿಜಿಟಲ್ ಯೂನಿವರ್ಸಿಟಿ (ಡಿಯುಕೆ) ನಿರ್ಧರಿಸಿದೆ.

ಆನ್‌ಲೈನ್ ಕೋರ್ಸ್ ಅನ್ನು ಕೇರಳ ಬ್ಲಾಕ್‌ಚೇನ್ ಅಕಾಡೆಮಿ (ಕೆಬಿಎ) ಮತ್ತು ಕೇರಳ ನವೀನ ಮತ್ತು ಕಾರ್ಯತಂತ್ರ ಅಭಿವೃದ್ಧಿ ಮಂಡಳಿ (ಕೆ-ಡಿಸ್ಕ್) ಸಹಯೋಗದಲ್ಲಿ ನಡೆಸಲಾಗುತ್ತದೆ. ಶಾಲಾ ಹಂತದಿಂದ ಪದವಿವರೆಗಿನ ವಿವಿಧ ವಿದ್ಯಾರ್ಥಿಗಳಿಗೆ ಇದರ ಸದುಪಯೋಗವಾಗಲಿದೆ ಎಂದು ಹೇಳಿಕೆಯು ತಿಳಿಸಿದೆ.

ಫೌಂಡೇಷನ್ ಕೋರ್ಸ್‌ಗೆ ನೋಂದಣಿ ಪ್ರಕ್ರಿಯೆ ಜುಲೈ 19ರಂದು ಆರಂಭವಾಗಲಿದೆ. ಆಸಕ್ತರು ಮಾಹಿತಿಗೆ ವೆಬ್‌ಸೈಟ್ (http://prajna.duk.ac.in) ಸಂಪರ್ಕಿಸಬಹುದು ಎಂದು ಕೋರಲಾಗಿದೆ.



> ನಮ್ಮ ಜವಾಬ್ದಾರಿ ನಮ್ಮದು ಎಂದುಕೊಳ್ಳುತ್ತಾ ಒಂದು ಮಗುವೂ ಬೇಡ ಎಂಬ ನಿರ್ಧಾರಕ್ಕೆ ಬಂದಿರುವ ದಂಪತಿಗಳ ಸಂಖ್ಯೆ ಜಾಸ್ತಿಯಾಗಿದೆ. ಭಾರತದಲ್ಲಿ 'ಮಗುಮುಕ್ತ ಜೀವನಶೈಲಿ' ನಿಧಾನವಾಗಿ ಮುಂಚೂಣಿಗೆ ಬರುತ್ತಿದೆ.

# ಟ್ರೆಂಡ್ ಆಗುತ್ತಿದೆ ಮಗುಮುಕ್ತ ಜೀವನಶೈಲಿ

**ಮಂಜುಶ್ರೀ ಎಂ. ಕಡಕೋಳ**

30ರ ಹರೆಯದ ಮಧುರಾ ಮದುವೆಯಾಗಿ ಆರು ತಿಂಗಳು ಕಳೆದಿರಲಿಲ್ಲ. ಆಗಲೇ ನೆಂಟರಿಷ್ಟರು, ಸ್ನೇಹಿತರು 'ಏನೂ ವಿಶೇಷ ಸುದ್ದಿ ಇಲ್ವಾ?' ಎಂದು ಪದೇ ಪದೇ ಕೇಳುತ್ತಿದ್ದರು. ಅವರ ಮಾತಿಗೆ ನಗುತ್ತಲೇ ಪ್ರತಿಕ್ರಿಯಿಸುತ್ತಿದ್ದ ಮಧುರಾ 'ನಮಗೆ ಮಗು ಬೇಡ ಅಂತ ತೀರ್ಮಾನಿಸಿದ್ದೀವಿ' ಅಂತಲೇ ಸ್ಪಷ್ಟವಾಗಿ ಉತ್ತರಿಸಿದ್ದಳು. 'ಅಯ್ಯೋ ಗಂಡ-ಹೆಂಡತಿಗೆ ಕೈತುಂಬಾ ಸಂಬಳ, ಮಗು ನೋಡಿಕೊಳ್ಳಲಿಕ್ಕೂ ಜನರ ಕೊರತೆಯಿಲ್ಲ. ನಿಮ್ಮಿಬ್ಬರಲ್ಲಿ ಯಾರಿಗಾದರೂ ಸಮಸ್ಯೆನಾ?' ಅಂತ ಪ್ರಶ್ನಿಸುತ್ತಿದ್ದವರಿಗೂ 'ಇಲ್ಲ ಹಾಗೇನಿಲ್ಲ ಮಗು ಬೇಡ ಅಂತ ನಿರ್ಧರಿಸಿದ್ದೇವೆ ಅಷ್ಟೇ' ಎನ್ನುವ ಅವಳ ದೃಢಮಾತನ್ನು ಕೇಳಿದವರು ಮರುಪ್ರಶ್ನಿಸಲು ಹೋಗುತ್ತಿರಲಿಲ್ಲ.

ಮಧುರಾಳಂಥ ಅನೇಕ ಹೆಣ್ಣುಮಕ್ಕಳಿಗೆ ತಾಯ್ತನ ಅನ್ನುವುದು ಈಗ ಅನಿವಾರ್ಯವಲ್ಲ. ಬದಲಿಗೆ ಅವರ ಆಯ್ಕೆಯ ಹಕ್ಕಾಗಿ ಪರಿಣಮಿಸಿದೆ. 'ದಿನಸಿಯಿಂದ ಹಿಡಿದು ಶಿಕ್ಷಣದವರೆಗೆ ದುಬಾರಿಯಾಗಿರುವ ಈ ದಿನಮಾನಗಳಲ್ಲಿ ಮಕ್ಕಳನ್ನು ಸಾಕುವುದು ಸುಲಭವಲ್ಲ. ಆರ್ಥಿಕ ಸದೃಢತೆ ಮಾತ್ರವಲ್ಲ, ದೈಹಿಕ-ಭಾವನಾತ್ಮಕ ಸದೃಢತೆ, ಗುಣಮಟ್ಟದ ಸಮಯ, ಆರೋಗ್ಯಕರ ಪರಿಸರ ಇವೆಲ್ಲವೂ ಮಕ್ಕಳ ಬೆಳವಣಿಗೆಗೆ ಅಗತ್ಯ' ಎಂದು ಪ್ರತಿಪಾದಿಸುವ ಮಧುರಾ, ಕೋವಿಡ್-19 ಸಾಂಕ್ರಾಮಿಕ ರೋಗದ ಸಮಯದಲ್ಲಿ ತಂದೆ-ತಾಯಿ ಕಳೆದುಕೊಂಡು ಅನಾಥರಾದ ಮಕ್ಕಳ ಸ್ಥಿತಿ ನೋಡಿ, 'ಮಗು ಬೇಡ' ಎನ್ನುವ ನಿರ್ಧಾರಕ್ಕೆ ಮತ್ತಷ್ಟು ಬದ್ಧಳಾಗಿದ್ದಾಳೆ.

ಒಂದೆಡೆ ಚೀನಾದಲ್ಲಿ ಮೂರು ಮಕ್ಕಳನ್ನು ಹೊಂದುವ ಅವಕಾಶ ಕಲ್ಪಿಸಲಾಗಿದೆ. ಈ ನಡುವೆ, ಭಾರತದಲ್ಲಿ 'ಮಗುಮುಕ್ತ ಜೀವನಶೈಲಿ' (ಚೈಲ್ಡ್ ಫ್ರೀ ಇಂಡಿಯಾ) ಆಂದೋಲನ ನಿಧಾನವಾಗಿ ಮುಂಚೂಣಿಗೆ ಬರುತ್ತಿದೆ. 'ಮಗುಮುಕ್ತ ಜೀವನಶೈಲಿ' ಜೀವವಿರೋಧಿ ನಿಲುವಲ್ಲವೇ ಎನ್ನುವ ಪ್ರಶ್ನೆಗೆ, 'ಎಲ್ಲಿಯವರೆಗೆ ಸಮಾಜದಲ್ಲಿ ಲಿಂಗ ತಾರತಮ್ಯ, ಹವಾಮಾನ ವೈಪರೀತ್ಯ, ನಿರುದ್ಯೋಗ, ಬಡತನ, ದುಬಾರಿ ಆರೋಗ್ಯ ವ್ಯವಸ್ಥೆ, ಧಾರ್ಮಿಕ ಅಸಹಿಷ್ಣುತೆ, ಅಸಮರ್ಥ ಶಿಕ್ಷಣ ವ್ಯವಸ್ಥೆ, ಮಾನಸಿಕ ಯಾತನೆ ಕೊನೆಯಾಗುವುದಿಲ್ಲವೋ ಅಲ್ಲಿಯ ತನಕ ಮಕ್ಕಳು ಹೆರುವುದನ್ನು ನಿಲ್ಲಿಸಿ' ಅನ್ನುವುದು ಈ ಆಂದೋಲನದ ಮುಖ್ಯ ಉದ್ದೇಶ ಎನ್ನುತ್ತಾರೆ ಸಂಘಟಕರು.

## ಮಹತ್ವಾಕಾಂಕ್ಷೆಗೆ ತಿಲಾಂಜಲಿ ಕೊಡಬೇಕೇ?



ಪ್ರತಿಮಾ ನಾಯ್ಕ್

'ತಾಯಿಯೊಬ್ಬಳು ಮಗುವಿಗೆ ಹಾಲು ಕುಡಿಸುತ್ತಾ, ಸ್ನಾನ ಮಾಡಿಸುತ್ತಾ, ಬಟ್ಟೆ ಬದಲಿಸುತ್ತಾ, ಅವಳು ತಾನೊಬ್ಬ ವಿಜ್ಞಾನಿಯಾಗಬೇಕಿತ್ತಲ್ಲ, ಐಎಎಸ್ ಪರೀಕ್ಷೆಗೆ ಓದಬೇಕಿತ್ತಲ್ಲ' ಎನ್ನುವುದನ್ನು ಬದಿಗಿರಿಸಬೇಕಾಗುತ್ತದೆ. ಆದರೆ, ಒಬ್ಬ ಗಂಡಸು, ತಾನೊಂದು ಕಾದಂಬರಿ ಬರೆಯಬೇಕೆಂದರೆ ಎಷ್ಟು ಸುಲಭವಾಗಿ ತನ್ನ ಪಿತೃತ್ವದ ಜವಾಬ್ದಾರಿಯನ್ನು ಬದಿಗಿರಿಸಿ, ತನ್ನಿಚ್ಛೆಯ ಕೆಲಸದಲ್ಲಿ ಮಗ್ನವಾಗಿಬಿಡಬಹುದು. 'ಮಾತೃತ್ವ'ವನ್ನು ಬದಿಗಿರಿಸಿ ತನ್ನ ಮಹತ್ವಾಕಾಂಕ್ಷೆ ಇಲ್ಲವೇ ತನ್ನಿಷ್ಟದ ಕೆಲಸದಲ್ಲಿ ಮಗ್ನಳಾಗಲು ಅವಕಾಶ ಕೊಡುವಷ್ಟು ನಮ್ಮ ಪುರುಷಪ್ರಧಾನ ಸಮಾಜ ಇನ್ನೂ ಪರಿಪಕ್ವವಾಗಿಲ್ಲ. ಹಾಗಾಗಿ, ಎಲ್ಲಿಯತನಕ ಮನೆ ಮತ್ತು ಮಗುವಿನ ಲಾಲನೆ-ಪಾಲನೆಯಲ್ಲಿ ಹೆಣ್ಣಿನಷ್ಟೇ ಜವಾಬ್ದಾರಿಯನ್ನು ಗಂಡಸು ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯತನಕ ಕೆಲ ಹೆಣ್ಣುಮಕ್ಕಳು ಮಗುವನ್ನು ಹೆರುವುದಿಲ್ಲ ಎಂದು ನಿರ್ಧರಿಸುವ ಮೂಲಕ ಸ್ತ್ರೀವಾದವನ್ನು ಒಂದು ಹೆಜ್ಜೆ ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ' ಎನ್ನುತ್ತಾರೆ ಚೈಲ್ಡ್ ಫ್ರೀ ಇಂಡಿಯಾ ಸಹಸ್ಥಾಪಕರಲ್ಲೊಬ್ಬರಾದ ಪ್ರತಿಮಾ ನಾಯ್ಕ್.

## ಬೇರೆ ಮಕ್ಕಳು ನಮ್ಮ ಮಕ್ಕಳಲ್ವೇ?

'ಮಗುವಿಗೆ ಜನ್ಮ ನೀಡುವ ವಿಚಾರದಲ್ಲಿ ನನಗೆ ಹಲವು ಚಳವಳಿಗಾರರು ಆದರ್ಶ. ಎಷ್ಟೇ ವಿಶಾಲಹೃದಯಿ ಆಗಿದ್ದರೂ ಮಗು ಜನಿಸಿದ ಬಳಿಕ ನಾವು ಸಂಕುಚಿತ ಮನೋಭಾವ ಬೆಳೆಸಿಕೊಳ್ಳುತ್ತೇವೆ. ಮಗುವಿನ ಶಿಕ್ಷಣ, ಬಳಿಕ ಉದ್ಯೋಗ, ಗುಣಮಟ್ಟದ ಬದುಕು ನೀಡುವ ಒತ್ತಡದಲ್ಲಿ ಸಾಮಾಜಿಕ ಜವಾಬ್ದಾರಿಗಳನ್ನು ನಮಗೆ ನಾವೇ ಕಡಿಮೆಗೊಳಿಸಿಕೊಂಡು ಬಿಡುತ್ತೇವೆ. ಹಾಗಾಗಿ ಮಗು ಬೇಡ ಎಂದು ನಾವು ನಿರ್ಧರಿಸಿದೆವು. ಹಾಗಾದರೆ, ಮಕ್ಕಳಿರೋ ಇತರ ಚಳವಳಿಗಾರರು ಬದ್ಧತೆ ಹೊಂದಿಲ್ವೆ ಎನ್ನುವ ಪ್ರಶ್ನೆ ಹುಟ್ಟುತ್ತದೆ. ಖಂಡಿತಾ ಬದ್ಧತೆ ಹೊಂದಿದ್ದಾರೆ. ಅದು ಪ್ರಶ್ನಾತೀತ. ನಾನು ಮಕ್ಕಳ ಹಕ್ಕುಗಳ ವಿಚಾರದಲ್ಲಿ ಕೆಲ ಸಮಯ ಕೆಲಸ ಮಾಡಿದ್ದರಿಂದ ನನಗೆ ಮಕ್ಕಳ ಸಮಸ್ಯೆಗಳು ತಿಳಿದಿವೆ. ಸಮಾಜದಲ್ಲಿನ ಶೋಷಿತ, ಸಂತ್ರಸ್ತ ಮಕ್ಕಳೆಲ್ಲರೂ ನಮ್ಮ ಮಕ್ಕಳೇ ಆಗಿದ್ದಾರೆ' ಎನ್ನುತ್ತಾರೆ ಸಾಮಾಜಿಕ ಕಾರ್ಯಕರ್ತೆ ಕಾವ್ಯಾ ಅಚ್ಯುತ್.



ಕಾವ್ಯಾ ಅಚ್ಯುತ್

## ಕಾರಣಗಳು ಹತ್ತು-ಹಲವು

ಹಲವು ಜನರು ಹಲವು ಕಾರಣಗಳಿಂದ ಒಂದು ಮಗುವನ್ನೂ ಪಡೆಯುವುದು ಬೇಡ ಎಂದು ನಿರ್ಧರಿಸಿ ಮಗುಮುಕ್ತ ಜೀವನಶೈಲಿಯ ಮೊರೆ ಹೋಗುತ್ತಿದ್ದಾರೆ. ಮನುಷ್ಯ ಪರಿಸರವನ್ನು ಹಾನಿಗೀಡು ಮಾಡುತ್ತಿದ್ದು, ವ್ಯಕ್ತಿಯೊಬ್ಬ ತನ್ನ ವಂಶವನ್ನು ಬೆಳೆಸುತ್ತಾ ಹೋದಂತೆ ಭೂಮಿ ಮೇಲಿನ ಮಾಲಿನ್ಯವೂ ಹೆಚ್ಚುತ್ತಾ ಹೋಗುತ್ತದೆ. ಮಗು ಮಾಡಿಕೊಳ್ಳದೇ ಇದ್ದಲ್ಲಿ ನಿಮ್ಮ ನಂತರ ನಿಮ್ಮ ವಂಶದಲ್ಲಿ ಮಾಲಿನ್ಯದ ಹೆಜ್ಜೆ ಗುರುತು ಶೂನ್ಯವಾಗಿರುತ್ತದೆ ಎನ್ನುವುದು ಒಂದು ವಾದ. ಮನುಷ್ಯನಷ್ಟು ದುಷ್ಟಪ್ರಾಣಿ ಭೂಮಿ ಮೇಲೆ ಮತ್ತೊಬ್ಬನಿಲ್ಲ. ಹಾಗಾಗಿ, ಭೂಮಿಯನ್ನು ಗಿಡಮರ, ಪ್ರಾಣಿಪಕ್ಷಿಗಳಿಗೆ ಬಿಟ್ಟು ಹೋದರೆ ಒಳ್ಳೆಯದು ಎಂದು ನಂಬುವ ವಾದವನ್ನು 'ವಾಲೆಂಟರಿ ಹ್ಯೂಮನ್ ಎಕ್ಸ್‌ಟಿಂಕ್ಷನ್' ಚಳವಳಿ ಎನ್ನಲಾಗುತ್ತದೆ.

ಇವೆಲ್ಲದರ ನಡುವೆ ನಮ್ಮ ಜವಾಬ್ದಾರಿ ನಮ್ಮದು, ಆರೋಗ್ಯ ವಿಮೆಯ ಸೌಕರ್ಯ, ಹಣ, ಸಮಯ ಉಳಿತಾಯ, ಯೌವನ ಕಾಪಾಡಿಕೊಳ್ಳುವುದು, ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆಗಾಗಿಯೂ ಮಗುವನ್ನು ಮಾಡಿಕೊಳ್ಳದಿರಲು ಹಲವು ದಂಪತಿಗಳು ಪ್ರಜ್ಞಾಪೂರ್ವಕವಾಗಿ ನಿರ್ಧರಿಸುತ್ತಾರೆ ಎನ್ನುತ್ತದೆ 'ಚೈಲ್ಡ್ ಫ್ರೀ ಇಂಡಿಯಾ' ಅಭಿಯಾನ.

### ಎಗ್ ಫ್ರೀಜಿಂಗ್ ಎಂಬ ವರದಾನ



'ಕೋವಿಡ್ 2ನೇ ಅಲೆಯಲ್ಲಿ ತುಂಬಾ ಮಕ್ಕಳು ಅನಾಥರಾಗಿದ್ದಾರೆ. ಈ ಆತಂಕದಿಂದ ಕೆಲವರು ಮಗು ಮಾಡಿಕೊಳ್ಳುವುದೇ ಬೇಡ ಅಂತಲೂ ನಿರ್ಧರಿಸಿರಬಹುದು. ಆದರೆ, ಕಾಲ ಬದಲಾದಂತೆ ಕೆಲವೊಮ್ಮೆ ಮಗು ಬೇಡ ಅನ್ನುವ ಮನಸ್ಥಿತಿಯೂ ಬದಲಾಗಬಹುದು. ಅಷ್ಟೊತ್ತಿಗೆ ಹೆಣ್ಣು-ಗಂಡು ಇಬ್ಬರಿಗೂ ಫಲವತ್ತತೆಯ ಸಮಸ್ಯೆ ಕಾಡಬಹುದು. ಅದಕ್ಕೆ ಎಗ್ ಫ್ರೀಜಿಂಗ್ ಪರಿಹಾರವಾಗಬಲ್ಲದು' ಎನ್ನುತ್ತಾರೆ ಸ್ತ್ರೀರೋಗ ತಜ್ಞೆ ಡಾ.ವಿದ್ಯಾಭಟ್. 'ಮಗುವಾದರೆ ಮಾತ್ರ ಗರ್ಭಕೋಶ ಆರೋಗ್ಯವಾಗಿರುತ್ತದೆ ಎಂಬುದು ಹಲವರ ನಂಬಿಕೆ. ಆದರೆ, ಅದು ನಿಜವಲ್ಲ. ಮಗು ಆದವರಲ್ಲೂ, ಆಗದವರಲ್ಲೂ ಫೈಬ್ರಾಯ್ಡ್, ಎಂಡೋಮೆಟ್ರಿಯಾಸಿಸ್, ಅಡಿನೊಮಯೊಸಿಸ್ ಸಮಸ್ಯೆಗಳು ಕಾಣಿಸಿಕೊಳ್ಳಬಹುದು' ಎನ್ನುತ್ತಾರೆ ಅವರು.

---

# ಚಿಕನ್ ಟಿಕ್ಕಾ ಮಸಾಲೆ, ನಾಟಿ ಸ್ಟೈಲ್ ಕೋಳಿಸಾರು


**ಅನುಪಮಾ ಸುನೀಲ್ ಕುಮಾರ್**

ನಳಪಾಕ

## ಚಿಕನ್ ಟಿಕ್ಕಾ ಮಸಾಲೆ

**ಬೇಕಾಗುವ ಸಾಮಗ್ರಿಗಳು:** ಟೊಮೆಟೊ – 3 (ರುಬ್ಬಿಕೊಂಡಿರುವುದು), ಹೆಚ್ಚಿದ ಈರುಳ್ಳಿ – 2, ಬೆಣ್ಣೆ – 2 ಟೇಬಲ್ ಚಮಚ, ಉಪ್ಪು (ರುಚಿಗೆ ತಕ್ಕಷ್ಟು), ಕಸೂರಿ ಮೇಥಿ – ಸ್ವಲ್ಪ, ಮೊಸರು– 2 ಟೇಬಲ್ ಚಮಚ, ಶುಂಠಿ-ಬೆಳ್ಳುಳ್ಳಿ ಪೇಸ್ಟ್– 1 ಟೇಬಲ್ ಚಮಚ, ಗರಂ ಮಸಾಲ – 1 ಚಮಚ, ಖಾರದ ಪುಡಿ – ಒಂದೂವರೆ ಚಮಚ, ಕೊತ್ತಂಬರಿ ಪುಡಿ – 1 ಚಮಚ, ಚಿಕನ್ – 1/2 ಕೆ.ಜಿ, ಕ್ರೀಮ್ – 1 ಟೇಬಲ್ ಚಮಚ

**ತಯಾರಿಸುವ ವಿಧಾನ:** ಮೊದಲು ಚಿಕನ್‌ಗೆ ಮೊಸರು, ಉಪ್ಪು, ಖಾರದ ಪುಡಿ, ಗರಂ ಮಸಾಲ, ಕೊತ್ತಂಬರಿ ಪುಡಿ, ಅರಿಸಿನ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಸ್ವಲ್ಪ ನಿಂಬೆರಸ ಹಾಕಿ ಮಿಶ್ರಣ ಮಾಡಿಕೊಳ್ಳಿ. ಅದನ್ನು ಎರಡು ಗಂಟೆ ನೆನೆಯಲು ಬಿಡಿ. ಒಂದು ಪಾತ್ರೆಯಲ್ಲಿ 2 ಟೇಬಲ್ ಚಮಚದಷ್ಟು ಎಣ್ಣೆ ಹಾಕಿ, ಒಂದರ ನಂತರ ಒಂದು ಚಿಕನ್ ತುಂಡುಗಳನ್ನು ಹಾಕಿ ಹುರಿದುಕೊಳ್ಳಿ. ಇನ್ನೊಂದು ಬಾಣಲೆಯಲ್ಲಿ ಬೆಣ್ಣೆ, ಈರುಳ್ಳಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ ಹಸಿ ವಾಸನೆ ಹೋಗುವ ತನಕ ಹುರಿದುಕೊಳ್ಳಿ. ನಂತರ ರುಬ್ಬಿಕೊಂಡಿರುವ ಟೊಮೆಟೊ, ಗರಂ ಮಸಾಲೆ, ಖಾರದ ಪುಡಿ, ಕೊತ್ತಂಬರಿ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಹುರಿಯಿರಿ. ಐದು ನಿಮಿಷಗಳ ನಂತರ ಹುರಿದುಕೊಂಡ ಚಿಕನ್ ತುಂಡು ಹಾಗೂ ಅರ್ಧ ಗ್ಲಾಸ್ ನೀರು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ ಕುದಿಯಲು ಬಿಡಿ. ಚಿಕನ್ ಬೆಂದ ನಂತರ 1 ಟೇಬಲ್ ಚಮಚ ಫ್ರೆಶ್ ಕ್ರೀಮ್ ಸೇರಿಸಿ. ಕೊನೆಯದಾಗಿ ಕಸೂರಿ ಮೇಥಿಯನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿದರೆ ಟಿಕ್ಕಾ ಮಸಾಲ ರೆಡಿ.



ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

## ನಾಟಿ ಸ್ಟೈಲ್ ಕೋಳಿಸಾರು

**ಬೇಕಾಗುವ ಸಾಮಗ್ರಿಗಳು:** ಹುರಿಗಡಲೆ – 2 ಚಮಚ, ಶುಂಠಿ – 2 ಇಂಚು, ಬೆಳ್ಳುಳ್ಳಿ – 3 ಗೆಡ್ಡೆ, ಈರುಳ್ಳಿ – 2, ಕೊತ್ತಂಬರಿ ಸೊಪ್ಪು, ಕಾಳುಮೆಣಸು – 1 ಚಮಚ, ಲವಂಗ – 3, ಚಕ್ಕೆ –2, ಗಸಗಸೆ – 1 ಟೇಬಲ್ ಚಮಚ, ಹುಚ್ಚೆಳ್ಳು – 2 ಟೇಬಲ್ ಚಮಚ, ಕಾಯಿತುರಿ – 1/2 ಕಪ್, ಮಟನ್ ಸಾಂಬಾರು ಪುಡಿ –3 ಟೇಬಲ್ ಚಮಚ, ಖಾರದ ಪುಡಿ – 2 ಚಮಚ, ಎಣ್ಣೆ – 3 ಟೇಬಲ್ ಚಮಚ, ಉಪ್ಪು – ರುಚಿಗೆ ತಕ್ಕಷ್ಟು, ಚಿಕನ್ – 2 ಕೆ.ಜಿ, ಟೊಮೆಟೊ – 1, ಅರಿಸಿನ ಪುಡಿ – 1/4 ಚಮಚ



**ತಯಾರಿಸುವ ವಿಧಾನ:** ಮಿಕ್ಸಿ ಜಾರಿನಲ್ಲಿ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ, ಸ್ವಲ್ಪ ಕೊತ್ತಂಬರಿ ಸೊಪ್ಪು, ಸ್ವಲ್ಪ ನೀರು ಹಾಕಿಕೊಂಡು ನುಣ್ಣಗೆ ರುಬ್ಬಿಕೊಳ್ಳಿ. ಒಂದು ಕುಕರ್‌ನಲ್ಲಿ 3 ಟೇಬಲ್ ಚಮಚ ಎಣ್ಣೆ, ರುಬ್ಬಿದ ಮಿಶ್ರಣ ಹಾಕಿಕೊಂಡು 2 ನಿಮಿಷಗಳ ಕಾಲ ಚೆನ್ನಾಗಿ ಹುರಿದುಕೊಳ್ಳಿ. ನಂತರ ಚಿಕನ್, ಉಪ್ಪು, ಅರಿಸಿನ ಪುಡಿ ಹಾಕಿ ಮಿಶ್ರಣ ಮಾಡಿ. ಚೆನ್ನಾಗಿ ನೀರು ಆವಿಯಾಗುವವರೆಗೂ ಅದನ್ನು ಹುರಿದುಕೊಳ್ಳಿ. ಒಂದು ಚಿಕ್ಕ ಪಾತ್ರೆಯಲ್ಲಿ ಗಸಗಸೆ, ಹುಚ್ಚೆಳ್ಳು ಹಾಕಿ ಚಟಪಟ ಅಂತ ಶಬ್ದ ಬರುವವರೆಗೂ ಚೆನ್ನಾಗಿ ಹುರಿದುಕೊಳ್ಳಿ. ನಂತರ ಅದನ್ನು ಮಿಕ್ಸಿ ಜಾರಿಗೆ ಸೇರಿಸಿ. ಜೊತೆಗೆ ಕಾಯಿತುರಿ, ಚಕ್ಕೆ, ಲವಂಗ, ಕಾಳುಮೆಣಸು, ಹುರಿಗಡಲೆ, ಟೊಮೆಟೊ ಹಾಕಿ ಇದನ್ನು ನುಣ್ಣಗೆ ರುಬ್ಬಿಕೊಳ್ಳಿ. ಚಿಕನ್ ಹುರಿದ ನಂತರ ಮಟನ್ ಸಾಂಬಾರ್ ಪುಡಿ, ಖಾರದ ಪುಡಿ ರುಬ್ಬಿಕೊಂಡ ಮಿಶ್ರಣವನ್ನು ಹಾಕಿ ಚೆನ್ನಾಗಿ ಕಲೆಸಿಕೊಳ್ಳಿ. ಒಂದರಿಂದ ಎರಡು ಗ್ಲಾಸ್ ನೀರು ಹಾಕಿ. ಕುಕರ್ ಮುಚ್ಚಳವನ್ನು ಮುಚ್ಚಿ ಒಂದು ವಿಷಲ್ ಕೂಗಿಸಿ. ಕೊನೆಯದಾಗಿ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಇದನ್ನು ಮುದ್ದೆ ಜೊತೆಗೆ ಸವಿಯಬಹುದು.

(ಲೇಖಕಿ: ಅನು ಸ್ವಯಂ ಕಲಿಕೆ ಯೂಟ್ಯೂಬ್ ಚಾನೆಲ್ ನಿರ್ವಾಹಕಿ)

---

# 'ಸ-ಮುದ್ರ' ಯುವ ಮನಸ್ಸುಗಳಿಗೆ ಚೈತನ್ಯದ ಮುದ್ರೆ

**ರೇಷ್ಮಾ**

**ಇತ್ತೀಚೆಗೆ** ಯುವಜನರನ್ನು ಖಿನ್ನತೆ, ಆತಂಕ, ಒತ್ತಡದಂತಹ ಮಾನಸಿಕ ಸಮಸ್ಯೆಗಳು ಹೆಚ್ಚಾಗಿ ಕಾಡುತ್ತಿವೆ. ಜೊತೆಗೆ ಅವರಲ್ಲಿ ಆತ್ಮಹತ್ಯೆಯಂತಹ ಪ್ರಕರಣಗಳು ಹೆಚ್ಚುತ್ತಿವೆ. ಇದು ಕಳವಳಕಾರಿ ವಿಷಯವೂ ಹೌದು. ಇಂತಹ ಸಂದರ್ಭದಲ್ಲಿ ಯುವ ಮನಸ್ಸುಗಳ ಮಾನಸಿಕ ತಲ್ಲಣ ಹಾಗೂ ಗೊಂದಲಗಳನ್ನು ಪರಿಹರಿಸಿ ಆತ್ಮಹತ್ಯೆಯ ಯೋಚನೆಯೂ ಬಾರದಂತೆ ಆಪ್ತ ಸಮಾಲೋಚನೆ ನೀಡುವ ಮೂಲಕ ಜೀವನ ಪ್ರೀತಿ ಹುಟ್ಟಿಸುವ ಕೆಲಸ ಮಾಡುತ್ತಿದೆ 'ಸ-ಮುದ್ರ ಫೌಂಡೇಶನ್'.

ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಸ-ಮುದ್ರ ಫೌಂಡೇಶನ್ ಸಂಸ್ಥೆಯ ರೂವಾರಿ ಭಾರತಿ ಸಿಂಗ್. ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮಾಡಿದ ಇವರು ಡೆವಲಪ್‌ಮೆಂಟ್ ಮ್ಯಾನೇಜ್‌ಮೆಂಟ್‌ನಲ್ಲಿ ಎಂಬಿಎ ಮುಗಿಸಿದ್ದಾರೆ. ನಿಮ್ಹಾನ್ಸ್‌ನಲ್ಲಿ ಒಂದಿಷ್ಟು ದಿನಗಳ ಕಾಲ ಆಪ್ತಸಮಾಲೋಚಕಿಯಾಗಿಯೂ ಕೆಲಸ ಮಾಡಿದ ಅನುಭವ ಇವರಿಗಿದೆ.



ತಮ್ಮ ತಂಡದ ಸದಸ್ಯೆಯೊಂದಿಗೆ ಭಾರತಿ

## 'ಸ-ಮುದ್ರ' ಹುಟ್ಟಿನ ಹಿಂದೆ

ಇಗ್‌ಫೈ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ವೃತ್ತಿ ಸಮಾಲೋಚಕಿಯಾಗಿ ಕೆಲಸ ಮಾಡುತ್ತಿದ್ದಾಗ ಭಾರತಿ ಅವರ ಜೀವನದಲ್ಲಿ ನಡೆದ ಘಟನೆಯೊಂದು ಅವರಿಗೆ ಈ ಸಂಸ್ಥೆ ಸ್ಥಾಪಿಸಲು ಕಾರಣ. ಅದರೊಂದಿಗೆ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿದ್ದ ಖಿನ್ನತೆ, ಗೊಂದಲ, ನಿರಾಶೆ, ಆತ್ಮಹತ್ಯೆ ಮನೋಭಾವಗಳನ್ನು ನೋಡಿ ಉಚಿತವಾಗಿ ಯುವಜನತೆಗೆ ಸಮಾಲೋಚನೆ ನೀಡಬೇಕು, ಆ ಮೂಲಕ ಅವರಲ್ಲಿ ಆತ್ಮಹತ್ಯೆ ಮನೋಭಾವ ನಿವಾರಿಸಿ ಮಾನಸಿಕ ಸ್ಥೈರ್ಯ ಹೆಚ್ಚುವಂತೆ ಮಾಡಬೇಕು ಎಂಬ ಉದ್ದೇಶ ಅವರ ಮನಸ್ಸಿನಲ್ಲಿ ಮೂಡಿತ್ತು.

2007ರಿಂದ ಕಾರ್ಯನಿರ್ವಹಿಸುತ್ತಿರುವ ಸ-ಮುದ್ರ ಸಂಸ್ಥೆ ದೇಶದಾದ್ಯಂತ 1 ಲಕ್ಷದ 88 ಸಾವಿರಕ್ಕೂ ಅಧಿಕ ಮಂದಿಗೆ ಆಪ್ತಸಮಾಲೋಚನೆ ನೀಡಿದೆ. ಭಾರತಿ ಅವರನ್ನೂ ಸೇರಿ 4 ಮಂದಿ ಆಪ್ತಸಮಾಲೋಚಕರು ಸಂಸ್ಥೆಯಲ್ಲಿದ್ದಾರೆ. ಬದುಕಿನಲ್ಲಿ ಆತ್ಮಹತ್ಯೆಯೊಂದೇ ನಮಗಿನ್ನು ದಾರಿ ಎಂದುಕೊಂಡವರು ಕೂಡ ಆ ಯೋಚನೆಯನ್ನು ಬಿಟ್ಟು ಸುಂದರ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡುತ್ತಿದೆ ಈ ಸಂಸ್ಥೆ.

'ತಮ್ಮ ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳಿವೆ ಎಂದು ತಿಳಿದ ಪೋಷಕರು ಸಮಾಜಕ್ಕೆ ಹೆದರಿ ಆಪ್ತಸಮಾಲೋಚನೆ ಕೊಡಿಸುವುದಿಲ್ಲ. ಹಾಗೆಯೇ ದುಶ್ಚಟಗಳಿಗೆ ಬಲಿಯಾದ ಮಕ್ಕಳನ್ನು ಸರಿದಾರಿಗೆ ತರಲು ಒದ್ದಾಡುವ ಪೋಷಕರು ಕೂಡ ಆಪ್ತಸಮಾಲೋಚನೆಗೆ ಮುಂದೆ ಬರುವುದಿಲ್ಲ. ಹಾಗಾಗಿ ಮಕ್ಕಳು ಹಾಗೂ ಪೋಷಕರು ಇಬ್ಬರಿಗೂ ತಮ್ಮ ಮನದ ಮಾತುಗಳನ್ನು ಹೇಳಿಕೊಳ್ಳಲು ಒಂದು ವೇದಿಕೆ ಕಲ್ಪಿಸಬೇಕು ಎಂಬ ಉದ್ದೇಶದಿಂದ ನನ್ನ ಗುರುಗಳಾದ ರಾಧಕೃಷ್ಣ ಅವರ ನೆರವಿನೊಂದಿಗೆ ನಾನು ಸ-ಮುದ್ರವನ್ನು ಆರಂಭಿಸಿದೆ' ಎಂದು ತಮ್ಮ ಸಂಸ್ಥೆಯ ಹುಟ್ಟಿನ ಹಿಂದಿನ ಕತೆಯನ್ನು ಭಾರತಿ ವಿವರಿಸುತ್ತಾರೆ.

ಸಂಸ್ಥೆ ಆರಂಭಕ್ಕೂ ಮೊದಲು ಯುವಕರಲ್ಲಿ ಆತ್ಮಹತ್ಯೆ ಹಾಗೂ ಮಾನಸಿಕ ತೊಂದರೆಗಳು ಈ ವಿಷಯವಾಗಿ ಪ್ರಾಜೆಕ್ಟ್ ಮಾಡಿದ್ದರು ಭಾರತಿ. ಇದರೊಂದಿಗೆ ಸಂಶೋಧನೆಗಳ ಅನುಭವಗಳನ್ನು ಪಡೆವ ಮೂಲಕ ಸಂಸ್ಥೆಯನ್ನು ಆರಂಭಿಸಿದರು.

### ಯುವಜನರಿಗೆ ಕಿವಿಮಾತು



ಕೆಟ್ಟ ಹಟ, ಕೆಟ್ಟ ಚಟಗಳನ್ನು ತಜ್ಯಿಸಿ ಛಲ, ಹವ್ಯಾಸ ರೂಢಿಸಿಕೊಳ್ಳಿ. ನಿಮ್ಮ ಬಗ್ಗೆ ನೀವು ಅರಿವು ಮೂಡಿಸಿಕೊಳ್ಳಿ. ಸ್ವಯಂ-ಗುರುತಿಸಿಕೊಳ್ಳುವಿಕೆ ತುಂಬಾ ಮುಖ್ಯ. ಯಾವುದೇ ತೊಂದರೆ ಆದರೆ ಒಂದು ಫೋನ್ ಕರೆಯ ಮೂಲಕ ತೊಂದರೆಯನ್ನು ಹಂಚಿಕೊಳ್ಳಿ. ಜೀವನವನ್ನು ಪ್ರೀತಿಸಿ. ಜೀವನಕ್ಕಿಂತ ದೊಡ್ಡದು ಯಾವುದೂ ಇಲ್ಲ. ಜೀವನವನ್ನು ನಾವು ಪ್ರೀತಿಸಿದರೆ ಎಲ್ಲವೂ ನಮ್ಮನ್ನು ಪ್ರೀತಿಸುತ್ತದೆ. ಆತ್ಮಸ್ಥೈರ್ಯ ಹುಟ್ಟುವ ಮೊದಲು ಸ್ವ ಪ್ರೀತಿ ಬಹಳ ಮುಖ್ಯ.

**ಭಾರತಿ ಸಿಂಗ್**

## ಭವಿಷ್ಯದ ಕನಸು

ಸಾವಿರಾರು ಯುವಮನಸ್ಸುಗಳಲ್ಲಿ ಜೀವನ ಪ್ರೀತಿಯನ್ನು ಹುಟ್ಟು ಹಾಕಿ, ಬದುಕಿನ ಬೆಲೆಯನ್ನು ಕಲಿಸಿದ ಭಾರತಿ ಅವರಿಗೆ ಮುಂದೆ ತಮ್ಮ ಸಂಸ್ಥೆಯನ್ನು ಒಂದು ಉತ್ತಮ ಯುವ ತಂಡದ ಕೈಗೆ ನೀಡಬೇಕು ಎನ್ನುವ ಹಂಬಲವಿದೆ. ಇದರೊಂದಿಗೆ ಮಾದಕ ವ್ಯಸನಿಗಳಾಗಿರುವ ಹಾಗೂ ಮಾನಸಿಕ ಸಮಸ್ಯೆಗಳಿರುವ ಹೆಣ್ಣುಮಕ್ಕಳಿಗಾಗಿ 'ಹಾರ್ಮೊನಿ ಹೋಮ್' ಸ್ಥಾಪಿಸುವ ಕನಸೂ ಇದೆ.

**ಸ-ಮುದ್ರ ಯುವ ಸಹಾಯವಾಣಿ:** 98803 96331, ಮಹಿಳಾ ಸಹಾಯವಾಣಿ: 94804 88430

---

# ಗರ್ಭಿಣಿಯರಲ್ಲಿ ಕಾಲು ನೋವು ಸಾಮಾನ್ಯವೇ?

ಸ್ಪಂದನ



**ಡಾ. ವೀಣಾ ಎಸ್. ಭಟ್**

- **ನನಗೆ 26 ವರ್ಷ. ಮೊದಲ ಬಾರಿಗೆ ಗರ್ಭಿಣಿ. ಏಳು ತಿಂಗಳಾಗಿದೆ. ನನಗೆ ಆಗಾಗ ಕಾಲಿನ ಮೀನಖಂಡ ಸೆಳೆತ ಬಂದು ರಾತ್ರಿಯಲ್ಲಿ ನಿದ್ರೆಯೂ ಹಾಳಾಗುತ್ತದೆ. ವೈದ್ಯರು ಕ್ಯಾಲ್ಸಿಯಂ, ಕಬ್ಬಿಣಾಂಶ ಮಾತ್ರೆ ಎಲ್ಲಾ ಕೊಟ್ಟಿದ್ದಾರೆ. ಆದರೂ ಕಡಿಮೆ ಆಗಿಲ್ಲ. ಏನು ಮಾಡಲಿ?**

**ಸುಮಿತ್ರಾ,** ಊರಿನ ಹೆಸರಿಲ್ಲ

ಸುಮಿತ್ರಾರವರೇ ಶೇ 50ರಷ್ಟು ಗರ್ಭಿಣಿಯರಿಗೆ ಕಾಲುನೋವು, ಮೀನಖಂಡ ಸೆಳೆತ ಇವೆಲ್ಲಾ ಉಂಟಾಗಬಹುದು. ಗರ್ಭಧಾರಣೆಯಲ್ಲಿ ಹೆಚ್ಚು ತೂಕ ಗಳಿಸುವುದರಿಂದ, ಬೆಳೆಯುತ್ತಿರುವ ಗರ್ಭಸ್ಥ ಶಿಶುವಿನ ಕಾರಣದಿಂದ, ಸೂಕ್ಷ್ಮ ರಕ್ತನಾಳ ಹಾಗೂ ನರಗಳ ಜಾಲದ ಮೇಲೆ ಒತ್ತಡ ಉಂಟಾಗುವುದರಿಂದ, ದೀರ್ಘಾವಧಿ ಒಂದೇ ಕಡೆ ಒಂದೇ ಭಂಗಿಯಲ್ಲಿ ಕುಳಿತುಕೊಳ್ಳುವುದು, ನಿಲ್ಲುವುದರಿಂದ, ಅತಿಯಾದ ಆಯಾಸ ಹಾಗೂ ನಿರ್ಜಲತೆಯಿಂದ, ಕೆಲವು ಸೂಕ್ಷ್ಮ ಪೋಷಕಾಂಶ ಹಾಗೂ ಖನಿಜಾಂಶಗಳ ಕೊರತೆ ಇತ್ಯಾದಿಗಳಿಂದ ಇಂತಹ ಕಾಲುಸೆಳೆತ ಉಂಟಾಗಬಹುದು. ಪರಿಹಾರವಾಗಿ ದಿನಾ ಕನಿಷ್ಠ 3-4 ಲೀಟರ್ ಉಗುರು ಬೆಚ್ಚಗಿನ ನೀರನ್ನು ಕುಡಿಯಬೇಕು. ನಿತ್ಯ ಕೈ ಹಾಗೂ ಕಾಲುಗಳ ವ್ಯಾಯಾಮಗಳನ್ನು ಮಾಡಬೇಕು. ಒಂದೇ ಭಂಗಿಯಲ್ಲಿ ಹೆಚ್ಚು ಹೊತ್ತು ನಿಲ್ಲುವುದು, ಕೂರುವುದು ಮಾಡಬಾರದು. ಕನಿಷ್ಠ ಅರ್ಧ ಗಂಟೆಯಾದರೂ ವಾಕಿಂಗ್ ಮಾಡುವುದು, ಮೀನಖಂಡ ಹಾಗೂ ಪಾದಗಳನ್ನು ಆಗಾಗ ಮಸಾಜ್ ಮಾಡಿಕೊಳ್ಳುವುದು ಮತ್ತು ಬಿಸಿನೀರಿನ ಶಾಖ ಕೊಡುವುದು, ಕಾಲುಚೀಲ ಬಳಸುವುದು, ಕಾಲುಗಳನ್ನು ಬೆಚ್ಚಗೆ ಇಟ್ಟುಕೊಳ್ಳುವುದು ಮಾಡಿ. ಮುಖ್ಯವಾಗಿ ನೀವು ಆಗಲೇ ಕಬ್ಬಿಣ ಮತ್ತು ಕ್ಯಾಲ್ಸಿಯಂ ಮಾತ್ರೆ ಸೇವಿಸುತ್ತಿದ್ದರೂ ಸ್ಥಳೀಯವಾಗಿ ಸಿಗುವಂತಹ ಹಣ್ಣು, ತರಕಾರಿ, ಹಸಿರುಸೊಪ್ಪುಗಳನ್ನು ಹೆಚ್ಚು ಹೆಚ್ಚು ಸೇವಿಸಿ.

- **ನನಗೆ 28 ವರ್ಷ. ನಾರ್ಮಲ್ ಹೆರಿಗೆಯಾಗಿ ಒಂದು ತಿಂಗಳು. ಮಲ ವಿಸರ್ಜನೆ ಮಾಡುವಾಗ ನೋವಾಗುತ್ತದೆ, ಏನೋ ಹೊರಗೆ ಬಂದ ಹಾಗಾಗುತ್ತದೆ. ಕೆಲವೊಮ್ಮೆ ರಕ್ತಾನೂ ಹೋಗುತ್ತದೆ. ಮನೆಯಲ್ಲಿ ಎಲ್ಲರೂ ಇದು ಮೂಲವ್ಯಾಧಿ ಅಂತಿದ್ದಾರೆ. ಕೆಲವರು ಹೀಟಾಗಿದೆ ಅಂತಿದ್ದಾರೆ. ಏನು ಮಾಡಲಿ? ತುಂಬಾ ಗಾಬರಿ, ಒತ್ತಡ ಎನಿಸುತ್ತಿದೆ.**

**ಮಾಧುರಿ,** ಹಾನಗಲ್

ನಿಮಗೆ ಗುದದ್ವಾರದಲ್ಲಿ ಗಂಟಿದೆ ಎಂದಿದ್ದೀರಿ. ಅದು ಪೈಲ್ಸ್ ಇರಬಹುದು ಅಥವಾ ಫಿಷರ್ ಇರಬಹುದು. ನೀವು ನಿಮ್ಮ ವೈದ್ಯರನ್ನು ಭೇಟಿ ಮಾಡಿ ಖಾತ್ರಿಪಡಿಸಿಕೊಳ್ಳಿ. ಸರಿಯಾದ ಮಲವಿಸರ್ಜನೆಗೆ 3-4 ಲೀಟರ್ ನೀರು ಹಾಗೂ ಸಾಕಷ್ಟು ನಾರಿನಾಂಶ (25 ರಿಂದ 30 ಗ್ರಾಂ ಪ್ರತಿದಿನ ಸೊಪ್ಪು, ತರಕಾರಿಗಳ ರೂಪದಲ್ಲಿ) ನಿತ್ಯವೂ ಸೇವಿಸಬೇಕು. ಬಾಣಂತನಕ್ಕೆ ಎಂದು ನೀರು ಕುಡಿಯುವುದನ್ನು ಕಡಿಮೆ ಮಾಡಿ ಸೊಪ್ಪು, ನಾರಿನಾಂಶವುಳ್ಳ ತರಕಾರಿ ಸೇವಿಸದೇ ಇದ್ದುದಕ್ಕೆ ನಿಮಗೆ ಹೀಗಾಗಿರಬಹುದು. ಮಲಬದ್ಧತೆಯಾಗದ ಹಾಗೇ ನೋಡಿಕೊಂಡರೆ, ಜೀವನಶೈಲಿ ಬದಲಿಸಿಕೊಂಡರೆ, ತಜ್ಞರ ಸಲಹೆ ಪಡೆದು ಅನುಸರಿಸಿದರೆ ಶಸ್ತ್ರಚಿಕಿತ್ಸೆ ಸಂಭವ ಕಡಿಮೆ. ಹಾಗೆ ಮಾಡದೇ ನೀವು ಮುಜುಗರ ಪಟ್ಟುಕೊಂಡರೆ ಪೈಲ್ಸ್ ಸದಾ ಹೊರಗೇ ಇದ್ದು ಅದನ್ನು ಒಳಹಾಕಲು ಸಾಧ್ಯವಾಗದೇ ಇದ್ದಾಗ ರಕ್ತಸ್ರಾವ ಜಾಸ್ತಿ ಆಗಬಹುದು. ಅಂತಹ ಸಂದರ್ಭದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಬೇಕಾಗಬಹುದು. ಅದಕ್ಕೆ ಉತ್ತಮವಾದ ವಿಧಾನಗಳು ಈಗ ಪ್ರಚಲಿತದಲ್ಲಿವೆ. ಯಾವುದಕ್ಕೂ ತಜ್ಞರನ್ನು ಭೇಟಿ ಮಾಡಿ. ನಿರ್ಲಕ್ಷಿಸಬೇಡಿ.


ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ


### ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.in ಗೆ ಕಳಿಸಬಹುದು.



### ಸುಭಾಷಿತ

ಪ್ರತೀ ಕ್ಷಣವನ್ನೂ ಅದು ನಿಮಗೆ ಸಿಕ್ಕ ಉಡುಗೊರೆ ಎಂದು ಪರಿಗಣಿಸಿ. ಅದಕ್ಕಾಗೇ ಅದನ್ನು ವರ್ತಮಾನ ಎಂದು ಕರೆಯುವುದು. –ದೀಪಕ್ ಚೋಪ್ರಾ

# ವೇಗ ಕಳೆದುಕೊಂಡ ಲಸಿಕೆ ಅಭಿಯಾನ ರಾಜ್ಯಗಳನ್ನು ದೂಷಿಸುವುದು ಪರಿಹಾರವಲ್ಲ

**ದೇಶದಲ್ಲಿ** 18 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನವು ಜುಲೈ ತಿಂಗಳಿನಲ್ಲಿ ವೇಗ ಕಳೆದುಕೊಂಡಿದೆ. ಇದಕ್ಕೂ ಮೊದಲು ಅಭಿಯಾನವು ಕೆಲವು ದಿನಗಳ ಕಾಲ ಗಮನಾರ್ಹ ವೇಗ ದಾಖಲಿಸಿತ್ತು. ಕಳೆದ ಏಳು ದಿನಗಳ ಅವಧಿಯಲ್ಲಿ ಪ್ರತಿದಿನ ನೀಡಲಾದ ಸರಾಸರಿ ಡೋಸ್‌ಗಳ ಸಂಖ್ಯೆಯು ಅಂದಾಜು 35 ಲಕ್ಷ ಇದೆ. ಜೂನ್ 21ರ ನಂತರದ ವಾರದಲ್ಲಿ ಪ್ರತಿದಿನ ಸರಾಸರಿ 58 ಲಕ್ಷ ಡೋಸ್ ಲಸಿಕೆ ನೀಡಲಾಗಿತ್ತು. ಆಗಿನ ಸಂಖ್ಯೆಗೆ ಹೋಲಿಸಿದರೆ ಈಗ ನೀಡಲಾಗುತ್ತಿರುವ ಡೋಸ್‌ಗಳ ಸಂಖ್ಯೆ ಬಹಳ ಕಡಿಮೆ ಇದೆ ಎಂಬುದು ಸ್ವಯಂವೇದ್ಯ. ಕೇಂದ್ರ ಸರ್ಕಾರವು ಲಸಿಕೆ ನೀಡುವ ನೀತಿಯಲ್ಲಿ ಮಹತ್ವದ ಬದಲಾವಣೆಗಳನ್ನು ತಂದು, ಜೂನ್ 21ರಿಂದ ಭಾರಿ ಪ್ರಚಾರದೊಂದಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ವೇಗ ತುಂಬಿತು. ಕೆಲವು ದಿನಗಳವರೆಗೆ ವೇಗವಾಗಿಯೇ ಸಾಗುತ್ತಿದ್ದ ಲಸಿಕೆ ನೀಡುವ ಅಭಿಯಾನವು ನಂತರದಲ್ಲಿ ಮೊದಲಿನ ವೇಗ ಕಳೆದುಕೊಂಡಿದೆ. ತಮಗೆ ಅಗತ್ಯ ಪ್ರಮಾಣದಲ್ಲಿ ಲಸಿಕೆ ಸಿಗುತ್ತಿಲ್ಲ ಎಂದು ಮಹಾರಾಷ್ಟ್ರ ಸರ್ಕಾರ ಮತ್ತು ದೆಹಲಿ ಸರ್ಕಾರ ದೂರುತ್ತಿವೆ. ಒಡಿಶಾ ಮತ್ತು ಮಧ್ಯಪ್ರದೇಶ ರಾಜ್ಯಗಳು ಕೆಲವು ಜಿಲ್ಲೆಗಳಲ್ಲಿ ಲಸಿಕೆ ನೀಡುವುದನ್ನು ಸ್ಥಗಿತಗೊಳಿಸಿರುವ ವರದಿಗಳಿವೆ. 'ನಮಗೆ ನಿಗದಿ ಮಾಡಿರುವ ಲಸಿಕೆಗಳ ಸಂಖ್ಯೆಯು ಬೇಡಿಕೆಗೆ ತಕ್ಕಂತೆ ಇಲ್ಲ. ಅಷ್ಟೇ ಅಲ್ಲ, ಬಿಜೆಪಿ ಆಡಳಿತ ಇರುವ ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಿಗೆ ಹೋಲಿಸಿದರೆ ನಮಗೆ ಕಡಿಮೆ ಸಂಖ್ಯೆಯಲ್ಲಿ ಲಸಿಕೆ ನಿಗದಿ ಮಾಡಲಾಗಿದೆ' ಎಂದು ತಮಿಳುನಾಡು ಆರೋಪಿಸಿದೆ. ಲಸಿಕೆ ಪೂರೈಕೆಯು ನಿಯಮಿತವಾಗಿ ಇಲ್ಲ ಎಂದು ಕೆಲವು ರಾಜ್ಯಗಳು ಆರೋಪಿಸಿವೆ. ರಾಜ್ಯಗಳು ಲಸಿಕೆ ನೀಡಲು ಸರಿಯಾದ ಯೋಜನೆ ರೂಪಿಸಿಲ್ಲ, ಇದರಿಂದಾಗಿಯೇ ಅವು ಸಮಸ್ಯೆ ಎದುರಿಸುತ್ತಿವೆ ಎಂದು ಕೇಂದ್ರ ಸರ್ಕಾರ ಪ್ರತ್ಯಾರೋಪ ಮಾಡಿದೆ. ಕೇಂದ್ರ ಆರೋಗ್ಯ ಸಚಿವರಾಗಿ ಹೊಸದಾಗಿ ಅಧಿಕಾರ ಸ್ವೀಕರಿಸಿರುವ ಮನಸುಖ್ ಮಾಂಡವಿಯ ಅವರು, ರಾಜ್ಯಗಳು ನಿಷ್ಪ್ರಯೋಜಕ ಹೇಳಿಕೆಗಳನ್ನು ನೀಡುತ್ತಿವೆ, ಜನರಲ್ಲಿ ಭೀತಿ ಹುಟ್ಟಿಸುತ್ತಿವೆ ಎಂದು ಹೇಳಿದ್ದಾರೆ. ಲಸಿಕೆಗಳ ಕೊರತೆ ಇಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.



**ಅಗತ್ಯ ಇರುವಷ್ಟು ಲಸಿಕೆ ದೇಶದಲ್ಲಿ ಉತ್ಪಾದನೆ ಆಗಬೇಕು ಅಥವಾ ಅಷ್ಟು ಲಸಿಕೆಗಳನ್ನು ವಿದೇಶಗಳಿಂದಾದರೂ ತರಿಸಿಕೊಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕು**

ಲಭ್ಯ ಲಸಿಕೆಗಳ ನಿರ್ವಹಣೆಗಿಂತಲೂ ಹೆಚ್ಚಾಗಿ ಲಸಿಕೆಗಳ ಲಭ್ಯತೆ ಇಲ್ಲದಿರುವುದೇ ದೊಡ್ಡ ಸಮಸ್ಯೆ ಎಂಬುದನ್ನು ಅಂಕಿ-ಅಂಶಗಳು ಹೇಳುತ್ತಿವೆ. ಲಸಿಕೆ ನೀಡುವ ಕೆಲಸವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದನ್ನು ಮಾತ್ರ ರಾಜ್ಯಗಳಿಂದ ನಿರೀಕ್ಷಿಸಬಹುದು. ಲಸಿಕೆ ನೀಡುವ ಯೋಜನೆಯನ್ನು ರಾಜ್ಯಗಳು ಅಸಮರ್ಪಕವಾಗಿ ಜಾರಿಗೆ ತಂದಿರುವ ವರದಿಗಳು ಇಲ್ಲ. ಲಸಿಕೆ ಪಡೆಯಲು ಅರ್ಹತೆ ಹೊಂದಿರುವ ಎಲ್ಲ ವಯಸ್ಕರಿಗೂ ಈ ವರ್ಷದ ಅಂತ್ಯದೊಳಗೆ ಲಸಿಕೆ ನೀಡಲಾಗುವುದು ಎಂದು ಕೇಂದ್ರವು ಘೋಷಿಸಿದೆ. ಇದು ಸಾಧ್ಯವಾಗಬೇಕು ಎಂದಾದರೆ ಪ್ರತಿದಿನ ಅಂದಾಜು 88 ಲಕ್ಷ ಜನರಿಗೆ ಲಸಿಕೆ ನೀಡಬೇಕು. ಇಷ್ಟು ಸಂಖ್ಯೆಯಲ್ಲಿ ಲಸಿಕೆ ನೀಡಲು ಸಾಧ್ಯವಾಗಿದ್ದು ಜೂನ್ 21ರಂದು ಮಾತ್ರ. ಈಗ ಪ್ರತಿದಿನ 30 ಲಕ್ಷದಿಂದ 35 ಲಕ್ಷದವರೆಗೆ ಲಸಿಕೆ ನೀಡಲಾಗುತ್ತಿದ್ದು, ವರ್ಷದ ಅಂತ್ಯದೊಳಗೆ ಎಲ್ಲರಿಗೂ ಲಸಿಕೆ ಕೊಡಲು ಸಾಧ್ಯವಿಲ್ಲ. ಲಸಿಕೆಗಳನ್ನು ಆದಷ್ಟು ತ್ವರಿತವಾಗಿ ಪೂರೈಕೆ ಮಾಡುವ ತುರ್ತು ಇದೆ.

ಲಸಿಕೆ ಉತ್ಪಾದನೆಗೆ ವೇಗ ದೊರೆತರೆ ಮಾತ್ರ ಲಸಿಕೆ ಪೂರೈಕೆ ಇನ್ನಷ್ಟು ಚುರುಕಾಗಲು ಸಾಧ್ಯ. ದೇಶದಲ್ಲಿ ಲಸಿಕೆಯನ್ನು ಈಗಿನ ಮಟ್ಟಕ್ಕಿಂತ ಹೆಚ್ಚು ವೇಗವಾಗಿ ಉತ್ಪಾದಿಸಲು ಸಾಧ್ಯವಿಲ್ಲ ಎಂದಾದರೆ, ಲಸಿಕೆಯನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುವತ್ತ ಕೇಂದ್ರ ಸರ್ಕಾರ ಗಮನ ಹರಿಸಬೇಕು. ಕೋವಿಡ್‌ನ ಮೂರನೆಯ ಅಲೆಯು ಸದ್ಯದಲ್ಲೇ ಎದುರಾಗಲಿದೆ ಎಂಬ ಆತಂಕ ಇರುವ ಈ ಸಂದರ್ಭದಲ್ಲಿ, ಲಸಿಕೆ ನೀಡುವ ಪ್ರಕ್ರಿಯೆಯನ್ನು ಇನ್ನಷ್ಟು ಚುರುಕುಗೊಳಿಸಲೇಬೇಕು. ಆಗಸ್ಟ್ ಮತ್ತು ಡಿಸೆಂಬರ್ ನಡುವಿನ ಅವಧಿಯಲ್ಲಿ ಒಟ್ಟು 216 ಕೋಟಿ ಡೋಸ್ ಲಸಿಕೆ ಲಭ್ಯವಿರುವಂತೆ ಮಾಡಲಾಗುವುದು ಎಂದು ಕೇಂದ್ರವು ಈ ಹಿಂದೆ ಹೇಳಿತ್ತು. ನಂತರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಅದು ಬೇರೊಂದು ಮಾಹಿತಿ ನೀಡಿತು; ಆಗಸ್ಟ್-ಡಿಸೆಂಬರ್ ಅವಧಿಯಲ್ಲಿ ಒಟ್ಟು 135 ಕೋಟಿ ಡೋಸ್ ಲಸಿಕೆ ಸಿಗುವಂತೆ ಮಾಡಲಾಗುತ್ತದೆ ಎಂದು ಹೇಳಿತು. ಕೇಂದ್ರವೇ ನಿಗದಿ ಮಾಡಿಕೊಂಡಿರುವ ಗುರಿಯನ್ನು ತಲುಪಬೇಕು ಎಂದಾದಲ್ಲಿ, 188 ಕೋಟಿ ಡೋಸ್ ಲಸಿಕೆ ಬೇಕಾಗುತ್ತದೆ. ಲಸಿಕೆ ಉತ್ಪಾದನೆ ಹೆಚ್ಚಿಸಲು ಲಸಿಕೆ ತಯಾರು ಮಾಡುವ ಕಂಪನಿಗಳಿಗೆ ಪ್ರೋತ್ಸಾಹ ನೀಡಬೇಕು. ಲಸಿಕೆ ತಯಾರಿಸಲು ಅಗತ್ಯವಿರುವ ಕೆಲವು ಕಚ್ಚಾವಸ್ತುಗಳು ಸಿಗುತ್ತಿಲ್ಲ, ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ ಕೆಲವು ನಿರ್ಬಂಧಗಳನ್ನು ತೆರವು ಮಾಡಬೇಕು ಎಂದು ಕಂಪನಿಗಳು ಕೇಂದ್ರಕ್ಕೆ ಮನವಿ ಮಾಡಿವೆ. ಕೋವ್ಯಾಕ್ಸಿನ್ ಲಸಿಕೆಯನ್ನು ತಯಾರಿಸುವ ಭಾರತ್ ಬಯೋಟೆಕ್ ಕಂಪನಿಯು ತನ್ನ ಲಸಿಕೆ ಉತ್ಪಾದನೆ ಸಾಮರ್ಥ್ಯವನ್ನು ಮೂರು ಪಟ್ಟು ಹೆಚ್ಚಿಸಿಕೊಳ್ಳುವುದಾಗಿ ಹೇಳಿತ್ತು. ಆದರೆ, ಹಲವು ಕಾರಣಗಳಿಂದಾಗಿ ಗುರಿ ತಲುಪುವುದು ವಿಳಂಬವಾಗಿದೆ ಎಂಬ ವರದಿಗಳು ಇವೆ. ಅಗತ್ಯ ಇರುವಷ್ಟು ಲಸಿಕೆ ದೇಶದಲ್ಲಿ ಉತ್ಪಾದನೆ ಆಗಬೇಕು ಅಥವಾ ಅಷ್ಟು ಲಸಿಕೆಗಳನ್ನು ವಿದೇಶಗಳಿಂದಾದರೂ ತರಿಸಿಕೊಡುವ ಕೆಲಸವನ್ನು ಕೇಂದ್ರ ಸರ್ಕಾರ ಮಾಡಬೇಕು. ಲಸಿಕೆ ಹಂಚಿಕೆಯು ನ್ಯಾಯಸಮ್ಮತವಾಗಿ, ಪಾರದರ್ಶಕವಾಗಿ ಆಗಬೇಕು. ರಾಜ್ಯಗಳನ್ನು ದೂಷಿಸುತ್ತ ಕುಳಿತಿರುವುದರಿಂದ ಪ್ರಯೋಜನ ಇಲ್ಲ.

## ದಿನದ ಟ್ವೀಟ್




### ಇದೆಂಥ ಬೆಳವಣಿಗೆ?

ಅಫ್ಗಾನಿಸ್ತಾನದಲ್ಲಿ ಆಫ್ಗನ್ ಸೈನಿಕರ ಮೇಲೆ ತಾಲಿಬಾನ್ ನಡೆಸಿದ ದಾಳಿಯಲ್ಲಿ ಭಾರತೀಯ ಪತ್ರಿಕಾ ಛಾಯಾಗ್ರಾಹಕ ಡ್ಯಾನಿಷ್ ಸಿದ್ಧಿಕಿ ಅವರು ಸಾವನ್ನಪ್ಪಿರುವುದು ಅತ್ಯಂತ ದುರಂತಮಯ ಸಂಗತಿ. ತಾಲಿಬಾನ್‌ಗೆ ಪಾಕಿಸ್ತಾನ ಸೇನೆಯ ಬೆಂಬಲ ಇದೆ ಎಂಬುದನ್ನು ನಾವು ಮರೆಯುವಂತಿಲ್ಲ ಮತ್ತು ತಾಲಿಬಾನ್ ಜೊತೆ 'ಶಾಂತಿ ಒಪ್ಪಂದ' ಮಾಡಿಕೊಂಡಿರುವ ಅಮೆರಿಕವು ಸಂಪೂರ್ಣ ಅವ್ಯವಸ್ಥೆಯ ನಡುವೆ ಅಫ್ಗಾನಿಸ್ತಾನವನ್ನು ಬಿಟ್ಟು ಹೊರಡುತ್ತಿದೆ. ಎಂತಹ ಅನಾಹುತಕಾರಿ ಸ್ಥಿತಿ!

**ಆರ್ತಿ ಟಿಕೂ ಸಿಂಗ್,** ಪತ್ರಕರ್ತೆ

## ಕಿಡಿನುಡಿ

ಗುಜರಾತ್ ಮಾದರಿಯಲ್ಲಿ ಏನಿದೆ? 2008ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿಯವರು 'ಧೋಲೇರಾ ಗಿಫ್ಟ್ ಸಿಟಿ' ನಿರ್ಮಾಣದ ಹೆಸರಿನಲ್ಲಿ ದೊಡ್ಡ ಪ್ರಚಾರ ಪಡೆದಿದ್ದರು. ಅದರ ಸ್ಥಿತಿ ಏನಾಗಿದೆ ಎಂಬುದನ್ನು ಯುಟ್ಯೂಬ್‌ನಲ್ಲೇ ನೋಡಬಹುದು. ಅದಕ್ಕೆ ನಮ್ಮ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಮತ್ತು ಅಧಿಕಾರಿಗಳು ಜನರ ತೆರಿಗೆ ಹಣ ಬಳಸಿಕೊಂಡು ಗುಜರಾತ್‌ಗೆ ಹೋಗಬೇಕಿತ್ತೆ?



**ಎಚ್.ಡಿ.ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಬುಧವಾರ, 17-7-1996

• **ರಾಜ್ಯಕ್ಕೆ ಪ್ರತ್ಯೇಕ ರೈಲ್ವೆ ವಲಯ**

**ನವದೆಹಲಿ, ಜುಲೈ 16**– ಬೆಂಗಳೂರಿಗೆ ಹೊಸದಾಗಿ ಹೆಚ್ಚುವರಿ ರೈಲ್ವೆ ವಲಯ, ಕೊಂಕಣ ರೈಲ್ವೆ, ಅಕ್ಟೋಬರ್‌ನಿಂದ ಸರಕು ಸಾಗಣೆಗೆ ಮತ್ತು ಡಿಸೆಂಬರ್‌ನಿಂದ ಪ್ರಯಾಣಿಕರಿಗಾಗಿ ಸಂಚಾರ ಆರಂಭ. ಶತಾಬ್ದಿ ಎಕ್ಸ್‌ಪ್ರೆಸ್ ಬದಲು ಹುಬ್ಬಳ್ಳಿ-ಬೆಂಗಳೂರು ನಡುವೆ ಅಂತರ ನಗರ ಎಕ್ಸ್‌ಪ್ರೆಸ್ ರೈಲು, ಚಿಕ್ಕಮಗಳೂರು ಮಾರ್ಗವಾಗಿ ಕಡೂರಿನಿಂದ ಸಕಲೇಶಪುರದವರೆಗೆ ಹೊಸ ರೈಲುಮಾರ್ಗ ನಿರ್ಮಾಣ.

ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಇಂದು ಲೋಕಸಭೆಯಲ್ಲಿ ಮಂಡಿಸಿದ, ಎಚ್.ಡಿ. ದೇವೇಗೌಡ ನೇತೃತ್ವದ ಸರ್ಕಾರದ ಚೊಚ್ಚಲ ರೈಲ್ವೆ ಬಜೆಟ್‌ನಲ್ಲಿ ಕರ್ನಾಟಕಕ್ಕೆ ನೀಡಿರುವ ವಿಶೇಷ ಕೊಡುಗೆಗಳು ಇವು.

• **ಅಪಘಾತ: ಮಾನು, ಬಂದಗದ್ದೆ ಸಾವು**

**ಹಾಸನ, ಜುಲೈ 16**– ಸಮಾಜವಾದಿ ಚಿಂತಕ ರಮೇಶ ಬಂದಗದ್ದೆ ಹಾಗೂ ಚಿತ್ರನಟ ಮಾನು ಇಂದು ಬೆಳಿಗ್ಗೆ ಅರಸೀಕೆರೆ ಸಮೀಪ ಕೆರೆಕೋಡಿಹಳ್ಳಿ ಬಳಿ ನಡೆದ ಭೀಕರ ಕಾರು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ.

## 50 ವರ್ಷಗಳ ಹಿಂದೆ

ಶನಿವಾರ, 17-7-1971

• **ಚೀನಾಕ್ಕೆ ನಿಕ್ಸನ್: 'ಶಾಂತಿ ಪ್ರವಾಸ'**

**ಲಾಸ್ ಏಂಜಲೀಸ್, ಜುಲೈ 16**– ಅಮೆರಿಕದ ಅಧ್ಯಕ್ಷ ನಿಕ್ಸನ್ ಅವರು ಬರುವ ಮೇ ತಿಂಗಳೊಳಗಾಗಿ ಚೀನಾಕ್ಕೆ ಭೇಟಿ ಕೊಡಲಿದ್ದಾರೆ.

ಎರಡು ರಾಷ್ಟ್ರಗಳ ನಡುವೆ ಬಾಂಧವ್ಯವನ್ನು ಸಹಜ ಸ್ಥಿತಿಗೆ ತರಲು ಯತ್ನಿಸುವುದಕ್ಕಾಗಿ, ಚೀನಾಕ್ಕೆ ಭೇಟಿಕೊಡಲು ಆಹ್ವಾನವನ್ನು ಅಂಗೀಕರಿಸುವುದಾಗಿ ಅಧ್ಯಕ್ಷ ನಿಕ್ಸನ್ ನಿನ್ನೆ ರಾತ್ರಿ ರಾಷ್ಟ್ರವ್ಯಾಪೀ ಟೆಲಿವಿಜನ್ ಪ್ರಸಾರ ಭಾಷಣದಲ್ಲಿ ಪ್ರಕಟಿಸಿದರು. ಚೌ ಜತೆ ಮಾತುಕತೆ ನಡೆಸಲಿರುವ ಅವರು ತಮ್ಮ ಪೀಕಿಂಗ್ ಭೇಟಿ 'ಶಾಂತಿ ಪ್ರವಾಸ' ಆಗಲೆಂಬ ಆಶಯ ವ್ಯಕ್ತಪಡಿಸಿದರು.

• **ಭಾರತದ ಮೇಲೆ ಪರಿಣಾಮ ಕುರಿತು ವಿಶೇಷ ಅಧ್ಯಯನ**

**ನವದೆಹಲಿ, ಜುಲೈ 16**– ಅಮೆರಿಕದ ಅಧ್ಯಕ್ಷ ನಿಕ್ಸನ್ ಅವರ ಪೀಕಿಂಗ್ ಭೇಟಿಯಿಂದ ಭಾರತದ ಮೇಲೆ ಆಗಬಹುದಾದ ಪರಿಣಾಮ ಕುರಿತು ಕೇಂದ್ರ ಸರ್ಕಾರ ಅಧ್ಯಯನ ಆರಂಭಿಸಿದೆ.

ರೈತಸ್ನೇಹಿ ಹಾವುಗಳು ವಿನಾಕಾರಣ ಮನುಷ್ಯನಿಗೆ ಬಲಿಯಾಗುತ್ತಿರುವುದು ಬಹುದೊಡ್ಡ ವಿಪರ್ಯಾಸ

# ಉರಗ ಸಂರಕ್ಷಣೆ ಏಕೆ? ಹೇಗೆ?



ವಿಶ್ಲೇಷಣೆ

**ಅಖಿಲೇಶ್ ಚಿಪ್ಪಳಿ**

**ಹಾವುಗಳ** ಕುರಿತಾಗಿ ಇರುವಷ್ಟು ಮೂಢನಂಬಿಕೆ ಜಗತ್ತಿನ ಬೇರೆ ಯಾವುದೇ ಪ್ರಾಣಿಗಳ ಕುರಿತಾಗಿ ಇಲ್ಲ. ಇದಕ್ಕೆ ಮುಖ್ಯವಾದ ಕಾರಣ ಹಾವಿನ ಕುರಿತ ಅತಿಕಡಿಮೆ ತಿಳಿವಳಿಕೆ ಮತ್ತು ಅನಗತ್ಯ ಭಯ! ಎಲ್ಲ ಜಾತಿಯ ಹಾವುಗಳೂ ವಿಷಪೂರಿತವಾಗಿವೆ, ಎಲ್ಲ ಹಾವುಗಳೂ ಕಚ್ಚುತ್ತವೆ, ಹಾವು ಕಚ್ಚಿದರೆ ಬದುಕುಳಿಯುವುದು ಕಷ್ಟ ಎಂಬ ನಂಬಿಕೆ ಹೆಚ್ಚಿನ ಜನರಲ್ಲಿದೆ. ಆದ್ದರಿಂದ, ಹಾವನ್ನು ನೋಡಿದ ತಕ್ಷಣ ಬಹಳ ಜನ ಮೊದಲು ಬಡಿಗೆ ಹುಡುಕುತ್ತಾರೆ.

ಕರ್ನಾಟಕದಲ್ಲಿ ಸುಮಾರು 50 ಜಾತಿಯ ಹಾವುಗಳಿರಬಹುದು ಎಂದು ಅಂದಾಜಿಸಲಾಗಿದೆ. ಇವುಗಳಲ್ಲಿ ನಾಲ್ಕು ಜಾತಿಯ ಹಾವುಗಳು ಮಾತ್ರ ವಿಷಪೂರಿತವಾಗಿವೆ. ಅಂದರೆ, ಆಕಸ್ಮಿಕವಾಗಿ ಅವು ಕಚ್ಚಿದಲ್ಲಿ ವ್ಯಕ್ತಿ ಮರಣಿಸಬಹುದು ಅಥವಾ ತೀವ್ರವಾಗಿ ಅನಾರೋಗ್ಯ ಕಾಡಬಹುದು. ಉಳಿದವೆಲ್ಲಾ ವಿಷರಹಿತ ಹಾವುಗಳೇ. ಸಹಜ ಅರಣ್ಯ ಪ್ರದೇಶವನ್ನು ಬರಿದು ಮಾಡುತ್ತಿರುವ ಮಾನವನಿಂದಾಗಿ ನೆಲೆ ಕಳೆದುಕೊಂಡ ವನ್ಯಜೀವಿಗಳು ಅನಿವಾರ್ಯವಾಗಿ ಮಾನವನಿರ್ಮಿತ ಹಳ್ಳಿಗೋ ಪೇಟೆಗೋ ಅಥವಾ ಹೊಲಕ್ಕೋ ಬರುತ್ತಿವೆ.

ಧಾನ್ಯಗಳನ್ನು ಬೆಳೆಯುವ ರೈತರು ಇಲಿ– ಹೆಗ್ಗಣಗಳಿಂದಾಗಿ ತಮ್ಮ ಫಸಲಿನ ಶೇ 40ರಷ್ಟು ಭಾಗವನ್ನು ಕಳೆದುಕೊಳ್ಳುತ್ತಿದ್ದಾರೆ. ಮನುಷ್ಯನಿಗಿಂತ ತೀರಾ ಮೊದಲೇ ಈ ಧರೆಯಲ್ಲಿ ಅವತರಿಸಿದ ದಂಶಕ ಸಂತತಿಯು ನಿಸರ್ಗದ ಎಲ್ಲಾ ತರಹದ ವೈಪರೀತ್ಯಗಳನ್ನು ಎದುರಿಸಿ ಬದುಕಿದೆ. ಅದರಲ್ಲೂ ಇಲಿ ಮತ್ತು ಹೆಗ್ಗಣಗಳು ಬಹಳ ಬುದ್ಧಿಮತ್ತೆಯನ್ನು ಪ್ರದರ್ಶಿಸುವ ಪ್ರಾಣಿಗಳಾಗಿವೆ. ಭತ್ತ ಕಾಳು ಬಿಡುವ ಹೊತ್ತಿನ ಸಮಯದಲ್ಲೇ ಗದ್ದೆಯಲ್ಲಿ ಇಲಿ-ಹೆಗ್ಗಣಗಳ ಸುರಂಗ ಮಾರ್ಗ ನಿರ್ಮಿತವಾಗಿರುತ್ತದೆ. ಅಹೋರಾತ್ರಿ ಶ್ರಮಪಟ್ಟ ಫಸಲನ್ನು ಇಲಿಗಳು ಬಹಳ ನಾಜೂಕಾಗಿ ಕತ್ತರಿಸಿ ತಮ್ಮ ಸುರಂಗ ಮಳಿಗೆಗಳಿಗೆ ಸಾಗಿಸುತ್ತವೆ. ಉತ್ತಮ ಹವಾಮಾನ ಮತ್ತು ಹೇರಳ ಆಹಾರವಿದ್ದಲ್ಲಿ ಜೋಡಿ ಇಲಿಗಳು ಒಂದು ವರ್ಷದ ಅವಧಿಯಲ್ಲಿ ತಮ್ಮ ಸಂಖ್ಯೆಯನ್ನು 800ರಷ್ಟು ವಿಸ್ತರಿಸಿಕೊಳ್ಳುತ್ತವೆ ಎಂದು ಕಂಡುಕೊಳ್ಳಲಾಗಿದೆ.


ರೈತರಿಗೆ ಮಾರಕವಾದ ದಂಶಕಗಳ ಸಂಖ್ಯೆಯನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರಗಳು ಖರ್ಚು ಮಾಡುವ ಹಣ ಅಷ್ಟು ಸುಲಭವಾಗಿ ಲೆಕ್ಕಕ್ಕೆ ಸಿಗಲಾರದು. ದಂಶಕಗಳ ಸಂಖ್ಯೆ ವಿಪರೀತ ಹೆಚ್ಚದಂತೆ ಕಡಿವಾಣ ಹಾಕಲು ನಿಸರ್ಗ ಸೃಷ್ಟಿ ಮಾಡಿದ ಪ್ರಾಣಿಯೇ ಹಾವು ಅಥವಾ ಉರಗ. ಇಲಿಗಳ ಸುರಂಗದೊಳಗೆ ಅನಾಯಾಸವಾಗಿ ನುಗ್ಗಿ ಬೇಟೆಯಾಡುವ ಹಾವುಗಳು, ಇಲಿಗಳಿಗೆ ನೈಸರ್ಗಿಕ ಶತ್ರುಗಳು. ಇಲಿಗಳನ್ನು ತಿನ್ನುವ ಇನ್ನಿತರ ಪ್ರಾಣಿಗಳಿಗೆ ಸುರಂಗದ ಒಳಗೆ ಹೋಗಿ ಬೇಟೆಯಾಡುವ ತಂತ್ರ ಸಿದ್ಧಿಸಿಲ್ಲ. ಉದಾಹರಣೆಗೆ, ಬಿಲದಿಂದ ಹೊರಬಂದ ಇಲಿಯನ್ನಷ್ಟೇ ಗೂಬೆಗಳು ಬೇಟೆಯಾಡಬಲ್ಲವು.

ಇಂತಹ ರೈತಸ್ನೇಹಿ ಹಾವುಗಳು ವಿನಾಕಾರಣ ಮನುಷ್ಯನಿಗೆ ಬಲಿಯಾಗುತ್ತಿರುವುದು ಮಾತ್ರ ಅತಿದೊಡ್ಡ ವಿಪರ್ಯಾಸ. ಒಂದು ಹಾವು ವಾರದಲ್ಲಿ ಎರಡು ಇಲಿಗಳನ್ನು ತಿನ್ನುತ್ತದೆ ಎಂದಿಟ್ಟುಕೊಂಡರೆ, ವರ್ಷದಲ್ಲಿ ಕಡಿಮೆಯೆಂದರೂ ನೂರು ಚಿಲ್ಲರೆ ಇಲಿಗಳನ್ನು ತಿಂದ ಹಾಗಾಯಿತು. ಒಂದು ಹಾವಿನ ನಾಶವು ಲಕ್ಷಾಂತರ ಇಲಿಗಳ ಹುಟ್ಟಿಗೆ ಕಾರಣವಾಗುತ್ತದೆ ಎಂಬುದು ಕಣ್ಣಿಗೆ ಕಾಣುವ ಲೆಕ್ಕಾಚಾರ. ಕರ್ನಾಟಕದಲ್ಲಾಗಲೀ ಅಥವಾ ಭಾರತದಲ್ಲಾಗಲೀ ಹಾವಿನ ಕಡಿತಕ್ಕೊಳಗಾಗಿ ಸಾಯುವವರ ಸಂಖ್ಯೆಗಿಂತ ಇಲಿ ಮೂಲದ ಕಾಯಿಲೆಗೆ ಬಲಿಯಾಗುವವರ ಸಂಖ್ಯೆಯೇ ಹೆಚ್ಚಿದೆ.

ಸಿನಿಮಾದಲ್ಲಿ ಹಾವು ಅಟ್ಟಿಸಿಕೊಂಡು ಬಂದು ಖಳನಾಯಕನನ್ನೋ ಅಥವಾ ಖಳನಾಯಕಿಯನ್ನೋ ಕಚ್ಚುವ ಅತಿರೇಕದ ದೃಶ್ಯಗಳನ್ನು ಸಾಮಾನ್ಯವಾಗಿ ನೋಡಿದ ಜನ, ವಾಸ್ತವದಲ್ಲೂ ಇದು ನಿಜ ಎಂದುಕೊಂಡಿರುತ್ತಾರೆ. ಹಾವಿನ ದ್ವೇಷ ಹನ್ನೆರಡು ವರ್ಷ ಎಂಬ ಮಾತೂ ಮೂಢನಂಬಿಕೆಗಳನ್ನು ಪುಷ್ಟೀಕರಿಸುವಲ್ಲಿ ತನ್ನ ಪಾತ್ರ ವಹಿಸಿದೆ. ಆದರೆ, ಹಾವಿಗೆ ಯಾವುದೇ ನೆನಪಿನ ಶಕ್ತಿಯಾಗಲೀ, ನೋಡಿದ ಮನುಷ್ಯನನ್ನು ಗುರುತಿಟ್ಟುಕೊಳ್ಳುವ ಶಕ್ತಿಯಾಗಲೀ ಇಲ್ಲ. ಆಕಸ್ಮಿಕವಾಗಿ ವಿಷದ ಹಾವು ಕಚ್ಚಿದರೂ ತಕ್ಷಣದಲ್ಲಿ ಪ್ರತಿವಿಷದ ಚಿಕಿತ್ಸೆ ಕೊಡಿಸಿದಲ್ಲಿ, ವ್ಯಕ್ತಿ ಮರಣಹೊಂದುವ ಸಾಧ್ಯತೆ ತೀರಾ ಕಡಿಮೆ. ಹಾವು ಕಡಿತಕ್ಕೊಳಗಾದ ವ್ಯಕ್ತಿಯು ಹೆಚ್ಚಿನ ಬಾರಿ ಹೆದರಿಕೆಯಿಂದ ಸಾಯುವುದೇ ಹೆಚ್ಚು. ವಿಷರಹಿತ ಹಾವಿನಿಂದ ಕಚ್ಚಿಸಿಕೊಂಡು ಸತ್ತವರೂ ಇದ್ದಾರೆ ಎಂದರೆ, ಹಾವಿನ ಕುರಿತಾದ ನಮ್ಮ ಭಯ ಎಂಥಾದ್ದಿರಬಹುದು?

ಸತತ ಬರದಿಂದ ನಲುಗಿದ್ದ ಪೂರ್ವ ಆಸ್ಟ್ರೇಲಿಯಾವನ್ನು ಇಲಿಗಳ ದಂಡು ತೀವ್ರವಾಗಿ ಬಾಧಿಸುತ್ತಿದೆ. ಕಷ್ಟಪಟ್ಟು ಬೆಳೆದ ಧಾನ್ಯಗಳು ಇಲಿಗಳಿಗೆ ಆಹಾರವಾಗುತ್ತಿವೆ. ಲಕ್ಷಾಂತರ ಇಲಿಗಳು ಸರ್ವವ್ಯಾಪಿಯಾಗಿ ಸಿಕ್ಕಿದ್ದನ್ನೆಲ್ಲಾ ತಿಂದು ಹಾಕುತ್ತಿವೆ. ಇಲಿಗಳು ಅಲ್ಲಿ ಅಕ್ಷರಶಃ ಮಾನವನ ಮೇಲೆ ಯುದ್ಧವನ್ನೇ ಸಾರಿವೆ. ಇಲಿಗಳನ್ನು ಬಂಧಿಸಿಡಲು ಅಲ್ಲಿ ಯಾವುದೇ ಕಿಂದರಜೋಗಿಗಳು ಇಲ್ಲ. ಅಲ್ಲಿನ ಪೂರಕ ವಾತಾವರಣ ಇಲಿಗಳ ಸಂಖ್ಯೆ ಹೆಚ್ಚಲು ಕಾರಣ ಎಂಬುದು ಸಾಮಾನ್ಯ ಅಭಿಪ್ರಾಯ.

ಯಾವುದೇ ಪ್ರಾಣಿಯ ಸಂಖ್ಯೆ ಮೇರೆಮೀರಿದಲ್ಲಿ ಅದನ್ನು ನಿಸರ್ಗಸಹಜವಾಗಿ ನಿಯಂತ್ರಿಸಲು ಪ್ರಕೃತಿಯಲ್ಲಿ ತನ್ನದೇ ಆದ ವ್ಯವಸ್ಥೆ ಇರುತ್ತದೆ. ಪೂರ್ವ ಆಸ್ಟ್ರೇಲಿಯಾದಲ್ಲಿ ಹಾವುಗಳ ಸಂಖ್ಯೆ ಅತಿ ಕಡಿಮೆಯಾಗಿರುವುದು ಇಲಿಗಳ ಹೆಚ್ಚಳಕ್ಕೆ ಕಾರಣವಾಗಿದೆ ಎಂಬುದು ಇನ್ನೊಂದು ವಾದ. ತಕ್ಷಣದಲ್ಲಿ ಚಳಿಗಾಲ ಪ್ರಾರಂಭವಾದಲ್ಲಿ ಇಲಿಗಳ ಸಂಖ್ಯೆ ನಿಸರ್ಗಸಹಜವಾಗಿಯೇ ನಿಯಂತ್ರಣಗೊಳ್ಳುತ್ತದೆ. ಇಲ್ಲವಾದಲ್ಲಿ, ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದು ಅನಿವಾರ್ಯ.



ಇಲಿಗಳನ್ನು ಕೊಲ್ಲಲು ಹಲವು ತರಹದ ರಾಸಾಯನಿಕ ಯುಕ್ತ ಔಷಧಗಳಿವೆ. ಅದರಲ್ಲಿ ಮುಖ್ಯವಾದುದು ಝಿಂಕ್ ಫಾಸ್ಫೇಟ್. ಆದರೆ ಇಲಿಗಳನ್ನು ಸಂಹರಿಸಲು ಇನ್ನೂ ಘೋರ ವಿಷ ಬೇಕು ಎಂಬುದು ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಮಂತ್ರಿಮಹೋದಯರ ಅಂಬೋಣ. ಬ್ರೊಮೋಡಿಯೋಲೋನ್ ಎಂಬ ವಿಷ ಬಳಸಲು ಸರ್ಕಾರದ ಅನುಮತಿಗಾಗಿ ಕಾದು ಕುಳಿತಿದ್ದಾರೆ. ಈ ವಿಷವನ್ನು ತಿಂದು ಸತ್ತ ಇಲಿಗಳನ್ನು ತಿನ್ನುವ ಅಲ್ಲಿನ ವನ್ಯಪಕ್ಷಿಗಳು, ಇನ್ನಿತರ ವನ್ಯಜೀವಿಗಳು ಸಾವಿನ ಅಂಚು ತಲುಪಲಿವೆ ಎಂಬ ಎಚ್ಚರಿಕೆಯನ್ನು ವನ್ಯಪ್ರೇಮಿಗಳು ನೀಡುತ್ತಿದ್ದಾರೆ. ಇದಿಷ್ಟು ಪೂರ್ವ ಆಸ್ಟ್ರೇಲಿಯಾದ ಬಿಕ್ಕಟ್ಟಿನ ಪ್ರಸಂಗ.

ಮಲೆನಾಡಿನಲ್ಲಿ ಸ್ವಾಭಾವಿಕವಾಗಿ ಉರಗ ಸಂತತಿ ಹೆಚ್ಚಿರುತ್ತದೆ. ಪೇಟೆ ಪಟ್ಟಣಗಳಲ್ಲೂ ಇವು ಕಂಡು ಬರುತ್ತವೆ. ಮನೆಯ ಸುತ್ತ ಕಸ ಕಡ್ಡಿಗಳು, ಹೇರಳ ಗಲೀಜು ಇದ್ದಲ್ಲಿ, ಇಲಿಗಳು ಅವುಗಳನ್ನು ತಿನ್ನಲು ಬರುತ್ತವೆ. ಅವುಗಳ ಹಿಂದೆಯೇ ಹಾವುಗಳೂ ಬರುತ್ತವೆ. ಹಾವು ಹಿಡಿಯುವವರಿಗಾಗಿ ಹುಡುಕಾಟ ಮಾಡಿ, ತಜ್ಞತೆಯೇ ಇಲ್ಲದವರನ್ನು ಕರೆಸಿ, ಅವರಿಗೊಂದಿಷ್ಟು ಹಣ ನೀಡಿ, ಹಾವು ಹಿಡಿಸಲಾಗುತ್ತದೆ. ಅವೈಜ್ಞಾನಿಕವಾಗಿ ಹಾವುಗಳನ್ನು ಹಿಡಿಯುವುದು ಮತ್ತು ಅದರದಲ್ಲದ ಪ್ರದೇಶದಲ್ಲಿ ಬಿಟ್ಟುಬರುವುದು ಕಾನೂನಿನ ಪ್ರಕಾರ ತಪ್ಪು. ನಮ್ಮ ಅರಣ್ಯ ಇಲಾಖೆಯ ಕ್ಷಮತೆ ಹೇಗಿದೆ ಎಂದರೆ, ಇಲಾಖೆಯ ಯಾರೊಬ್ಬರಿಗೂ ಹಾವನ್ನು ಸುರಕ್ಷಿತವಾಗಿ ಹಿಡಿದು, ನಿರ್ವಹಿಸಲು ಗೊತ್ತಿಲ್ಲ. ಖಾಸಗಿ ವ್ಯಕ್ತಿಗಳ ಮೊರೆ ಹೋಗಿಯೇ ಹಾವು ಹಿಡಿಸುವ ಅನಿವಾರ್ಯ ಇಲಾಖೆಗಿದೆ.

ವನ್ಯಜೀವಿ ಸಂರಕ್ಷಣಾ ಕಾಯ್ದೆ– 1972ರ ಅಡಿಯಲ್ಲಿ ಹೆಬ್ಬಾವು ಪರಿಚ್ಛೇದ 1ರಲ್ಲಿ ಬರುತ್ತದೆ. ಹುಲಿ-ಸಿಂಹ-ಆನೆಗಳು ಇದರಡಿಯಲ್ಲಿ ಬರುತ್ತವೆ. ಉಳಿದ ಉರಗ ಸಂತತಿಗಳು ಪರಿಚ್ಛೇದ 2ರ ಅಡಿಯಲ್ಲಿ ಬರುತ್ತವೆ. ಇವುಗಳಿಗೂ ಬಿಗಿಯಾದ ಕಾನೂನಿನ ರಕ್ಷಣೆ ಇದೆ. ಜನವಸತಿ ಪ್ರದೇಶದಲ್ಲಿ ಹಾವುಗಳು ಬಂದಾಗ ನಿರ್ವಹಣೆ ಮಾಡುವ ರೀತಿಯಲ್ಲಿ ಇಲಾಖೆ ತೀವ್ರ ತಾರತಮ್ಯ ಮಾಡುತ್ತಿದೆ. ಹಾವುಗಳ ರಕ್ಷಣೆಯ ವಿಷಯದಲ್ಲಿ ಅರಣ್ಯ ಇಲಾಖೆಗೆ ಇಚ್ಛಾಶಕ್ತಿಯ ಅತೀವ ಕೊರತೆಯಿದೆ.

ಆನೆಯೊಂದು ಗುಂಡಿಗೆ ಬಿದ್ದಾಗ ಇಲಾಖೆಯ ಉನ್ನತ ಸ್ತರದ ಅಧಿಕಾರಿಗಳು ಓಡಿ ಬರುತ್ತಾರೆ. ಅದೇ ಹೆಬ್ಬಾವೊಂದು ಬಾವಿಯಲ್ಲಿ ಬಿದ್ದಾಗ ಬರೀ ವಾಚರ್ ಮತ್ತು ಗಾರ್ಡುಗಳು ಅದನ್ನು ಹಿಡಿಸುವ ಮತ್ತು ನಿರ್ವಹಿಸುವ ಕೆಲಸ ಮಾಡಬೇಕಾಗುತ್ತದೆ. ಹಾವುಗಳು ಜೀವಜಾಲದ ಕೊಂಡಿಯಲ್ಲಿ ಅತಿಮುಖ್ಯ ಪಾತ್ರ ವಹಿಸುತ್ತವೆ. ಇವುಗಳ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ವಿಷದ ಹಾವುಗಳು ಆಕಸ್ಮಿಕವಾಗಿ ಜನವಸತಿ ಪ್ರದೇಶಕ್ಕೆ ಬಂದಾಗ ವೈಜ್ಞಾನಿಕವಾಗಿ ಹೇಗೆ ನಿರ್ವಹಿಸಬೇಕು ಎಂಬುದಕ್ಕೆ ಅರಣ್ಯ ಇಲಾಖೆ ಅತಿ ಸ್ಪಷ್ಟವಾದ ನೀತಿ ನಿಯಮಗಳನ್ನು ರೂಪಿಸಿ ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಇದರ ಅರಿವನ್ನು ಜನಸಾಮಾನ್ಯರಲ್ಲಿ ಮೂಡಿಸಬೇಕು. ಅಂದಹಾಗೆ, ಜುಲೈ 16 ಅನ್ನು ವಿಶ್ವ ಹಾವು ದಿನವನ್ನಾಗಿ ಆಚರಿಸಲಾಗುತ್ತದೆ.

## ಸಂಗತ

# ಬದಲಾಗಬೇಕಿದೆ ನೌಕರರ ಮನೋಭಾವ

ನೊಂದವರಿಗೆ ತ್ವರಿತವಾಗಿ ನ್ಯಾಯ ಒದಗಿಸುವ ಪರಿಪಾಟವು ನೌಕರರ ಸೇವಾ ನಿಯಮವಾದಲ್ಲಿ ಜನರಿಗೂ ಸರ್ಕಾರಿ ಕಚೇರಿಗಳ ಮೇಲೆ ಪ್ರೀತಿ ಹುಟ್ಟುತ್ತದೆ

• ಪ.ರಾಮಕೃಷ್ಣ ಶಾಸ್ತ್ರಿ

**ಹೆದ್ದಾರಿಯ** ವಿಸ್ತರಣೆ ಕಾರ್ಯ ನಡೆಯುತ್ತಿತ್ತು. ಚತುಷ್ಪಥ ರಸ್ತೆಗಾಗಿ ಎರಡೂ ಬದಿಗಳನ್ನು ಅಗಲವಾಗಿಸಲು ದೈತ್ಯ ಯಂತ್ರಗಳು ಮನೆಗಳನ್ನು, ಮರಗಳನ್ನು ಕತ್ತರಿಸಿ ಹಾಕುತ್ತ ಹೋಗುತ್ತಿದ್ದವು.

ಆ ವೇಳೆ, ಜಿಲ್ಲಾಧಿಕಾರಿಯೊಬ್ಬರು ಅದೇ ದಾರಿಯಲ್ಲಿ ಹೋಗುವಾಗ ಒಂದು ಮನೆಯ ದೃಶ್ಯವನ್ನು ನೋಡಿದರು. ಗುಡ್ಡದ ಅಂಚಿನಲ್ಲಿನ ಆ ಮನೆಯ ತಳಪಾಯದ ತನಕವೂ ಕತ್ತರಿಸಿ ಸಮತಟ್ಟು ಮಾಡ ಲಾಗಿದೆ. ಹದಿನೈದು ಅಡಿ ಎತ್ತರದಲ್ಲಿರುವ ಮನೆಗೆ ಹೋಗಲು ದಾರಿಯೇ ಇರಲಿಲ್ಲ. ಜಿಲ್ಲಾಧಿಕಾರಿ ಕಾರು ನಿಲ್ಲಿಸಿ, ರಸ್ತೆಯ ಬಳಿ ಕಂಬನಿ ತುಂಬಿಕೊಂಡು ನಿಂತಿದ್ದ ಮಹಿಳೆಯನ್ನು 'ಏನಮ್ಮ, ಮನೆ ನಿನ್ನದೇನಾ?' ಎಂದು ಕೇಳಿದರು. 'ಹೌದು ಸರ್, ಕಟ್ಟಿದ ಬೀಡಿ ಕೊಟ್ಟು ಬರಲು ಪೇಟೆಗೆ ಹೋಗಿದ್ದೆ. ಬರುವುದರೊಳಗೆ ಎಲ್ಲ ಕತ್ತರಿಸಿ ಹಾಕಿ ಹೋಗಿದ್ದಾರೆ. ನನ್ನ ಪಾತ್ರೆ ಪಡಗ ಎಲ್ಲ ಮನೆಯೊಳಗೇ ಇವೆ. ಒಳಗೆ ಹೋಗಲಿಕ್ಕೆ ದಾರಿಯೂ ಇಲ್ಲ' ಎಂದಳು.

ಜಿಲ್ಲಾಧಿಕಾರಿ ತಮ್ಮ ಮೊಬೈಲಿನಲ್ಲಿ ಆ ಮನೆಯ ಚಿತ್ರ ತೆಗೆದರು. ಕಂದಾಯ ವಿಭಾಗದ ಎಲ್ಲ ಅಧಿಕಾರಿಗಳಿಗೂ ಕಳುಹಿಸಿ ತಕ್ಷಣ ಕ್ರಮ ಕೈಗೊಳ್ಳಲು ಹೇಳಿದರು. ಮರುದಿನ ಸಹಾಯಕ ಆಯುಕ್ತರು ಆ ಮಹಿಳೆಯನ್ನು ಹುಡುಕಿಕೊಂಡು ಬಂದರು. ರಸ್ತೆ ಗುತ್ತಿಗೆದಾರನನ್ನು ಕರೆಸಿದರು. ಮಹಿಳೆಗೆ ಮೂವತ್ತು ಲಕ್ಷ ರೂಪಾಯಿ ಪರಿಹಾರ ಕೊಡಿಸಿ, ಮನೆ ಕಟ್ಟಲು ಸರ್ಕಾರಿ ಜಾಗ ತೋರಿಸಿದರು. ಇನ್ನೇನು, ಆಕೆಯ ಹೊಸ ಮನೆ ಈಗ ಪ್ರವೇಶೋತ್ಸವಕ್ಕೆ ಸಿದ್ಧವಾಗಿದೆ.

ಮರುಭೂಮಿಯಲ್ಲಿ ಓಯಸಿಸ್ ಕಂಡ ಹಾಗೆ ಸಂತೋಷವಾಗುತ್ತಿದೆಯಲ್ಲ! ನೊಂದ ಮಹಿಳೆ ತನಗೆ ಅನ್ಯಾಯವಾಗಿದೆ ಎಂದು ಜಿಲ್ಲಾಧಿಕಾರಿಗೆ ಅರ್ಜಿ ಕೊಡುವುದು, ಅದು ತನಿಖೆಗಾಗಿ ತಹಶೀಲ್ದಾರರಲ್ಲಿಗೆ ಬರುವುದು, ಅಲ್ಲಿಂದ ಸಂಬಂಧಿಸಿದ ಒಬ್ಬೊಬ್ಬ ಅಧಿಕಾರಿಯ ಸನಿಹ ಬಂದು ಅರ್ಜಿಗೊಂದು ಉತ್ತರ ಸಿಗಲು ಕನಿಷ್ಠ ಆರು ತಿಂಗಳಾದರೂ ಬೇಕಾಗುತ್ತದೆ. ಸಂತ್ರಸ್ತರಿಗೆ ಪರಿಹಾರ ಸಿಗುವುದು ಆಮೇಲಿನ ಮಾತು. ಅಧಿಕಾರಿಯೊಬ್ಬ ಈ ಎಲ್ಲ ಆಚಾರಗಳನ್ನೂ ಬದಿಗೊತ್ತಿ ಶೀಘ್ರವಾಗಿ ನೊಂದವರ ಸಂಕಷ್ಟವನ್ನು ಗಮನಿಸಿ ನ್ಯಾಯ ಕೊಡಿಸಲು ಸಾಧ್ಯವಿದೆ ಎಂದು ಸಾಬೀತುಪಡಿಸಿದರೆ ಅಂತಹ ಅಧಿಕಾರಿ ಅಪರೂಪವಲ್ಲದೆ ಇನ್ನೇನು!

ಭಾರತ ಸ್ವತಂತ್ರವಾದ ಮೇಲೆ ಸರ್ಕಾರದ ನೌಕರರೆಲ್ಲರೂ ನಮ್ಮವರೇ ಎಂದು ಅಭಿಮಾನಪಟ್ಟೆವು. ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿಯಾದಾಗ 'ಸರ್ಕಾರದ ಕೆಲಸ ದೇವರ ಕೆಲಸ' ಎಂಬ ಘೋಷವಾಕ್ಯವನ್ನು ಕಚೇರಿಗಳಲ್ಲಿ ಬರೆಸಿಟ್ಟರು. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದಾಗ, ರಾಶಿ ಬಿದ್ದ ಕಡತಗಳ ವಿಲೇವಾರಿ ಯಜ್ಞದ ಮೂಲಕ ವಿಳಂಬ ನೀತಿಯಲ್ಲಿ ಬದಲಾವಣೆ ತಂದರು. ಅವೆಲ್ಲವೂ ಇತಿಹಾಸವಾಗುತ್ತಿವೆ. ಯಾಕೆಂದರೆ ಸರ್ಕಾರಿ ಕಚೇರಿಗಳ ಅನುಭವ ಬಹುತೇಕ ಜನಸಾಮಾನ್ಯರಿಗೆ ಹಿತಸ್ಪರ್ಶ ನೀಡಿಲ್ಲ, ಸುಖಮಯವಾಗಿಲ್ಲ.

ಕೊರೊನಾ ಸಮಯದಲ್ಲಿ ಜನರ ಆರೋಗ್ಯ ಸಂರಕ್ಷಣೆಗಾಗಿ ಪೊಲೀಸರು ಪಟ್ಟ ಶ್ರಮಕ್ಕಿಂತಲೂ ನಿರ್ಬಂಧಕಾಜ್ಞೆ ಉಲ್ಲಂಘಿಸಿದವರಿಗೆ ಹೊಡೆಯುವ ದೃಶ್ಯಗಳೇ ಮೇಲುಗೈ ಪಡೆದವು. ಯಾವುದೇ ಕೆಲಸಕ್ಕೆ ಆಯ್ಕೆಯಾಗಲು ವಿದ್ಯೆಯೇ ಅರ್ಹತೆಯಾಗುತ್ತದೆ ವಿನಾ ಕೆಲಸದಲ್ಲಿ ದಕ್ಷತೆ, ಸಾರ್ವಜನಿಕರೊಡನೆ ನಯ ವಿನಯದಿಂದ ವ್ಯವಹರಿಸುವುದು ಯೋಗ್ಯತೆಗಳಾಗಿ ಪರಿಗಣನೆಯಾಗದೆ ಹೋಗುವುದೇ ದುರ್ದೈವ.

ಕಾಲ ಆಧುನಿಕವಾಗುತ್ತಿದ್ದಂತೆ, ಹಿಂದಿನ ಕಾಲವೇ ಚೆನ್ನಾಗಿತ್ತು ಎಂದು ಎಲ್ಲರೂ ಅಂದುಕೊಳ್ಳುವ ಪರಿಸ್ಥಿತಿಯನ್ನು ಕಚೇರಿಗಳಲ್ಲಿ ಸಿಗುವ ಅನುಭವಗಳು ಕೂಡ ಹುಟ್ಟುಹಾಕುತ್ತಿವೆ. ಸರ್ಕಾರಿ ಬಸ್ಸುಗಳಲ್ಲಿ 'ಹಿರಿಯ ನಾಗರಿಕರಿಗೆ' ಎಂದು ಫಲಕವಿರುವ ಆಸನದಲ್ಲಿ ದೃಢಕಾಯ ಯುವಕನೊಬ್ಬ ಕುಳಿತಿದ್ದಾನೆ. 'ಅಂಗವಿಕಲರು' ಎಂದಿರುವಲ್ಲಿ ಸರ್ವಾಂಗ ಪರಿಪೂರ್ಣ ಹಾಯಾಗಿ ಆರೂಢನಾಗಿದ್ದಾನೆ. ಕಾಲಿಲ್ಲದ ವ್ಯಕ್ತಿಯೊಬ್ಬ ಕಂಬಿ ಹಿಡಿದು ನೇತಾಡುತ್ತಿದ್ದಾನೆ. ಯಾರಿಗೆ ಆ ಜಾಗ ಮೀಸಲಿದೆಯೋ ಅದನ್ನು ಕೊಡಿಸಬೇಕಾದ ನಿರ್ವಾಹಕ ತೆಪ್ಪಗೆ ಕುಳಿತಿರುವುದೆಂದರೆ ಅದು ಅವನ ಕರ್ತವ್ಯದ ನ್ಯೂನತೆಯೇ ಅಲ್ಲವೆ!



ಕಳೆದುಹೋದ ಕಾಲದ ಹಾಗೆ ಅಲ್ಲ. ಎಲ್ಲ ಕಚೇರಿಗಳಲ್ಲೂ ಗಣಕಯಂತ್ರಗಳಿವೆ. ನ್ಯಾಯ ಸಲ್ಲಿಕೆಗೆ ಕಾಯಬೇಕಿಲ್ಲ. ತೀವ್ರ ನೊಂದವನೂ ಕಡಿಮೆ ನೊಂದವನೂ ನ್ಯಾಯ ಪಡೆಯಬೇಕಿದ್ದರೆ ಶಾಸಕರೋ ಸಚಿವರೋ ಶಿಫಾರಸು ಮಾಡಬೇಕಾದಂತಹ ಹೀನಾಯ ಸ್ಥಿತಿ ಯಾಕಿರಬೇಕು? ಒಬ್ಬ ನೌಕರನಿರಲಿ, ಅಧಿಕಾರಿಯಿರಲಿ, ನೊಂದವನಿಗೆ ದಕ್ಷತೆಯಿಂದ ನ್ಯಾಯ ಒದಗಿಸಲು ತ್ವರಿತ ಕ್ರಮ ಕೈಗೊಳ್ಳುವ ಪರಿಪಾಟ ಆತನ ಸೇವಾ ನಿಯಮವಾದಲ್ಲಿ ಜನರಿಗೂ ಸರ್ಕಾರಿ ಕಚೇರಿಗಳ ಮೇಲೆ ಪ್ರೀತಿ ಹುಟ್ಟುತ್ತದೆ.

ರಾಷ್ಟ್ರೀಕೃತ ಬ್ಯಾಂಕಿಗೆ ಹೋದರೆ ನೌಕರರು ಮುಖ ನೋಡುವುದಿಲ್ಲ. ಖಾಸಗಿ ಬ್ಯಾಂಕ್ ಸಿಬ್ಬಂದಿಗೆ ಬರುವ ವೇತನ ಕಡಿಮೆ. ಆದರೆ ಅಲ್ಲಿ ಏನಿಲ್ಲದಿದ್ದರೂ ಸೌಜನ್ಯ ಮತ್ತು ಸೌಹಾರ್ದಕ್ಕೆ ಬರಗಾಲವಿಲ್ಲ. ಇನ್ನು ಕಂದಾಯ ಇಲಾಖೆ ಮತ್ತು ಸಾರಿಗೆ ಇಲಾಖೆಯ ಕೆಲಸಗಳೆಲ್ಲವೂ ಮಧ್ಯವರ್ತಿಗಳ ಮೂಲಕವೇ ನಡೆಯುವಂತಹ ಕೆಟ್ಟ ಸ್ಥಿತಿ ಯಾವ ಚಿಕಿತ್ಸೆಗೂ ಮಣಿಯದಷ್ಟು ವ್ಯಾಪಕ ವಿಷಗ್ರಸ್ತವಾಗಿ ಬೆಳೆದಿದೆ.

ರಾಮರಾಜ್ಯದ ಬಗೆಗೆ ರಸವತ್ತಾಗಿ ವರ್ಣಿಸುತ್ತೇವೆ. ಆದರೆ ಭಾರತವು ಬ್ರಿಟಿಷ್ ದಬ್ಬಾಳಿಕೆಯಿಂದ ಮುಕ್ತಗೊಂಡು ಏಳು ದಶಕ ಕಳೆದರೂ ಕಚೇರಿಗಳಲ್ಲಿ ಅದೇ ದಬ್ಬಾಳಿಕೆ ಇದೆಯೆಂದರೆ ಏನರ್ಥ?! ರಾವಣ ರಾಜ್ಯದ ಭ್ರಮೆಯಲ್ಲಿರುವ ಸರ್ಕಾರಿ ಕಚೇರಿಯ ಅಧಿಕಾರಿಗೆ 'ಮೊದಲು ಮಾನವನಾಗು' ಎಂಬುದನ್ನು ಬೆರಳೆತ್ತಿ ತೋರಿಸುವುದು ಯಾವಾಗ?

## ಚುರುಮುರಿ



### ಆ್ಯನಿವರ್ಸರಿ ಆಶ್ವಾಸನೆ!

• ಎಸ್.ಬಿ.ರಂಗನಾಥ್

**ಚಿಕ್ಕೇಶಿಗೆ** ತಾನು ಯಾವುದೋ ಜೋಶ್‌ನಲ್ಲಿ ಕೊಟ್ಟಿದ್ದ ಆಶ್ವಾಸನೆ ಪೀಕಲಾಟಕ್ಕೆ ಸಿಕ್ಕಿಸುತ್ತದೆ ಎಂಬ ಕಲ್ಪನೆ ಇರಲಿಲ್ಲ. ಕೊರೊನಾ ಅರ್ಭಟ ಕಡಿಮೆಯಾದ ಮೇಲೆ ಆ್ಯನಿವರ್ಸರೀನ ಹೊರಗೆ ಸೆಲೆಬ್ರೇಟ್ ಮಾಡೋಣ ಅಂದಿದ್ದನ್ನೇ ಮುಂದಿಟ್ಟು ಹೆಂಡತಿ ಚಿನ್ನಮ್ಮ ಬೆಳ್ಳಂಬೆಳಗ್ಗೆ ಕಾಫಿ ನಿರಾಕರಣೆ ಚಳವಳಿ ಪ್ರಾರಂಭಿಸಿಬಿಟ್ಟಿದ್ದಳು!

'ಪೇಪರ್, ಟೀವಿ ನೋಡಿದೀಯಲ್ಲ. ಜನ ಮೈಮರೆತರೆ ಕೊರೊನಾ ಮೂರನೇ ಅಲೆ ಅಪ್ಪಳಿಸುತ್ತೇಂತ ಮೋದೀಜಿ ವಾರ್ನಿಂಗ್ ಕೊಟ್ಟಿಲ್ವೆ?' ಎಂದ ಚಿಕ್ಕೇಶಿ.

'ಅದೇ ಪೇಪರ್, ಟೀವೀಲಿ ಪುರಿ ಜಗನ್ನಾಥ ರಥೋತ್ಸವ ಶುರುವಾಗಿರೋದು, ಹೋಟೆಲ್-ಸಿನಿಮಾ-ಮಾರ್ಕೆಟ್‌ಗಳಲ್ಲಿ ಜನ ಜಮಾಯಿಸಿರೋದೂ ಬಂದಿತ್ತಲ್ಲ' ಚಿನ್ನಮ್ಮನ ಉವಾಚ.

'ಆಗ್ಲಿ, ನಾವು ಆ್ಯನಿವರ್ಸರೀನ ಆಕಾಶದಲ್ಲಿ ಮಾಡಿದ್ರೆ ಹೇಗೆ?' ಎಂದ. ಸ್ವಲ್ಪ ಮೆತ್ತಗಾದ ಚಿನ್ನಮ್ಮ 'ಅದೇನು ಬಿಡ್ಸಿ ಹೇಳ್ರೀ' ಎಂದಳು.

'ಮೆಕ್ಸಿಕೊದಲ್ಲಿ ಬಾಹ್ಯಾಕಾಶ ಪ್ರವಾಸೋದ್ಯಮ ಕಂಪನಿಯೋರು ಮೊನ್ನೆ ಪ್ರಯೋಗಾರ್ಥ ಬಾಹ್ಯಾಕಾಶ ಯಾತ್ರೆ ಮಾಡಿದಾರೆ. ಅದ್ರಲ್ಲಿ ಭಾರತ ಮೂಲದ ಶಿರೀಷಾ ಬಂಡ್ಲ ಕೂಡ ಇದ್ದರು. ಹಿಂದೆ ನಮ್ಮ ಕಲ್ಪನಾ ಚಾವ್ಲಾ, ಸುನೀತಾ ವಿಲಿಯಮ್ಸ್ ಈ ಯಾತ್ರೆ ಮಾಡಿದ್ರಲ್ಲಾ- ನಮ್ಮಿಬ್ಬರಿಗೆ ಎರಡು ಸೀಟ್ ಬುಕ್ ಮಾಡಿಸ್ತೀನಿ. ಆಗ ನೀನು ನಾಲ್ಕನೆಯವಳಾಗ್ತೀಯ!'

'ಹೀಗೆ ಆಕಾಶ ತೋರಿಸಿ ಮಾತಿಗೆ ತಪ್ಪಿದರೆ ಅಡುಗೆ ಬಂದ್ ಮಾಡಿ ಉಪವಾಸ ಸತ್ಯಾಗ್ರಹ ಆರಂಭಿಸ್ತೀನಿ'.

'ಮಹರಾಯ್ತಿ ಹಾಗೆಲ್ಲಾ ಮಾಡ್ಬೇಡ. ಆ್ಯನಿವರ್ಸರೀನ ಭೂಮಿ ಮೇಲೇ ಆಚರಿಸೋಣ, ರೈಲಲ್ಲಿ'.

'ಹೀಗೆಲ್ಲಾ ರೈಲು ಬಿಟ್ರೆ ನಾನು ನಂಬೋಳಲ್ಲ...'

'ಇಲ್ಕೇಳು, ನಿನ್ನ ತೌರು ಮನೆ ಮಂಗಳೂರಿನಿಂದ ಬೆಂಗಳೂರಿಗೆ ಹೋಗೋ ಸ್ಪೆಷಲ್ ಟ್ರೇನಿಗೆ ಮೊನ್ನೆಯಿಂದ ಎರಡು ವಿಸ್ಟಡೋಮ್ ಬೋಗಿಗಳನ್ನ ಜೋಡಿಸಿದಾರೆ. ಈ ಪಾರದರ್ಶಕ ಹೊದಿಕೆಯ ಬೋಗಿಗಳಲ್ಲಿ ಕುಳಿತು, ಮಳೆಗಾಲದ ಪಶ್ಚಿಮ ಘಟ್ಟದ ಸೊಬಗು ಸವಿಯುತ್ತಾ ಪ್ರಯಾಣಿಸುವುದು ಆಹಾ... ಸ್ವರ್ಗ ಸುಖ, ಗಗನಯಾನಕ್ಕಿಂತಲೂ ಮಿಗಿಲು!'

ಚಿನ್ನಮ್ಮ ಹೈಫೈ ಚಪ್ಪಾಳೆ ತಟ್ಟಿದಳು!

## ವಾಚಕರ ವಾಣಿ

### ಮಾತೃಭಾಷೆಯ ವ್ಯಾಕರಣಕ್ಕೆ ಇರಲಿ ಅವಕಾಶ

ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಪರೀಕ್ಷೆಗಳನ್ನು ಪ್ರಾದೇಶಿಕ ಭಾಷೆಗಳಲ್ಲೂ ಬರೆಯಲು ಅವಕಾಶ ನೀಡಬೇಕೆಂಬ ಬೇಡಿಕೆಯ ಪರಿಶೀಲನೆಗೆ ಕೇಂದ್ರ ಸರ್ಕಾರವು ಸಮಿತಿ ರಚಿಸಿರುವುದನ್ನು (ಪ್ರ.ವಾ., ಜುಲೈ 14) ತಿಳಿದು ಖುಷಿಯಾಯಿತು. ಆದರೆ ರಾಜ್ಯ ಸರ್ಕಾರವು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಪರೀಕ್ಷೆಯಲ್ಲಿ ಮಾತೃಭಾಷೆಯನ್ನೇ ಭಾಷಾ ವಿಷಯವಾಗಿ ಆಯ್ಕೆ ಮಾಡಿಕೊಳ್ಳಲು ಇರುವ ಸಮಸ್ಯೆ ಬಗ್ಗೆ (ಕೇವಲ ಪರೀಕ್ಷೆ ಮಾಧ್ಯಮವಾಗಿ ಅಲ್ಲ) ಕೇಂದ್ರ ಸರ್ಕಾರಕ್ಕೆ ಅರಿಕೆ ಮಾಡಿಲ್ಲ. ಈಗಿರುವ ನಿಯಮದಂತೆ, ಹಿಂದಿ ಭಾಷಿಕರು ತಮ್ಮ ಮಾತೃಭಾಷೆಯ ವ್ಯಾಕರಣ ಆಯ್ಕೆ ಮಾಡಿಕೊಂಡು ದೇಶದ ಯಾವುದೇ ರಾಜ್ಯದಲ್ಲಿ ಪರೀಕ್ಷೆ ಬರೆದು ಆಯ್ಕೆಯಾಗಬಹುದು. ಆದರೆ ಕನ್ನಡವೂ ಸೇರಿದಂತೆ ಉಳಿದ ಪ್ರಾದೇಶಿಕ ಭಾಷಿಕರು ಇಂಗ್ಲಿಷ್ ವ್ಯಾಕರಣವನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯ ಇದೆ. ಕನ್ನಡಿಗರು ಕರ್ನಾಟಕದಲ್ಲಿ ಸ್ವಂತ ಭಾಷೆ ಆಯ್ಕೆ ಮಾಡಿಕೊಳ್ಳುವಂತಿಲ್ಲ. ಆದರೆ ಹಿಂದಿ ಭಾಷಿಕರು ಹಿಂದಿ ಆಯ್ಕೆ ಮಾಡಿಕೊಳ್ಳಬಹುದು! ಇದೆಂತಹ ಸಮಾನತೆ?

ಕೇಂದ್ರ ಸರ್ಕಾರವು ಎಲ್ಲ ಪ್ರಾದೇಶಿಕ ಅಭ್ಯರ್ಥಿಗಳಿಗೆ ಅವರ ಮಾತೃಭಾಷೆಯ ವ್ಯಾಕರಣ ಆಯ್ಕೆ ಮಾಡಿಕೊಳ್ಳಲು ಅವಕಾಶವಾಗುವಂತೆ ನಿಯಮ ತಿದ್ದುಪಡಿ ಮಾಡಬೇಕು ಅಥವಾ ಎಲ್ಲಾ ಭಾಷಿಕರಿಗೆ ಇರುವಂತೆ ಹಿಂದಿ ಭಾಷಿಕರಿಗೂ ಇಂಗ್ಲಿಷ್ ಭಾಷಾ ವ್ಯಾಕರಣ ಕಡ್ಡಾಯ ಮಾಡಬೇಕು.

**ವಿಶ್ವನಾಥ ಕೆ.ಜಿ.,** ಎಂ.ಬಿ.ಅಯ್ಯನಹಳ್ಳಿ, ಕೂಡ್ಲಿಗಿ

### ಸುವರ್ಣಸೌಧ ಮರೆತಿರೇಕೆ?

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯುತ್ತಿದ್ದ ವಿಧಾನಮಂಡಲದ ಅಧಿವೇಶನವನ್ನು ಮೂರು ವರ್ಷಗಳಿಂದ ವಿವಿಧ ಕಾರಣ ನೀಡಿ ಸ್ಥಗಿತಗೊಳಿಸಲಾಗಿದೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಕಟ್ಟಡ ಈಗ ಹೆಸರಿಗಷ್ಟೇ ಎಂಬಂತಾಗಿರುವುದು ದುರದೃಷ್ಟಕರ.

ಈ ವರ್ಷವಾದರೂ ಸುವರ್ಣಸೌಧದಲ್ಲಿ ಅಧಿವೇಶನ ನಡೆಸಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಪರಿಹಾರ ಒದಗಿಸುವ ಕೆಲಸ ಮಾಡಬೇಕಾಗಿದೆ. ವಿಶೇಷವಾಗಿ, ಬೆಳಗಾವಿ ಗಡಿ ಜಿಲ್ಲೆಯಾಗಿರುವುದರಿಂದ ಮಹಾರಾಷ್ಟ್ರ ಪದೇಪದೇ ಕ್ಯಾತೆ ತೆಗೆಯುತ್ತಿದೆ. ಹೀಗಾಗಿ ಕನ್ನಡಿಗರ ಒಗ್ಗಟ್ಟಿನ ಶಕ್ತಿ ಪ್ರದರ್ಶನದ ದೃಷ್ಟಿಯಿಂದಲೂ ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದು ಸೂಕ್ತ.

**ರಾಕೇಶ ಆಲಬಾಳ,** ಅಥಣಿ

### ದಮನಕಾರಿ ಸೆಕ್ಷನ್ ರದ್ದಾಗಲಿ

ದೇಶದ್ರೋಹಕ್ಕೆ ಸಂಬಂಧಿಸಿದ ಶಿಕ್ಷೆಗೆ ಗುರಿಪಡಿಸುವ ಭಾರತೀಯ ದಂಡ ಸಂಹಿತೆಯ (ಐಪಿಸಿ) 124 (ಎ) ಸೆಕ್ಷನ್ ಅನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿರುವುದು ಸ್ವಾಗತಾರ್ಹ ನಡೆ. ಬ್ರಿಟಿಷ್ ಸರ್ಕಾರ ಜಾರಿಗೆ ತಂದಿದ್ದ ಈ ಕಾನೂನಿನ ದುರ್ಬಳಕೆ ಆಳುವ ಸರ್ಕಾರದಿಂದ ಆಗುತ್ತಲೇ ಇದೆ. ಸರ್ಕಾರವನ್ನು ಟೀಕಿಸುವ ಮತ್ತು ವೈಫಲ್ಯಗಳನ್ನು ಎತ್ತಿಹಿಡಿಯುವ ಪ್ರಯತ್ನಗಳನ್ನು ಈ ಸೆಕ್ಷನ್ ಬಳಸಿಕೊಂಡು ಹತ್ತಿಕ್ಕಲಾಗುತ್ತಿದೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗುತ್ತಿದೆ. ಹಲವು ರಾಷ್ಟ್ರಗಳು ಈಗಾಗಲೇ ಈ ಬಗೆಯ ಕಾನೂನನ್ನು ರದ್ದುಪಡಿಸಿವೆ.

ಕಳೆದ ಲೋಕಸಭಾ ಚುನಾವಣೆಯ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ಈ ಕಾನೂನನ್ನು ರದ್ದು ಮಾಡುವುದಾಗಿ ಘೋಷಿಸಿತ್ತು. ಅದನ್ನು ಇನ್ನುಳಿದ ಪಕ್ಷಗಳು ದೇಶದಲ್ಲಿ ಅರಾಜಕತೆಗೆ ಅವಕಾಶ ಮತ್ತು ಭಯೋತ್ಪಾದಕರಿಗೆ ಆಹ್ವಾನ ಕೊಟ್ಟಂತೆ ಎಂದು ಬಿಂಬಿಸಿ ಲಾಭ ಪಡೆದವು. ಆಡಳಿತಾರೂಢ ಬಿಜೆಪಿಯು ಕೆಲವು ಹಳೆಯ ಕಾನೂನುಗಳನ್ನು ರದ್ದುಪಡಿಸುವುದಾಗಿ ಹೇಳಿದ್ದರೂ ಓಬೀರಾಯನ ಕಾಲದ ಈ ಸೆಕ್ಷನ್ ರದ್ದುಗೊಳಿಸುವ ಬಗ್ಗೆ ಜಾಣಮೌನ ವಹಿಸಿದೆ. ಈಗ ಯಾವ ಪಕ್ಷವೂ ಈ ಬಗ್ಗೆ ಸೊಲ್ಲೆತ್ತುತ್ತಿಲ್ಲ. ಕಾರಣ ತಮ್ಮ ಪಕ್ಷದ ಧುರೀಣರ ಬಂಧನವಾದಾಗ ಮಾತ್ರ ಅಬ್ಬರಿಸುವ ರಾಜಕೀಯ ಪಕ್ಷಗಳು ಜನಸಾಮಾನ್ಯರ ಕಷ್ಟಕ್ಕೆ ಓಗೊಡುವುದು ಕಡಿಮೆ. ಇಂತಹ ಸಮಯದಲ್ಲಿ ನ್ಯಾಯಾಲಯವು ಪರಾಮರ್ಶಿಸಿ ಸ್ವಾಗತಾರ್ಹ ತೀರ್ಪು ನೀಡಲಿ ಎಂದು ಆಶಿಸೋಣ.

**ಗಣಪತಿ ನಾಯ್ಕ್,** ಕಾನಗೋಡ

### ಅರ್ಥಕ್ಕಿಂತ ಆದೀತು ಅಪಾರ್ಥ

ರಾಷ್ಟ್ರೀಕೃತ ಬ್ಯಾಂಕುಗಳ ನೇಮಕಾತಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಪ್ರಶ್ನೋತ್ತರ ಇರಬೇಕೆಂಬ ಬೇಡಿಕೆಗೆ ಸಂಬಂಧಿಸಿದ ಲೇಖನದಲ್ಲಿ (ಸಂಗತ, ಜುಲೈ 16) ಲೇಖಕ ಡಿ.ಎಸ್.ರಾಮಸ್ವಾಮಿ ಅವರ ಒಂದು ವಾಕ್ಯ ಹೀಗಿದೆ: 'ಕನ್ನಡಕ್ಕೆ ತರ್ಜುಮೆಯಾದ ಮೂಲ ಇಂಗ್ಲಿಷ್ ಪ್ರಶ್ನೆಯನ್ನು ಅರ್ಥ ಮಾಡಿಕೊಳ್ಳುವುದಕ್ಕಿಂತ ಅಪಾರ್ಥ ಮಾಡಿಕೊಳ್ಳುವ ಅಪಾಯವೇ ಹೆಚ್ಚು'. ಇದಕ್ಕೆ ನಾನೇ ಉದಾಹರಣೆ. ಕೆಲ ದಿನಗಳ ಹಿಂದೆ ನಾನು ವಾಟ್ಸ್‌ಆ್ಯಪ್ ನೋಡುತ್ತಿದ್ದಾಗ, ಯಾವುದನ್ನೋ ಅನುಮೋದಿಸಲು ಅದು ನನ್ನನ್ನು ಕಟ್ಟಿಹಾಕಿತು. ಮುಂದುವರಿಯಲು ಎರಡರಲ್ಲಿ ಒಂದು ಆಯ್ಕೆಯನ್ನು ಮಾಡಲೇಬೇಕಿತ್ತು. ಪ್ರಶ್ನೆ ಹಾಗೂ ಆಯ್ಕೆಗಳು ಕನ್ನಡದಲ್ಲೇ ಇದ್ದವು. ಅದರಲ್ಲಿ ಒಂದು ಆಯ್ಕೆ 'ಅಸ್ಥಾಪಿಸು' ಎಂದಿತ್ತು. ಉತ್ತರ ಭಾರತದ ಮಂತ್ರಿಮಹೋದಯರ ಭಾಷಣಗಳಲ್ಲಿ ಈ 'ಅಸ್ಥಾಪನ' ಪದ ಕೇಳಿದ್ದೆ. ಸ್ಥಾಪನೆಯನ್ನು ಇವರು ಅಸ್ಥಾಪನೆ ಎನ್ನುತ್ತಾರೆಂದು ಅರ್ಥ ಮಾಡಿಕೊಂಡಿದ್ದೆ. ಸ್ನಾನಕ್ಕೆ ಅಸ್ನಾನ ಅನ್ನುತ್ತಾರೆ. ತಾವು ಆಡುವ ಪದಕ್ಕೆ ಅ ಹಾಗೂ ಇ ಇತ್ಯಾದಿಗಳನ್ನು ಬಳಸುತ್ತಾರೆ ಎಂಬುದನ್ನು ತಿಳಿದುಕೊಳ್ಳುವಷ್ಟು ಜಾಣತನ ಬೆಳೆಸಿಕೊಂಡಿದ್ದೆ. ಅದರ ಜೊತೆಗೆ ಗೂಗಲ್ ಟ್ರಾನ್ಸ್‌ಲೇಶನ್‌ನ ಅವಾಂತರಗಳನ್ನು ನೆನಪಿಸಿಕೊಂಡು, ಅಸ್ಥಾಪನಗೆ ಸ್ಥಾಪಿಸು ಎಂದು ಅರ್ಥ ಮಾಡಿಕೊಂಡು ಅದಕ್ಕೆ ಅನುಮೋದನೆ ನೀಡಿದೆ. ಕ್ಷಣಮಾತ್ರದಲ್ಲಿ ವಾಟ್ಸ್‌ಆ್ಯಪ್ ಮಾಯವಾಗಿ ಹೋಯಿತು! ಮೊಬೈಲ್‌ನಲ್ಲಿ ಎಲ್ಲಿ ಹುಡುಕಿದರೂ ಅದರ ಸುಳಿವೇ ಇಲ್ಲ. ಅರ್ಥವಾಗುವ ಹಾಗೆ ಹೇಳಬೇಕೆಂದರೆ, ವಾಟ್ಸ್‌ಆ್ಯಪ್ ಡಿಲೀಟ್ ಆಗಿಹೋಯಿತು!

ನಾನು ಕನ್ನಡಿಗ. ನನಗೆ ಕನ್ನಡದ ಬಗೆಗೆ ಹೆಮ್ಮೆಯಿದೆ. ಆದರೆ ಕನ್ನಡಿಗರು ಬದುಕಬೇಕೆಂದರೆ ಇಂಗ್ಲಿಷ್ ಕಲಿಯಲೇಬೇಕು ಎಂದು ನಾನು ಯಾವತ್ತಿನಿಂದಲೂ ವಾದಿಸುತ್ತಲೇ ಬಂದಿದ್ದೇನೆ. ಆಗ ಕನ್ನಡವೂ ಉಳಿಯುತ್ತದೆ ಕನ್ನಡಿಗರೂ ಉಳಿಯುತ್ತಾರೆ. ಕನ್ನಡಿಗರು ಉಳಿಯದೇ ಕನ್ನಡ ಉಳಿಯಲಾರದು.

**ಡಾ. ಈಶ್ವರ ಶಾಸ್ತ್ರಿ ಮೋಟಿನಸರ,** ಶಿರಸಿ

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.  To know more about The Printers (Mysore) Private Ltd, visit www.printersmysore.com.

ಜನಪ್ರಿಯ ಸಿನಿಮಾ ನಟರು ಮೃತಪಟ್ಟ ಬಳಿಕ ಅವರ ಹೆಸರಿನಲ್ಲಿ ಸರ್ಕಾರವೇ ಸ್ಮಾರಕ ನಿರ್ಮಿಸಬೇಕೇ?

# ಸಮಾಧಿ ನಿರ್ಮಾಣ ವಿಚಾರದಲ್ಲಿ 'ಸ್ಮಶಾನಸದೃಶ' ಅಭಿಮಾನವೇಕೆ?

• ಎನ್.ಎಸ್. ಶಂಕರ್

**ಜನರ** ಅಭಿಮಾನ ಅನೇಕ ಬಾರಿ ಅತಿರೇಕಕ್ಕೆ ಎಡೆ ಮಾಡುವುದುಂಟು. ಅಂಥದ್ದೇ ಒಂದು ಅತಿರೇಕದ ವಿದ್ಯಮಾನವೆಂದರೆ ಸಾರ್ವಜನಿಕ ಸ್ಥಳಗಳನ್ನು ಸ್ಮಶಾನಗಳಾಗಿ ಪರಿವರ್ತಿಸುವುದು!

ರಾಷ್ಟ್ರನಾಯಕರೋ, ಸಮಾಜದ ಹಿತಕ್ಕಾಗಿ ಮಹತ್ತರ ಕೊಡುಗೆ ನೀಡಿದವರೋ ಮರಣ ಹೊಂದಿದಾಗ ಅವರ ನೆನಪಿನಲ್ಲಿ ಸಮಾಧಿ ನಿರ್ಮಿಸುವುದು, ಆ ಸ್ಥಳಗಳನ್ನು ಸ್ಮಾರಕಗಳಾಗಿ, ಪ್ರವಾಸಿಗರ ತಾಣಗಳಾಗಿ ಅಭಿವೃದ್ಧಿಪಡಿಸುವುದು ಸಹಜ. ಅದರಲ್ಲೂ ನಮ್ಮ ದೇಶವಂತೂ ವ್ಯಕ್ತಿಪೂಜೆಯಲ್ಲಿ ಎತ್ತಿದ ಕೈ! ಹಾಗೆ ಮಾಡುವ ಮೂಲಕ ಆ ದೊಡ್ಡ ವ್ಯಕ್ತಿಗಳ ಸಾಧನೆಗೆ, ಆ ಮೂಲಕ ಅವರು ಗಳಿಸಿದ ಜನಪ್ರೀತಿಗೆ ಮೂರ್ತರೂಪ ಕೊಟ್ಟು ನೆನಪನ್ನು ಶಾಶ್ವತಗೊಳಿಸುವ ಆಶಯ ಇರುತ್ತದೆ. ಅಷ್ಟಕ್ಕೂ ಆ ನೆನಪನ್ನು ಜೀವಂತವಾಗಿಡುವುದರ ಉದ್ದೇಶವಾದರೂ ಏನು? ಆ ಮಹನೀಯರ ಬಾಳು ಮುಂದಿನ ಪೀಳಿಗೆಗೆ ಸ್ಫೂರ್ತಿದಾಯಕವಾಗಲಿ, ಅವರ ಹಾದಿ ಇನ್ನಷ್ಟು ಜನರನ್ನು ಪ್ರೇರೇಪಿಸಲಿ ಎಂಬುದಷ್ಟೇ.

ಆದರೆ ನಮ್ಮದು ಮೂಲತಃ ವಿಪರ್ಯಾಸಮಯ ಸಮಾಜ!

ಯಾವುದೇ ವ್ಯಕ್ತಿಯ ನೆನಪನ್ನು ನಾವು ಫೋಟೊ, ಪುತ್ಥಳಿ, ಸ್ಮಾರಕಗಳಲ್ಲಿ ಬಂಧಿಸಿಟ್ಟ ಕೂಡಲೇ ಅವರನ್ನು ಜೀವಂತವಾಗಿರಿಸುವ ಜವಾಬ್ದಾರಿಯಿಂದ ಸಲೀಸಾಗಿ ತಪ್ಪಿಸಿಕೊಳ್ಳುತ್ತೇವೆ! ಅಂದರೆ ಅವರ ಸಂದೇಶ, ಸಾಧನೆಗಳಿಂದ ಯಾವುದೇ ಅಳುಕಿಲ್ಲದೆ ದೂರವಾಗುತ್ತ ಹೋಗುತ್ತೇವೆ. ಈಗ ದೇಶದ ಮೂಲೆ ಮೂಲೆಗಳಲ್ಲಿ ಮಹಾತ್ಮ ಗಾಂಧಿ ರಸ್ತೆಗಳಿವೆ, ಮೂರ್ತಿಗಳಿವೆ, ಅವರ ಹೆಸರಿನ ಅಸಂಖ್ಯ ಸ್ಮಾರಕಗಳಿವೆ. ಈ ಎಲ್ಲ ಸ್ಮಾರಕಗಳು, ಗಾಂಧಿ ತತ್ವಗಳನ್ನು ಹೂತುಹಾಕಿದ ನಮ್ಮ ಪಾಪಪ್ರಜ್ಞೆಗೆ ಮುಸುಕೆಳೆಯುವುದರ ಹೊರತು ಬೇರೇನು ಸಾಧಿಸಿವೆ?

ನಿಜವಾಗಿಯೂ ದೇಶ ಕಟ್ಟಿದ ನಾಯಕರ ಕಥೆ ಹೀಗಾದರೆ ಜನಪ್ರಿಯ ವ್ಯಕ್ತಿಗಳ ಪಾಡು ಇನ್ನೂ ಅಧ್ವಾನ!

ಈ ಜನಪ್ರಿಯರು- ಉದಾಹರಣೆಗೆ ಸಿನಿಮಾ ನಟರು- ಇವರಿಗಿರುವುದು ಅಭಿಮಾನಿಗಳೇ ಹೊರತು ಹಿಂಬಾಲಕರಲ್ಲ. ಅಂದರೆ ಅವರ ನಾಯಕ ಅವರ ಭಾವಕೋಶದಲ್ಲಿ ಸ್ಥಾನ ಪಡೆದ ಒಂದು ಮೂರ್ತಿಯೇ ಹೊರತು ಆತನೇನೂ ಅಭಿಮಾನಿಯ ಪಾಲಿಗೆ ಅನುಕರಣೀಯ ವ್ಯಕ್ತಿ ಆಗಿರಬೇಕೆಂದಿಲ್ಲ. ಹಾಗಾಗಿ ಅಭಿಮಾನಿಯಿಂದ ಉದ್ವಿಗ್ನ ಭಾವಾವೇಶ ನಿರೀಕ್ಷಿಸಬಹುದೇ ಹೊರತು ಸುಸಂಬದ್ಧ ನಡವಳಿಕೆಯನ್ನಲ್ಲ. ಇಂಥ ಭಾವಾವೇಶಕ್ಕೆ ಸಣ್ಣ ಪ್ರಚೋದನೆ ಸಿಕ್ಕರೂ ಸಾಕು, ಅದು ಎಲ್ಲರ ಹತೋಟಿ ತಪ್ಪಿ ಹೋಗಲು ಸಾಧ್ಯ.

ಈ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರಿಡಬೇಕು; ಈ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರಿಡಬೇಕು- ಇಂಥ ಆಗ್ರಹಗಳು ಹುಟ್ಟುವುದು ಕೂಡ ಇಂಥ ಅಭಿಮಾನದಿಂದಲೇ. ಅಷ್ಟಾದರೂ ಅದು 'ಸ್ಮಶಾನಸದೃಶ' ಅಭಿಮಾನದಷ್ಟು ಅಪಾಯಕಾರಿಯಲ್ಲ. ಅದು ಹೇಗೇ ಆಗಲಿ, ನಮ್ಮನ್ನು ಆಳುವವರೂ ಅಷ್ಟೇ ಅವಿವೇಕಿಗಳಾಗಿದ್ದಾರೆ! ಅದೇ ನಮ್ಮ ದುರದೃಷ್ಟ.

ಒಬ್ಬ ಜನಪ್ರಿಯ ನಟನ ಸಾವಾಯಿತು. ಸರ್ಕಾರ ಹಿಂದು ಮುಂದು ನೋಡದೆ ಸರ್ಕಾರಿ ಗೌರವದೊಂದಿಗೆ ಅವರ ಅಂತ್ಯ ಸಂಸ್ಕಾರ ನೆರವೇರಿಸಲು ಸರ್ಕಾರಿ ಜಾಗವನ್ನೇ ಆರಿಸಿಕೊಳ್ಳುತ್ತದೆ, ಅದೂ ನಿರ್ದಿಷ್ಟ ಉದ್ದೇಶಕ್ಕೆ ಬಳಕೆಯಾಗುತ್ತಿರುವ ಸಂಸ್ಥೆಯೊಂದರ ಆವರಣ! ಆ ಮೂಲಕ ಕೆಟ್ಟ ಮೇಲ್ಪಂಕ್ತಿಯೊಂದನ್ನು ಹಾಕಿಕೊಡುತ್ತದೆ. ಯಾಕೆಂದರೆ ಒಬ್ಬರಿಗೆ ಈ ಅವಕಾಶ ಕೊಟ್ಟಮೇಲೆ ಇನ್ನೊಬ್ಬರಿಗೆ ನಿರಾಕರಿಸುವುದು ಹೇಗೆ?

ನಾಳೆ ಇನ್ನೊಬ್ಬ ಜನಪ್ರಿಯ ನಟ ತೀರಿಕೊಂಡ ಕೂಡಲೇ ಮೊದಲನೆಯ ಉದಾಹರಣೆ ಕಣ್ಣಮುಂದೆಯೇ ಇದೆಯಲ್ಲ? ಅವರ ಅಭಿಮಾನಿಗಳಿಂದ ಒತ್ತಡ ಆರಂಭವಾಗುತ್ತದೆ. ಅವರಿಗೆ ಅಲ್ಲಿ ಜಾಗ ಕೊಟ್ಟಿರಿ, ಇವರಿಗೇಕಿಲ್ಲ?

ಸಿನಿಮಾ ನಟರ ಅಭಿಮಾನಿಗಳೆಂದರೆ ಆಡಳಿತಾರೂಢರಿಗೆ ಯಾವಾಗಲೂ ಭಯ. ಅವರನ್ನು ಎದುರು ಹಾಕಿಕೊಳ್ಳುವುದು ಹೇಗೆ? ಎಲ್ಲಿ ಅದು ದೊಂಬಿ ಗಲಭೆಗೆ ಕಾರಣವಾಗುವುದೋ, ಯಾವ ಜಾತಿ, ಪಂಗಡಗಳ ಬೆಂಬಲ ಕಳೆದುಕೊಳ್ಳಬೇಕಾಗುವುದೋ ಎಂಬ ಆತಂಕ... ರಾಜಕೀಯವೆಂದರೇನೇ ಲೆಕ್ಕಾಚಾರ. ಹಾಗಾಗಿ ಒಬ್ಬರ ಸಂಸ್ಕಾರಕ್ಕೆ ಜಾಗ ಕೊಟ್ಟ ಮೇಲೆ ಎರಡನೆಯವರಿಗೂ ಕೊಡಬೇಕು. ಎರಡನೆಯವರಾದ ಮೇಲೆ ಮೂರನೆಯವರು, ನಾಲ್ಕನೆಯವರು... ಮುಂದಕ್ಕೆ ಸಲೀಸು. ಸಾರ್ವಜನಿಕ ಸಂಸ್ಥೆಯೊಂದು ಸ್ಮಶಾನವಾಗಿ ಪರಿವರ್ತನೆಯಾಗಿಬಿಡುತ್ತದೆ. ಕಂಠೀರವ ಸ್ಟುಡಿಯೊ ಆವರಣವಾಗಿರಲಿ, ಕಲಾಗ್ರಾಮವಾಗಿರಲಿ... ಕಾಲ ಕಳೆದಂತೆ ಅದರ ಹೆಸರನ್ನು 'ಪ್ರತಿಷ್ಠಿತರ ರುದ್ರಭೂಮಿ' ಎಂದು ಬದಲಾಯಿಸಬೇಕಾಗುತ್ತದೆ!

ಜನಪ್ರಿಯ ಚಿತ್ರನಟರ ವಿಷಯದಲ್ಲಿ ಆವೇಶ, ರೋಷಗಳು ಸಾಮಾನ್ಯವಾದರೂ ಆ ವಿಷಯದಲ್ಲಿ ಸಾಹಿತಿಗಳು ಕೂಡ ಕಡಿಮೆಯಿಲ್ಲ!



ಯಾವುದೇ ವ್ಯಕ್ತಿಯ ನೆನಪನ್ನು ನಾವು ಫೋಟೊ, ಪುತ್ಥಳಿ, ಸ್ಮಾರಕಗಳಲ್ಲಿ ಬಂಧಿಸಿಟ್ಟ ಕೂಡಲೇ ಅವರನ್ನು ಜೀವಂತವಾಗಿರಿಸುವ ಜವಾಬ್ದಾರಿಯಿಂದ ಸಲೀಸಾಗಿ ತಪ್ಪಿಸಿಕೊಳ್ಳುತ್ತೇವೆ! ಅಂದರೆ ಅವರ ಸಂದೇಶ, ಸಾಧನೆಗಳಿಂದ ಯಾವುದೇ ಅಳುಕಿಲ್ಲದೆ ದೂರವಾಗುತ್ತ ಹೋಗುತ್ತೇವೆ. ಈಗ ದೇಶದ ಮೂಲೆ ಮೂಲೆಗಳಲ್ಲಿ ಮಹಾತ್ಮ ಗಾಂಧಿ ರಸ್ತೆಗಳಿವೆ, ಮೂರ್ತಿಗಳಿವೆ, ಅವರ ಹೆಸರಿನ ಅಸಂಖ್ಯ ಸ್ಮಾರಕಗಳಿವೆ. ಈ ಎಲ್ಲ ಸ್ಮಾರಕಗಳು, ಗಾಂಧಿ ತತ್ವಗಳನ್ನು ಹೂತುಹಾಕಿದ ನಮ್ಮ ಪಾಪಪ್ರಜ್ಞೆಗೆ ಮುಸುಕೆಳೆಯುವುದರ ಹೊರತು ಬೇರೇನು ಸಾಧಿಸಿವೆ?

ಮೊನ್ನೆ ಮೊನ್ನೆ ಯು.ಆರ್. ಅನಂತಮೂರ್ತಿ ಮುಂತಾದವರ ಅಂತಿಮಯಾತ್ರೆಯ ತಾಣವಾಗಿರುವ ಕಲಾಗ್ರಾಮದಲ್ಲಿ ಅವರ ಸಮಾಧಿಗಳನ್ನು ಸರಿಯಾಗಿ ನಿರ್ವಹಿಸಿಲ್ಲ ಎಂದು ಕೆಲವು ಸಾಹಿತ್ಯ ಪ್ರೇಮಿಗಳು ಕರಸೇವೆ ಮಾಡಿ ಆ ಜಾಗವನ್ನು ಅಚ್ಚುಕಟ್ಟು ಮಾಡಿದ ಸುದ್ದಿ ನೋಡಿದ್ದೇವೆ. ಒಮ್ಮೆ ಒಂದು ಮೇಲ್ಪಂಕ್ತಿ ಹಾಕಿಕೊಟ್ಟ ಮೇಲೆ ಮುಂದಕ್ಕೆ ನಿರ್ವಾಹವಿಲ್ಲ. ಒಬ್ಬರಾದ ಮೇಲೊಬ್ಬರು, ಅವರಾದ ಮೇಲೆ ಮತ್ತೊಬ್ಬರು... ಅಲ್ಲಿಯೂ ಪಟ್ಟಿ ಮುಂದುವರಿಯುತ್ತದೆ.

ಅಲ್ಲಿಗೆ ಆಯಾ ಸಾರ್ವಜನಿಕ ತಾಣಗಳ ಮೂಲ ಉದ್ದೇಶವೇ ಮಣ್ಣುಪಾಲಾಗುತ್ತದೆ. ಮತ್ತು ಅದೇ ತರ್ಕ ವಿಸ್ತರಿಸುತ್ತ ಹೋದರೆ ನಾಳೆ ಕಬ್ಬನ್ ಪಾರ್ಕ್, ಲಾಲ್‌ಬಾಗ್‌ಗಳೇಕೆ ಸ್ಮಶಾನವಾಗಿ ಬದಲಾಗಬಾರದು ಎಂಬ ಪ್ರಶ್ನೆಯೂ ಏಳುತ್ತದೆ!

ಯಾವುದೇ ಸಾರ್ವಜನಿಕ ವ್ಯಕ್ತಿ ತಂತಮ್ಮ ಖಾಸಗಿ ಜಾಗಗಳಲ್ಲಿ ಸಮಾಧಿಯನ್ನೋ, ಸ್ಮಾರಕವನ್ನೋ ನಿರ್ಮಿಸಿಕೊಳ್ಳಲು ಇರುವ ಅಡ್ಡಿ ಏನು? ಗಿರೀಶ ಕಾರ್ನಾಡರು ತೀರಿಕೊಂಡಾಗ ಅವರ ಅಂತ್ಯಸಂಸ್ಕಾರವನ್ನು ತೀರಾ ಖಾಸಗಿ ವ್ಯವಹಾರವಾಗಿ ನಡೆಸಬೇಕೆಂದು ಅವರೇ ಆಶಿಸಿ ಅವರ ಕುಟುಂಬವರ್ಗವೂ ಹಾಗೇ ನಡೆದುಕೊಳ್ಳಲಿಲ್ಲವೇ? ಅದು ನಡೆಯಬೇಕಾದ್ದೂ ಹಾಗೇ ಅಲ್ಲವೇ? ಅದಕ್ಕೆ ಸಾರ್ವಜನಿಕ ಆಚರಣೆಯ ವಿಜೃಂಭಣೆಯೇಕೆ? ಈ ಪ್ರದರ್ಶನದ ಮೂಲಕ ಸಾವಿನ ಘನತೆಯನ್ನೇ ಕುಂದಿಸಿದಂತೆ ಆಗಲಾರದೇ? ಹಾಗೂ ಒಂದು ವೇಳೆ ವಿಜೃಂಭಣೆಯ ಸ್ಮಾರಕವೇ ಬೇಕೆಂದಾದರೂ ಅದಕ್ಕೆ ಸರ್ಕಾರಿ ಜಾಗವೇಕೆ? ಅದರಲ್ಲೂ ಬೇರೊಂದು ಉದ್ದೇಶಕ್ಕೆ ಬಳಕೆಯಾಗುತ್ತಿರುವ ಸಂಸ್ಥೆಯ ಅತಿಕ್ರಮಣವೇಕೆ?

ಈ ವಿಷಯದಲ್ಲಿ ಮೊದಲ ತಪ್ಪು ಸರ್ಕಾರದ್ದು. ಅದನ್ನು ತಿದ್ದಿಕೊಳ್ಳುವ ಹೊಣೆಯೂ ಸರ್ಕಾರದ್ದೇ. ಇನ್ನು ಮುಂದಾದರೂ ಯಾವುದೇ ಪ್ರತಿಷ್ಠಿತ ವ್ಯಕ್ತಿಯ ಸಮಾಧಿಯೋ, ಸ್ಮಾರಕವೋ ಅವರವರ ಖಾಸಗಿ ಜಾಗದಲ್ಲಿ ನೆರವೇರಲಿ. ಇಲ್ಲ, ಸರ್ಕಾರಿ ಸ್ಥಳದಲ್ಲೇ ನಡೆಯಬೇಕಾದ ಅನಿವಾರ್ಯತೆಯಿದ್ದರೆ ಅದಕ್ಕಾಗಿ ಪ್ರತ್ಯೇಕ ತಾಣ ಮೀಸಲಿರಿಸಲಿ. ಸಾರ್ವಜನಿಕ ಸ್ಥಳಗಳೇಕೆ ಸ್ಮಶಾನವಾಗಬೇಕು? ನಮ್ಮ ನಾಯಕರುಗಳು ಅಷ್ಟಾದರೂ ಲಜ್ಜೆಯನ್ನು ಪ್ರದರ್ಶಿಸಬಾರದೇ?

ಲೇಖಕ: ಸಿನಿಮಾ ನಿರ್ದೇಶಕ

ಪ್ರಜಾವಾಣಿ ಚರ್ಚೆ

# ಕಲಾವಿದರ ನೆನಪು ಹಸಿರಾಗಿಸುವ ಕೆಲಸ ಸರ್ಕಾರ ಮಾಡಿದರೆ ಅರ್ಥಪೂರ್ಣ

• ದೊಡ್ಡಣ್ಣ



ಸಾಮಾಜಿಕ ಸುಧಾರಣೆಗೆ ಕಾರಣರಾದ ಬಸವಣ್ಣ, ಸಂವಿಧಾನ ರಚನೆಯ ರೂವಾರಿ ಬಿ.ಆರ್. ಅಂಬೇಡ್ಕರ್ ಇವರನ್ನೆಲ್ಲಾ ಮರೆಯುವುದಂಟೇ? ಸ್ಮಾರಕ–ಪ್ರತಿಮೆಗಳ ಮೂಲಕ ಅವರಿಗೊಂದು ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ ಅಲ್ಲವೇ? ಅದನ್ನು ನಾವೀಗ ಮಾಡುತ್ತಿದ್ದೇವಲ್ಲ. ಚಿತ್ರನಟ–ನಟಿಯರ ಸ್ಮಾರಕಗಳಿಗೆ ಮಾತ್ರ ಏಕೆ ವಿರೋಧ?

**ಕನ್ನಡ** ಸಾಂಸ್ಕೃತಿಕ ಲೋಕದ ಮಹತ್ವದ ಕವಲುಗಳಲ್ಲಿ ಕಲೆಯೂ ಒಂದು. ಅದರಲ್ಲಿ ಸಿನಿಮಾ ಕಲೆಗಂತೂ ಮಹತ್ವದ ಸ್ಥಾನ. ಅದರ ವಾರಸುದಾರರಾದ ಚಿತ್ರರಂಗದ ಮೇರು ಕಲಾವಿದರು ಅಗಲಿದಾಗ ಅವರ ಪ್ರತಿಮೆ/ಸ್ಮಾರಕಗಳನ್ನು ಸರ್ಕಾರದ ವತಿಯಿಂದಲೇ ನಿರ್ಮಿಸುವುದರಲ್ಲಿ ಯಾವ ತಪ್ಪೂ ಇಲ್ಲ. ಕಲಾವಿದರ ನೆನಪು ಹಸಿರಾಗಿಸುವ ಇಂತಹ ಕೆಲಸವನ್ನು ಸರ್ಕಾರವೇ ಮಾಡುವುದರಿಂದ ಅದು ಅರ್ಥಪೂರ್ಣವಾಗಿರುತ್ತದೆ. ಮಾಡಬೇಕು ಕೂಡ.

ನಟ ಅಜಾತಶತ್ರು. ನೋಡಿ... ನಾವು ದೇವರನ್ನು ನೋಡಿಲ್ಲ. ಅವನ ವೇಷ ಹಾಕಿದ ಪಾತ್ರಧಾರಿಯ ಮೂಲಕ ಗುರುತಿಸುತ್ತೇವೆ. ಹೀಗಾಗಿ ಅವನು ಪಾತ್ರದಲ್ಲಿ ತೋರಿಸಿದ ಆದರ್ಶಗಳನ್ನು ಅದೆಷ್ಟೋ ಜನರು ಪಾಲಿಸಿ, ಬದಲಾದದ್ದೂ ಇದೆ. ಹಾಗಾಗಿ ಒಂದು ಆದರ್ಶವಾಗಿ ಪರಿಗಣಿಸುವುದಾದರೆ ಮೂರ್ತಿಯೂ ಸ್ಫೂರ್ತಿ ನೀಡಬಹುದಲ್ಲವೇ? ಅದೆಷ್ಟೋ ನಟರು ತಮ್ಮ ವ್ಯಕ್ತಿತ್ವದ ಮೂಲಕ ದೊಡ್ಡವರಾಗಿದ್ದಾರೆ. ಅಂಥ ನಟರ ಬದುಕು ಒಂದು ಇತಿಹಾಸ. ಆ ಇತಿಹಾಸದ ಸ್ಮರಣೆ ಬೇಕಲ್ಲವೇ? ಹಾಗಾಗಿ ಸರ್ಕಾರವೇ ಸ್ಮಾರಕ ನಿರ್ಮಿಸಬೇಕು ಎಂಬುದು ಸಹಜವಾದ ಬೇಡಿಕೆ.

ಸಾಮಾಜಿಕ ಸುಧಾರಣೆಗೆ ಕಾರಣರಾದ ಬಸವಣ್ಣ, ಸಂವಿಧಾನ ರಚನೆಯ ರೂವಾರಿ ಬಿ.ಆರ್.ಅಂಬೇಡ್ಕರ್ ಇವರನ್ನೆಲ್ಲಾ ಮರೆಯುವುದಂಟೇ? ಸ್ಮಾರಕ–ಪ್ರತಿಮೆಗಳ ಮೂಲಕ ಅವರಿಗೊಂದು ಗೌರವ ಸಲ್ಲಿಸುವುದು ನಮ್ಮ ಕರ್ತವ್ಯ ಅಲ್ಲವೇ? ಅದನ್ನು ನಾವೀಗ ಮಾಡುತ್ತಿದ್ದೇವಲ್ಲ. ಚಿತ್ರನಟ–ನಟಿಯರ ಸ್ಮಾರಕಗಳಿಗೆ ಮಾತ್ರ ಏಕೆ ವಿರೋಧ?

ಮಹಾತ್ಮರ ಪುತ್ಥಳಿ, ಪ್ರತಿಮೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೇ ಕಾಲಕಾಲಕ್ಕೆ ಸ್ಥಾಪಿಸುತ್ತಾ ಬಂದಿವೆ. ಅಷ್ಟೊಂದು ದೊಡ್ಡ ಮಟ್ಟಕ್ಕಲ್ಲವಾದರೂ ಕಲಾವಿದರ ಪ್ರತಿಮೆಯನ್ನೂ ನಿರ್ಮಿಸಬೇಕು. ಸರ್ಕಾರವೇ ಈ ಕೆಲಸ ಮಾಡಿದರೆ ನಿವೇಶನ ಸಿಗುವುದು, ನಿರ್ಮಾಣ ವೆಚ್ಚ ನಿಭಾಯಿಸುವುದು ದೊಡ್ಡ ಹೊರೆ ಆಗದು.

ಅಭಿಮಾನಿಗಳೇ ನಿರ್ಮಿಸಬೇಕು. ಸರ್ಕಾರದ ಪಾತ್ರ ಇಲ್ಲಿ ಇರಬಾರದು ಎಂಬ ವಾದವೂ ಇರಬಹುದು. ಈಗ ರಾಜ್ಯದಲ್ಲೇ ನೋಡಿ, ಪ್ರಮುಖರ ಪ್ರತಿಮೆಗಳನ್ನು ಅಭಿಮಾನಿಗಳೇ ನಿರ್ಮಿಸಿದ ಉದಾಹರಣೆಗಳೇನೋ ಇವೆ. ಅವರವರ ಶಕ್ತಿ, ಆರ್ಥಿಕ ಮಟ್ಟಕ್ಕೆ ತಕ್ಕಂತೆ ನಿರ್ಮಿಸುತ್ತಾರೆ. ಆದರೆ, ಸರ್ಕಾರ ಮಾಡಿದರೆ ಇಂಥ ನಿರ್ಮಾಣಗಳಲ್ಲಿ ತನ್ನದೇ ಆದ ಮಾನದಂಡ, ಗುಣಮಟ್ಟ ಕಾಪಾಡಲು ಸಾಧ್ಯ.

ಪ್ರತಿಮೆ ಯಾಕೆ ಬೇಕು? ಏನು ಸಾಧಿಸಿದ್ದಾರೆ ಎಂಬ ವಿತಂಡ ವಾದ ಮಂಡಿಸುವವರೂ ಇದ್ದಾರೆ. ಹೌದು ದೂರದಲ್ಲಿ ಕುಳಿತು ಹೇಳುವುದೇನೋ ಸುಲಭ. ಆದರೆ, ನಟನೊಬ್ಬ ಪ್ರತಿಮೆಯಾಗಿ ನೆಲೆಗೊಂಡು ಜನರ ಮನಸ್ಸಿನಲ್ಲೂ ಚಿರಸ್ಥಾಯಿ ಆಗಬೇಕಾದರೆ ಅವನು ಮಾಡಿರುವ ಸಾಧನೆ, ಜೀವಮಾನದ ಕೃತಿಗಳತ್ತಲೂ ಒಮ್ಮೆ ನೋಡಬೇಕು. ಅದು ಜನರಿಗೆ ಕಾಣುವಂತಿರಬೇಕು. ಸುಮ್ಮಸುಮ್ಮನೆ ಎಲ್ಲರ ಪ್ರತಿಮೆಯನ್ನೂ ಮಾಡಲಾಗುತ್ತದೆಯೇ? ರಾಜಕಾರಣಿಗಳ ಪ್ರತಿಮೆ ಸ್ಥಾಪಿಸುತ್ತೀರಿ, ಬೇರೆ ಕ್ಷೇತ್ರಗಳ ಸಾಧಕರ (ಸಹಕಾರ, ಬ್ಯಾಂಕಿಂಗ್, ಧಾರ್ಮಿಕ, ಶಿಕ್ಷಣ, ಆರೋಗ್ಯ...ಇತ್ಯಾದಿ ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು, ಕವಿ, ಸಾಹಿತಿಗಳು ಹೀಗೆ) ಪ್ರತಿಮೆಗಳನ್ನು ಸರ್ಕಾರವೇ ಸ್ಥಾಪಿಸಿದ್ದು ಇಲ್ಲವೇ? ನಟ ಅಂದರೆ ತೀರಾ ಕನಿಷ್ಠನೇ? ಬರೀ ರಸ್ತೆ, ಕಟ್ಟಡ, ಬಸ್ ನಿಲ್ದಾಣಕ್ಕೆ ಅವರ ಹೆಸರಿಟ್ಟು ಕೈತೊಳೆದುಕೊಂಡರೆ ಆಯಿತು ಎಂದುಕೊಂಡರೆ ಅದು ತಪ್ಪು.

ಮುಮ್ಮಡಿ ಕೃಷ್ಣದೇವರಾಯ ಒಡೆಯರ್ ಅವರು ವಿದ್ಯುತ್ ಇಲ್ಲದ ಕಾಲದಲ್ಲೂ ಪಟ್ಟಣಕ್ಕೆ ಎಣ್ಣೆ, ಬತ್ತಿಯ ಬೀದಿ ದೀಪ ಅಳವಡಿಸಿದವರು. ಯಾವ ರಾಜ ಮನೆತನ ಹಾಗೆ ಮಾಡಿದೆ ಹೇಳಿ? ಇಂದಿನ ಪೀಳಿಗೆಯವರೂ ಅವರು ಮಾಡಿದ ಸತ್ಕಾರ್ಯಗಳ ಫಲಾನುಭವಿಗಳು. ಅಂಥವರ ಪ್ರತಿಮೆ ನಿರ್ಮಿಸಿ ನಾವು ಸಂಭ್ರಮಿಸುವುದಿಲ್ಲವೇ? ಕೆಂಗಲ್ ಹನುಮಂತಯ್ಯ ಅವರ ಸಾಧನೆಯಿಂದಾಗಿ ದೇಶವೇ ಬೆಂಗಳೂರಿನತ್ತ ಮುಖ ಮಾಡುವಂತೆ ಆಗಿದೆ. ಇಂಥವರ ಪ್ರತಿಮೆ ಸ್ಥಾಪಿಸುವುದು ಎಂದರೆ ಅವರಿಗೆ ಸಲ್ಲಿಸುವ ಸ್ಮರಣೆಯ ಗೌರವ ಅಷ್ಟೆ.

ದೀರ್ಘ ಕಾಲ ನೆನಪಾಗಿ ಉಳಿಯುವ ಕೆಲಸ ಮಾಡಲು ಹೋದಾಗ ಕೆಲವೊಮ್ಮೆ ಆಕ್ಷೇಪಗಳು, ನಕಾರಾತ್ಮಕ ಪ್ರತಿಕ್ರಿಯೆಗಳು ಬರುತ್ತವೆ. ಅದೆಲ್ಲಾ ಸಹಜ. ವಿರೋಧ ಅನ್ನುವುದು ಯಾವ ಕೆಲಸಕ್ಕೆ ಇರೋದಿಲ್ಲ ಹೇಳಿ. ವಿರೋಧದ ಗುಂಪು ಇದ್ದೇ ಇರುತ್ತದೆ. ಲೋಕೋ ಭಿನ್ನ ರುಚಿಃ... ಅಲ್ಲವೇ? ಹಾಗೆಂದು ಸರ್ಕಾರ ಏಕಮುಖ ವಾದ ಆಲಿಸಿದರೆ ಸಾಲದು. ಪಕ್ಕದ ತಮಿಳುನಾಡು ಹಾಗೂ ಆಂಧ್ರ ಪ್ರದೇಶದಲ್ಲಿ ಅಲ್ಲಿನ ಮೇರು ಕಲಾವಿದರಿಗೆ ಸ್ಮಾರಕ, ಪ್ರತಿಮೆ ಸ್ಥಾಪನೆ ಮಾಡಿದ ಉದಾಹರಣೆ ಇದೆಯಲ್ಲ? ನಮ್ಮಲ್ಲಿ ಏಕೆ ಬೇಡ ಎನ್ನುವುದನ್ನು ವಿರೋಧಿಸುವವರು ಹೇಳಬೇಕು.

ಪ್ರತಿಮೆಗೆ ಸರ್ಕಾರದ ಬೊಕ್ಕಸದ ಹಣ ವೆಚ್ಚವಾಗುತ್ತದೆ ಎಂಬುದು ಇನ್ನೊಂದು ಆಕ್ಷೇಪ. ಅದನ್ನೂ ಒಪ್ಪಿಕೊಳ್ಳೋಣ. ಇದುವರೆಗೆ ಸರ್ಕಾರವೇ ಸ್ಥಾಪಿಸಿದ ಪ್ರಮುಖ ಪ್ರತಿಮೆಗಳನ್ನು ಗಮನಿಸಿ. ಬೆಂಗಳೂರಿನಲ್ಲೇ ನಟರು, ಹಲವು ಮಹನೀಯರ ಪ್ರತಿಮೆ ಸ್ಥಾಪಿಸಿದ ಪ್ರದೇಶ ಗಮನಿಸಿ. ಅಲ್ಲಿ ಉದ್ಯಾನ ಆಗಿದೆ. ಸುಂದರ, ಸುಸ್ಥಿರ ಹಸಿರು ಪರಿಸರ ನಿರ್ಮಾಣ ಆಗಿದೆ. ಇನ್ನು ಅನೇಕ ಕಡೆಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾದದ್ದಿದೆ. ಸ್ಥಳೀಯ ಉದ್ಯಮಗಳು ಬೆಳೆದಿವೆ. ಸ್ಮಾರಕ ಬಂದಮೇಲೆ ಅದರ ಹೆಸರಿನಲ್ಲಿ ಅಲ್ಲಿ ಒಂದಿಷ್ಟು ಸಾಂಸ್ಕೃತಿಕ ಚಟುವಟಿಕೆ ನಡೆಯುತ್ತವೆ. ಕಲಾವಿದರಿಗೆ ವರ್ಷಕ್ಕೊಂದಷ್ಟು ಕೆಲಸವೂ ಸಿಗುತ್ತದೆ. ಇದೂ ಹಣ ವಾಪಸಾಗುವ ದಾರಿಯೇ ಅಲ್ಲವೇ? ಎಲ್ಲವನ್ನೂ ನೇರ ಹಣದಿಂದ ಮಾಪನ ಮಾಡಲು ಸಾಧ್ಯವೇ? ಸ್ಮಾರಕಕ್ಕೆ ಜಾಗ ಹಾಗೂ ಹಣ ಹೋಗುತ್ತದೆ ಎನ್ನುವ ಆಕ್ಷೇಪ ಎತ್ತುವವರು ಮೊದಲು ಪ್ರಭಾವಿಗಳು ಮಾಡಿದ ಒತ್ತುವರಿ ತೆರವಿಗೆ ಹೋರಾಟ ಮಾಡುವುದು ಒಳಿತು. ಹಾಗೆಯೇ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತೆಯೂ ಹೋರಾಡಬೇಕು.

ಇಷ್ಟಕ್ಕೂ ಪ್ರತಿಮೆಗಾಗಿ ಸರ್ಕಾರ ಮಾಡುವ ವೆಚ್ಚವೇನು ಸಾವಿರಾರು ಕೋಟಿಯೇ? ಇದ್ದುದರಲ್ಲಿ ಕನಿಷ್ಠ ವೆಚ್ಚ, ಒಂದು ಪುಟ್ಟ ನಿವೇಶನ ಕೊಟ್ಟರೆ ಸಾಕು. ಅದೂ ನಾವೇನು ಎಲ್ಲರ ಪ್ರತಿಮೆ ಸ್ಥಾಪಿಸಿ ಎಂದು ಒತ್ತಾಯಿಸುತ್ತಿಲ್ಲವಲ್ಲ. ಮೇರು ಕಲಾವಿದರನ್ನು ಮರೆಯಬೇಡಿ ಎನ್ನುವುದಷ್ಟೇ ನಮ್ಮ ಒತ್ತಾಯ. ಈ ಮೊತ್ತವನ್ನೇ ಸರ್ಕಾರ ಹೊರೆ ಎಂದು ಭಾವಿಸುವುದಾದರೆ ಅಂಥ 'ಹೊರೆ'ಗಳನ್ನು ಇನ್ನೂ ಸಾಕಷ್ಟು ಉದಾಹರಿಸಬಹುದು. ಅದೆಲ್ಲದಕ್ಕೂ ಕಡಿವಾಣ ಹಾಕಿ ಉಳಿತಾಯ ಮಾಡಿ. ಮೊದಲು ನಮ್ಮನ್ನಾಳುವ ನಾಯಕರು ಸರ್ಕಾರದ ವೆಚ್ಚದಲ್ಲಿ ಮಾಡುವ ವೈಭವದಲ್ಲಿ ಒಬ್ಬರ ಪಾಲು ತೆಗೆದಿಟ್ಟರೂ ಅದ್ಭುತವಾದ ಸ್ಮಾರಕ ಅಥವಾ ಪ್ರತಿಮೆ ಸ್ಥಾಪಿಸಬಹುದು. ಮನಸ್ಸು ಮಾಡಬೇಕು ಅಷ್ಟೆ.



ಲೇಖಕ: ಕನ್ನಡ ಸಿನಿಮಾ ನಟ

**ನಿರೂಪಣೆ: ಶರತ್ ಹೆಗ್ಡೆ**

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಭಾರತೀಯ ಪ್ರಾದೇಶಿಕ ಸೇನೆಯು ತನ್ನಲ್ಲಿ ತೆರವಾಗಿರುವ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡುತ್ತಿದೆ. ಇದಕ್ಕಾಗಿ ಅಧಿಸೂಚನೆ ಹೊರಡಿಸಿದ್ದು, ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸುವವರಿಗೆ ಇರಬೇಕಾದ ಅರ್ಹತೆಯನ್ನು ಅಧಿಸೂಚನೆಯಲ್ಲಿ ಕೊಡಲಾಗಿದೆ. ಆಸಕ್ತರು ಅರ್ಜಿಗಳನ್ನು ಸಲ್ಲಿಸಿ' ಎಂಬ ವಿವರ ಇರುವ ಸಂದೇಶವು ವೈರಲ್ ಆಗಿದೆ. ಇದನ್ನು ಪೋಸ್ಟರ್‌ನಂತೆಯೂ ಹಂಚಿಕೊಳ್ಳಲಾಗುತ್ತಿದೆ. ಈ ಸಂದೇಶ ಮತ್ತು ಪೋಸ್ಟರ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್ ಒಂದನ್ನೂ ನೀಡಲಾಗಿದೆ.

'ಇದು ಸುಳ್ಳು ಸುದ್ದಿ. ಭಾರತೀಯ ಸೇನೆ ಮತ್ತು ಅರೆಸೇನಾಪಡೆಗಳು ಈ ರೀತಿಯ ಯಾವುದೇ ಅಧಿಸೂಚನೆ ಹೊರಡಿಸಿಲ್ಲ. ತೆರವಾಗಿರುವ ಹುದ್ದೆಗಳಿಗೆ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಯುತ್ತಿಲ್ಲ. ಈ ಸಂದೇಶದಲ್ಲಿ ನೀಡಲಾಗಿರುವ ಮಾಹಿತಿ ಸಂಪೂರ್ಣ ಸುಳ್ಳು. ಸಂದೇಶದಲ್ಲಿ ನೀಡಲಾಗಿರುವ ಲಿಂಕ್ ಅಧಿಕೃತ ಜಾಲತಾಣದ್ದಲ್ಲ. ಈ ಸಂದೇಶದ ಮೋಸದ ಬಲೆಗೆ ಬೀಳಬೇಡಿ' ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ಸಚ್ಚಿದಾನಂದ ಸತ್ಯಸಂದೇಶ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

### ಸ್ವಸ್ಥ ಮನಸ್ಸಿಗೆ ಬೇಕು ಸಾತ್ವಿಕ ಚಿಂತನೆ

ಬ್ರಹ್ಮಾಂಡಕ್ಕೆ ಜೀವಗಳೇ ಚೈತನ್ಯ. ಈ ಜೀವಗಳಿಗೆ ಆತ್ಮವೇ ಚೈತನ್ಯ. ಜೀವದೊಳಗಿರುವ ಆತ್ಮಕ್ಕೆ ಮನಸ್ಸೇ ಚೈತನ್ಯ. ಈ ಮನಸ್ಸಿಗೆ ಸಾತ್ವಿಕ ಚಿಂತನೆಗಳೆ ಚೈತನ್ಯ. ಈ ಸಾತ್ವಿಕ ಚಿಂತನೆಗಳಿಗೆ ಸತ್ಸಂಗಗಳೇ ಚೈತನ್ಯ. ಸತ್ಸಂಗಗಳಿಂದ ಹುಟ್ಟುವ ಸದ್ಗುಣಗಳೇ ವಿಶ್ವ ಕಾಯುವ ಶಕ್ತಿಗಣಗಳು. ಸದ್ಗುಣಗಳು ಜೀವ ಚೇತನಗಳಲ್ಲಿ ಇರುವವರೆಗೂ ಜಗತ್ತಿಗೆ ಯಾವುದೇ ಅಪಾಯವಿಲ್ಲ. ಯಾವಾಗ ದುರ್ಗುಣಗಳು ಹೆಚ್ಚಾಗುತ್ತವೋ ಲೋಕಕ್ಕೆ ಕಂಟಕ ತಪ್ಪಿದ್ದಲ್ಲ. ಅದು ಒಂದು ಸಮಾಜವಿರಲಿ, ಊರಿರಲಿ, ನಾಡಿರಲಿ, ದೇಶವಿರಲಿ, ಅಲ್ಲಿನ ಮಾನವ ದೇಹದೊಳಗೆ ಸದ್ವಿಚಾರಗಳು ಸರಾಗವಾಗಿ ಹರಿದಾಡುತ್ತಿರಬೇಕು. ಸದ್ಗುಣಗಳು ನರನಾಡಿಗಳಲ್ಲಿ ಮತ್ತು ರಕ್ತದ ಕಣಕಣದಲ್ಲೂ ಮೂಡಿರಬೇಕು. ಹೀಗಾದಾಗ ನಮ್ಮ ಮನಸ್ಸಿನ ಕೇಂದ್ರಸ್ಥಾನವಾದ ಮೆದುಳು ಕೆಡದೆ ದೀರ್ಘ ಕಾಲ ಬಾಳಿಕೆ ಬರುತ್ತೆ. ಕೆಟ್ಟ ತೈಲದಿಂದ ಯಂತ್ರಗಳು ಕೆಟ್ಟಂತೆ, ಕೆಟ್ಟ ವಿಚಾರಗಳಿಂದ ನಮ್ಮ ಮನಸ್ಸು ಕೆಟ್ಟು ಕೆಡುಕುಗಳ ಸರಕು ಉತ್ಪತ್ತಿಯಾಗತೊಡಗುತ್ತದೆ.

ಇದಕ್ಕಾಗೇ ಸುಜನರು ಧರ್ಮ-ಸಂಸ್ಕೃತಿಗಳನ್ನು ಸಮಾಜದಲ್ಲಿ ಅಳವಡಿಸಿ ನಿಯಮಗಳನ್ನು ಜಾರಿಗೆ ತಂದರು. ಮನುಷ್ಯರನ್ನೇ ಭಕ್ಷಿಸುತ್ತಿದ್ದ ಮನುಷ್ಯರ ರಾಕ್ಷಸೀತನ ಅಳಿಸಿ, ಸದ್ಭಾವನೆ ಬೆಳೆಸಿದ್ದೆ ಧರ್ಮ-ಸಂಸ್ಕೃತಿಗಳು. ಈಗ ಮನುಷ್ಯರ ಜೀವ ತಿನ್ನುವ ಪ್ರವೃತ್ತಿ ಮಾನವರಲ್ಲಿ ಕಾಣೆಯಾಗಿರಬಹುದು. ಆದರೆ ಮಾನವರ ಜೀವನ ಕಬಳಿಸುವ ವಂಚಕಬುದ್ಧಿಯ ಜನ ಹೆಚ್ಚಾಗುತ್ತಿದ್ದಾರೆ. ಇಂಥ ಅನಾಗರಿಕ ಜನರನ್ನು ಸರಿದಾರಿಗೆ ತರಲು ಪ್ರತಿಯೊಬ್ಬರ ಮನದಲ್ಲಿ ಸದ್ವಿಚಾರಗಳ ಔಷಧವನ್ನು ಸಿಂಪಡಿಸಬೇಕಿದೆ. ಇಲ್ಲದಿದ್ದರೆ ಹಣಬಾಕತನದಿಂದ ಮದ-ಮಾತ್ಸರ್ಯ ಬೆಳೆಸಿಕೊಂಡು ರೋಗಪೀಡಿತವಾದ ಮನಸ್ಸುಗಳು ನಾಗರಿಕ ಸಮಾಜವನ್ನು ಹಾಳುಗೆಡವುತ್ತದೆ.

ಸಮುದ್ರಮಂಥನದಿಂದ ಉಕ್ಕುವ ಅಮೃತ ಜೀವವನ್ನು ಅಮರವಾಗಿಸಿದರೆ, ಮನಸ್ಸಿನ ಮಂಥನದಿಂದ ಹುಟ್ಟುವ ಚಿಂತನೆಗಳು ಜೀವನವನ್ನು ಅಮರವಾಗಿಸುತ್ತದೆ. ಇದಕ್ಕಾಗಿ ಸಮುದ್ರ ಕಡೆವಾಗ ಉಕ್ಕಿ ಬಂದ ವಿಷವನ್ನ ಕುಡಿದು ಜೀವ ಕಾಪಾಡಿದ ಶಿವನನ್ನು, ಮನಮಂಥನದಲ್ಲಿ ಹುಟ್ಟುವ ವಿಷವಿಷಯಗಳನ್ನು ನುಂಗಿ, ಜೀವನ ಕಾಪಾಡಲು ಪ್ರತಿಷ್ಠಾಪಿಸಿಕೊಳ್ಳಬೇಕು. ಆ ಹೃದಯೇಶ್ವರ ಆಗಾಗ್ಗೆ ನಮ್ಮೊಳಗೆ ಉಕ್ಕುಕ್ಕಿ ಬರುವ ಮದ-ಮೋಹದ ವಿಷ-ವಿಕಾರಗಳನ್ನು ನುಂಗಿ ಮನಸ್ಸಿನ ಆರೋಗ್ಯ ಕಾಪಾಡುತ್ತಾನೆ. ಇಂಥ ಶಿವಶಕ್ತಿ ನಮ್ಮೊಳಗೆ ಪ್ರತಿಷ್ಠಾಪಿಸಿಕೊಳ್ಳಲು ಮನಸ್ಸಿನಲ್ಲಿರುವ ಕಸವನ್ನೆಲ್ಲ ಗುಡಿಸಿ ಸ್ವಚ್ಛವಾಗಿಸಬೇಕು. ಅಂದರೆ ಮನಸ್ಸಿನೊಳಗಿರುವ ಎಲ್ಲಾ ಕಲ್ಮಶ ವಿಷ-ವಿಷಯಗಳನ್ನು ಹೊರಗೆ ಹಾಕಿ ನಿರ್ಮಲವಾಗಿಸಬೇಕು. ಇಂಥ ಸ್ವಚ್ಛವಾದ ಮನಸ್ಸಿನಲ್ಲಿ ಮಾತ್ರ ಶಿವ ನೆಲೆಸುತ್ತಾನೆ. ಬಗ್ಗಡ ದ್ವೇಷಕಾರಕ ಮನಸ್ಸಿನೊಳಗೆ ಶಿವನಿರುವುದಿಲ್ಲ.

ಮೈ ತೊಳೆಯುವಷ್ಟು ಸುಲಭವಲ್ಲ ಮನಸ್ಸಿನ ಕೊಳೆ ತೊಳೆಯುವುದು. ಅದೊಂದು ತಪಸ್ಸಿನ ಮಾರ್ಗ. ಸಾತ್ವಿಕ ನೆಲೆಯಲ್ಲಿ ಕುಳಿತು, ನೈತಿಕ ಹಂದರದಲ್ಲಿ ಮನಸ್ಸು ಶುಚಿಯಾಗಿರುವಂತೆ ಮಾಡಬೇಕು. ಈ ಕೌಶಲ್ಯ ತಿಳಿಯದೆ ಢಂಬಾಚಾರಕ್ಕೆ ಯತ್ನಿಸಿದರೆ ಆಷಾಢಭೂತಿತನವಾಗುತ್ತದೆ.

ಜಗತ್ತಿನ ಬಹುತೇಕ ಕೆಡುಕಿಗೆ ಇಂಥ ಢಾಂಬಿಕ ಜನರ ಆಷಾಢಭೂತಿತನವೇ ಕಾರಣ. ಹೀಗಾಗಿ ಜಗತ್ತಿನ ಬಹುತೇಕ ಮಾನವರ ಮನಸ್ಸು ವಿಷಯ-ವಿಕಾರಗಳಿಂದ ಪ್ರಕ್ಷುಬ್ದವಾಗಿರುತ್ತದೆ. ಧರ್ಮಗಳು ಇರುವುದೇ ಮಾನವರ ಮನಸ್ಸುಗಳನ್ನು ಪ್ರಫುಲ್ಲಗೊಳಿಸಲು, ಪ್ರಕ್ಷುಬ್ಧಗೊಳಿಸಲಲ್ಲ. ಧರ್ಮದ ನಿಜಾರ್ಥ ತಿಳಿಯದ ಢಾಂಬಿಕ ಜನರಿಂದ ಧರ್ಮ-ಧರ್ಮಗಳ ನಡುವೆ ತಾರತಮ್ಯದ ಕಂದಕ ನಿರ್ಮಾಣವಾಗುತ್ತಿದೆ. ಧರ್ಮ-ಧರ್ಮಗಳ ನಡುವೆ ಮಾನವರ ಒಳಿತಿಗೆ ಬೇಕಾದ ಸದ್ವಿಚಾರಗಳ ವಿನಿಮಯ ಆಗುತ್ತಿರಬೇಕು. ಬ್ರಹ್ಮಾಂಡ-ಜೀವ-ಆತ್ಮ-ಮನಸ್ಸು-ಸದ್ಗುಣ ಎಂಬ ಈ ಐದಕ್ಕೂ ಒಂದಕ್ಕೊಂದು ಸಂಪರ್ಕ ಕೊಂಡಿಗಳಿವೆ. ಇವು ಬಲವಾಗಿ ಸರಪಣಿಯಂತೆ ಕೂಡಿಕೊಂಡು ಲೋಕವನ್ನು ಕಾಪಾಡುತ್ತಿವೆ. ಬರೀಗಣ್ಣಿಗೆ ಕಾಣದ ಈ ಸಂಬಂಧದ ಕೊಂಡಿಗಳನ್ನು ಕಾಣಲು ದಿವ್ಯಜ್ಞಾನ ಬೇಕು. ಅಂಥ ದಿವ್ಯಜ್ಞಾನ ಸಿದ್ದಿಸುವುದು ಆರೋಗ್ಯಕರ ಮನಸ್ಸಿನ ಸಾಕಾರದಿಂದ. ಅಂಥ ಸದ್ಗುಣಗಳ ಮನಸ್ಸೇ 'ಸಚ್ಚಿದಾನಂದ'ರೂಪ.

## ದಿನ ಭವಿಷ್ಯ

ಶನಿವಾರ ಜುಲೈ 17, 2021

**ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪುನರ್ವಸು ಅಷ್ಟಮೀ ಗಂ. 44-36 (ರಾ. 11-59) ಶನಿವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 44-13 (ರಾ 11-50) ಶಿವ ನಾಮ ಯೋಗ ಗಂ. 1-29 ಉಪರಿ ಸಿದ್ಧನಾಮ ಯೋಗ ಗಂ. 52-58 ಭದ್ರೆ ಕರಣ ಗಂ. 17-10 ವಿಷ ಗಂ. 6-10 ಪುನರ್ವಿಷ ಗಂ. 57-24 ಅಮೃತ ಗಂ. 28-48 ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 ಸೂರ್ಯೋದಯ:** 6-05 ಸೂರ್ಯಾಸ್ತ: 6-46 ಅದೃಷ್ಟ ಸಂಖ್ಯೆ 3 9

**ಮೇಷ:** ನಿಮಗೆ ಅಚ್ಚರಿ ಮೂಡಿಸುವ ರೀತಿಯಲ್ಲಿ ಹಣಕಾಸಿನ ಅನುಕೂಲತೆಗಳು ಒದಗಿಬರಲಿವೆ. ಪರಿಸ್ಥಿತಿಯ ಅರಿವು ನಿಮಗೆ ಆಗಲಿದ್ದು ಉತ್ತಮ ಕಾರ್ಯನಿರ್ವಹಣೆ ಆಗುವುದರಲ್ಲಿ ಸಂಶಯ ಬೇಡ.

**ವೃಷಭ:** ಒದಗಿ ಬಂದ ಅವಕಾಶಗಳಲ್ಲಿ ಪ್ರಮುಖವಾದುದನ್ನು ಮಾತ್ರ ಆಯ್ದುಕೊಳ್ಳಿ. ಪರಿಸ್ಥಿತಿಗೆ ನೀವು ಚೆನ್ನಾಗಿ ಹೊಂದಿಕೊಳ್ಳುವುದರಿಂದಾಗಿ ಸಂಕಷ್ಟಗಳು ಎದುರಾಗಲಾರವು. ಸಾಲದ ವಿಚಾರದಲ್ಲಿ ಎಚ್ಚರಿಕೆ ಅಗತ್ಯ.

**ಮಿಥುನ:** ಮನೆಯ ವ್ಯವಹಾರದಲ್ಲಿ ಹೆಚ್ಚಿನ ಸ್ವಾತಂತ್ರ್ಯ ದೊರೆತಿದೆ. ಉತ್ಸಾಹದಿಂದ ಮುನ್ನುಗ್ಗಿ ಕೆಲಸ ಕಾರ್ಯಗಳು ಸುಗಮವಾಗಲಿವೆ. ಸ್ನೇಹಿತ ವರ್ಗದವರಿಂದ ವ್ಯವಹಾರದಲ್ಲಿ ಸಕಾಲದಲ್ಲಿ ಎಲ್ಲ ಸಹಾಯ ದೊರಕಲಿವೆ.

**ಕರ್ಕಾಟಕ:** ರಚನಾತ್ಮಕ ಕಾರ್ಯ ನಿರ್ವಹಣೆಯಿಂದ ಸಮಾಜದಲ್ಲಿ ಹೆಚ್ಚಿನ ಗೌರವಾದರಗಳನ್ನು ಹೊಂದುವಿರಿ. ಈ ದಿನ ಸರಕು ಸಾರಿಗೆ ವ್ಯವಹಾರದಲ್ಲಿ ತೊಡಗಿದವರಿಗೆ ಹೆಚ್ಚಿನ ಲಾಭ ದೊರಕಲಿದೆ.

**ಸಿಂಹ:** ಹೆಚ್ಚಿನ ಜವಾಬ್ದಾರಿಗಳು ನಿಮಗೆ ಒದಗಿಬಂದರೂ ಯಾವುದನ್ನೂ ಅತಿಯೆಂದು ಭಾವಿಸದೇ ಸಮಾಧಾನಚಿತ್ತದಿಂದ ನಿರ್ವಹಿಸಿದಲ್ಲಿ ನಿಮ್ಮ ಯಶಸ್ಸಿಗೆ ಸೋಪಾನವಾಗಲಿದೆ.

**ಕನ್ಯಾ:** ಹೆರವರಿಗೆ ನಿಮ್ಮಮೇಲಿರುವ ಸಂಶಯಗಳು ದೂರವಾಗಿ ನಿರಾಳತೆ ಮೂಡಲಿದೆ. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಪ್ರಾಪ್ತವಾಗುವ ಸಾಧ್ಯತೆ.

**ತುಲಾ:** ಒಪ್ಪಂದದ ಮಾತುಕತೆಗಳು ಫಲಪ್ರದವಾಗಲಿವೆ. ಧಾರ್ಮಿಕ ಕೆಲಸಗಳಿಗಾಗಿ ವೆಚ್ಚ ಭರಿಸಬೇಕಾದೀತು. ಕುಟುಂಬದವರೊಂದಿಗೆ ಕುಲದೇವತಾ ದರ್ಶನ ಭಾಗ್ಯ ಕಂಡುಬರುವುದು. ದೂರದ ಪ್ರಯಾಣ ಮಾಡಬೇಕಾದ ಅನಿವಾರ್ಯತೆ ತಲೆದೋರೀತು.

**ವೃಶ್ಚಿಕ:** ಕೆಲಸ ಕಾರ್ಯಗಳಲ್ಲಿ ಮುನ್ನಡೆಯನ್ನು ಸಾಧಿಸಲಿದ್ದೀರಿ. ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಲಾಭ ದೊರಕಲಿದೆ. ದೂರ ಪ್ರಯಾಣಗಳಿಂದಾಗಿ ಅನುಕೂಲ ಉಂಟಾಗುವ ಲಕ್ಷಣ ಕಂಡುಬರುತ್ತಿದೆ.

**ಧನು:** ಗೃಹ ನಿರ್ಮಾಣ ಕೆಲಸಗಳು ಸುಸೂತ್ರವಾಗಿ ಪೂರ್ಣಗೊಳ್ಳಲಿವೆ. ಮನೆಯಲ್ಲಿ ನೆಮ್ಮದಿಯ ವಾತಾವರಣ. ವ್ಯವಹಾರ ನಿಮಿತ್ತ ಗೆಳೆಯರೊಂದಿಗೆ ಪ್ರವಾಸ ಹೊರಡುವ ಬಗ್ಗೆ ಯೋಚಿಸಲಿದ್ದೀರಿ. ಯಶಸ್ವೀ ಕಾರ್ಯ ನಿರ್ವಹಣೆ.

**ಮಕರ:** ಮಕ್ಕಳು ಪರೀಕ್ಷೆಗಳಲ್ಲಿ ಹೆಚ್ಚಿನ ಪ್ರಗತಿಯನ್ನು ತೋರಿ ಸಂತೋಷ ಮೂಡಿಸಲಿದ್ದಾರೆ. ಕೌಟುಂಬಿಕ ವಿಷಯಗಳನ್ನು ಆಪ್ತರಲ್ಲಿ ಹಂಚಿಕೊಳ್ಳುವುದರಿಂದ ಮಾನಸಿಕ ನೆಮ್ಮದಿ. ವೈದ್ಯ ವೃತ್ತಿಯಲ್ಲಿರುವವರಿಗೆ ಉತ್ತಮ ಆದಾಯ.

**ಕುಂಭ:** ಅದ್ಭುತವಾದ ಕಾರ್ಯಗಳನ್ನು ಮಾಡುವ ಮೂಲಕ ಸೈ ಎನ್ನಿಸಿಕೊಳ್ಳುವಿರಿ. ಇದು ನಿಮಗೆ ಸಹಜವಾಗಿ ಕಂಡಬಂದರೂ ಇತರರಿಗೆ ವಿಶೇಷವೆನಿಸಲಿದೆ. ಬದುಕಿಗೆ ಒಂದು ಹೊಸ ಆಯಾಮ ದೊರೆಯಲಿದೆ.

**ಮೀನ:** ಮನೆ ಮಂದಿಯೊಂದಿಗಿನ ಬಾಂಧವ್ಯ ವೃದ್ಧಿಯಾಗುವುದು. ಆರ್ಥಿಕವಾಗಿ ಬಲಿಷ್ಠಗೊಳ್ಳುವ ಅವಕಾಶ ಒದಗಿಬರುವುದು. ಮನೆಯಲ್ಲಿ ದೇವತಾ ಕಾರ್ಯಗಳನ್ನು ನೆರವೇರಿಸಲಿದ್ದೀರಿ.

**ನಿಮ್ಮ ಜನ್ಮದಿನ 17-ಜುಲೈ** ಇಂದು ಅತ್ಯಂತ ಶುಭದಾಯಕವಾಗಿದ್ದು, ಆರ್ಥಿಕ ಪರಿಸ್ಥಿತಿಯು ಚೆನ್ನಾಗಿ ಸುಧಾರಿಸಲಿದೆ. ಸ್ವ ಉದ್ಯೋಗದಲ್ಲಿ ತೊಡಗಿರುವವರಿಗೆ ನಿರೀಕ್ಷೆಗೆ ಮೀರಿದ ಅವಕಾಶಗಳು ದೊರೆತು ಹೆಚ್ಚಿನ ಆದಾಯವನ್ನು ತಂದುಕೊಡಲಿದೆ. ಮಹಿಳೆಯರಿಗೆ ಉದ್ಯೋಗದಲ್ಲಿ ಉತ್ತಮ ಅವಕಾಶಗಳು ದೊರಕುವವು.


## ಪದಬಂಧ 4660 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

4.ಈತ ಬಟ್ಟೆ ಹೊಲೆಯುವವನು (2)
5.ಕಟ ಕಟ ಶಬ್ದಮಾಡುವ ಬಾಗಿಲು! (3)
6.ಉಪ್ಪಿನ ಗುಣವುಳ್ಳದ್ದು (2)
7.ಪಾರಿವಾಳವನ್ನು ಕೊಂದು ತಿನ್ನುವ ಡೇಗೆ (3)
9.ಕೂಪದಲ್ಲಿರುವ ಕಪ್ಪೆ (3)
10.ಅಂತರಂಗ ಸ್ಪರ್ಶಿಯಾದದ್ದು (5)
11.ನಿಧಾನವಾಗಿ ಮಾಡಿಕೊಂಡಿರುವ ಒಪ್ಪಂದ (3)
12.ಕುದುರೆಯನ್ನೇರುವ ಬಳೆ (3)
15.ಹುರುಳ್ಳಿಲ್ಲದುದು ಇದು (2)
16.ನಲಿಯುತ್ತಿರುವ ಕೇಕಿ (3)
17.ಚಕ್ರವಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆಯಲ್ಲಾ? (2)

**ಮೇಲಿಂದ ಕೆಳಕ್ಕೆ**

1.ಗೋರಂಟಿಯನ್ನು ಹೀಗೂ ಹೇಳುವರು (4)
2.ಶಾಸನ ಶಿಲ್ಪಗಳನ್ನು ಕೊರೆಯುವವನು (3)
3.ಈತ ಲೆಕ್ಕ ಬರೆಯುವವನು (4)
8.ಮನವನ್ನು ಸೆಳೆದಿರುವ ಲಕ್ಷ್ಯ (3)
9.ಕರಿಯ ಹತ್ತಿರವಿರುವ ಬುಟ್ಟಿ (3)
11.ಈತ ಜತೆಗೂಡಿಸುವವನು (4)
13.ಪ್ರಗತಿಶೀಲ ಸ್ವಭಾವದವನು (4)
14.ಈತ ಹಳ್ಳಿಯವ (3)



**4659ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:** 1.ಓಲಗ 3.ಕಾಕಾ 5.ಪರ 6.ಅಪರಂಜಿ 7.ವಿಶ್ವವಿದ್ಯಾಲಯ 10.ಪಕ್ಷಪಾತ 11.ತಳ 13.ಡಿಕ್ರಿ 14.ನಕ್ಷತ್ರ

**ಮೇಲಿಂದ ಕೆಳಕ್ಕೆ:** 1.ಓಡು 2.ಗಟಾರ 4.ಕಾರಂಜಿ 5.ಪದವಿ 6.ಅವನಿ 8.ವಿಜೇತ 9.ಯಮಳ 10.ಪಗಡಿ 11.ತಲ್ಲೀನ 12.ಮಿತ್ರ

## ಸುಡೊಕು 5046


| | | | | | | | | |
|---|---|---|---|---|---|---|---|---|
| 6 | | 4 | | | | 7 | | 8 |
| | 9 | 5 | | 7 | 1 | | | |
| 1 | | | | 4 | 8 | | | 6 |
| | | 1 | | | | 9 | | |
| | | | 3 | 9 | 7 | | 5 | 4 |
| 7 | | 9 | | | | 8 | | |
| 5 | | | | 6 | | 4 | | |
| 4 | | | | | 3 | | 2 | |
| | 6 | | | | 4 | | 7 | 5 |

**ಆಡುವುದು ಹೇಗೆ?** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

**5045 ಸುಡೊಕು**

| | | | | | | | | |
|---|---|---|---|---|---|---|---|---|
| 9 | 3 | 7 | 6 | 1 | 8 | 2 | 5 | 4 |
| 2 | 6 | 1 | 4 | 5 | 9 | 8 | 3 | 7 |
| 5 | 4 | 8 | 7 | 2 | 3 | 9 | 6 | 1 |
| 4 | 8 | 6 | 5 | 3 | 2 | 7 | 1 | 9 |
| 7 | 2 | 3 | 9 | 6 | 1 | 5 | 4 | 8 |
| 1 | 5 | 9 | 8 | 4 | 7 | 3 | 2 | 6 |
| 8 | 1 | 5 | 3 | 7 | 6 | 4 | 9 | 2 |
| 3 | 9 | 2 | 1 | 8 | 4 | 6 | 7 | 5 |
| 6 | 7 | 4 | 2 | 9 | 5 | 1 | 8 | 3 |

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 15,924 |
| ಇಂದಿನ ಅಂತ್ಯ | 15,923 |
| ▼ | 0.8 |
| ದಿನದ ಗರಿಷ್ಠ | 15,962 |

## ವಿನಿಮಯ ದರ

| | |
|---|---|
| $ ಡಾಲರ್ | 74.57 |
| £ ಪೌಂಡ್ | 103.08 |
| € ಯುರೊ | 88.12 |
| ¥ ಯೆನ್ (100ಕ್ಕೆ) | 67.73 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹515 |
| 12 ಮೊಟ್ಟೆಗೆ | ₹70 |
| ಮೈಸೂರು | |
| 100 ಮೊಟ್ಟೆಗೆ | ₹515 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1430 (1420) |
| ಸೋಯಾ (ರಿಫೈನ್ಡ್) | ₹1375(1355) |
| ಸೂರ್ಯಕಾಂತಿ (ರಿಫೈನ್ಡ್) | ₹1400 (1390) |
| ಪಾಮೋಲಿನ್ | ₹1195 (1190) |

## ಕೊಬ್ಬರಿ ಧಾರಣೆ

| | |
|---|---|
| ಬೆಂಗಳೂರು | ₹15000-15805 |
| ತುರುವೇಕೆರೆ | ₹15900-16000 |

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**
**ಸಕಲೇಶಪುರ**

| | |
|---|---|
| ಕೂಳೆ | 700-800 |
| ನಡುಗೋಲು | 850-900 |
| ರಾಶಿ | 950-1000 |
| ರಾಶಿ ಉತ್ತಮ | 1000-1050 |
| ಜರಡಿ | 1150-1200 |
| ಹೆರಕಿದ್ದು | 2500-2600 |
| ಹಸಿರು ಸಾಧಾರಣ | 900-1000 |
| ಹಸಿರು ಉತ್ತಮ | 1100-1200 |
| ಹಸಿರು ಅತಿ ಉತ್ತಮ | 1400-1500 |
| ಕಾಳು ಮೆಣಸು | 385-390 |

**ಅಡಿಕೆ**
**ಬಂಟ್ವಾಳ**

| | |
|---|---|
| ಕೋಕ | 10000-22500 |
| ಹೊಸತು | 23500-43000 |
| ಹಳತು | 42500-52000 |

**ಹೊಸನಗರ**

| | |
|---|---|
| ಬಿಳಿಗೋಟು | 27619-27899 |
| ಚಾಲಿ | 29129-36399 |
| ಕೆಂಪುಗೋಟು | 31499-34519 |
| ರಾಶಿ | 39519-42469 |

**ಕುಮಟಾ**

| | |
|---|---|
| ಚಿಪ್ಪು | 30136-33099 |
| ಕೋಕ | 20189-30109 |
| ಫ್ಯಾಕ್ಟರಿ | 14709-18329 |

| | |
|---|---|
| ಹಳೆಚಾಲಿ | 41569-43629 |
| ಹೊಸಚಾಲಿ | 37209-38889 |

**ಕುಂದಾಪುರ**

| | |
|---|---|
| ಹೊಸಚಾಲಿ | 36000-46000 |

**ಪುತ್ತೂರು**

| | |
|---|---|
| ಹೊಸತು | 30000-43000 |

**ಶಿವಮೊಗ್ಗ ಎಪಿಎಂಸಿ**

| | |
|---|---|
| ಗೊರಬಲು | 17000-34299 |
| ರಾಶಿ | 37849-42499 |

**ಸಿದ್ದಾಪುರ**

| | |
|---|---|
| ಬಿಳಿಗೋಟು | 26099-33299 |
| ಚಾಲಿ | 35299-38009 |
| ಕೋಕ | 20099-30899 |
| ಕೆಂಪುಗೋಟು | 20099-29299 |
| ರಾಶಿ | 38099-40509 |
| ತಟ್ಟಿಬೆಟ್ಟೆ | 31899-34711 |

**ಶಿರಸಿ**

| | |
|---|---|
| ಬಿಳಿಗೋಟು | 27212-33889 |
| ಚಾಲಿ | 34699-38803 |
| ಕೋಕ | 20319-31499 |
| ಕೆಂಪುಗೋಟು | 26122-32699 |
| ರಾಶಿ | 39009-43998 |
| ತಟ್ಟಿಬೆಟ್ಟೆ | 33699-38899 |

**ಯಲ್ಲಾಪುರ**

| | |
|---|---|
| ಬಿಳಿಗೋಟು | 24612-30705 |
| ಕೋಕ | 20899-29299 |
| ಚಾಲಿ | 31091-40269 |
| ಕೆಂಪುಗೋಟು | 26189-32799 |
| ರಾಶಿ | 39989-46000 |
| ತಟ್ಟಿಬೆಟ್ಟೆ | 30999-39869 |

**ರಾಮನಗರ ರೇಷ್ಮೆ**

| | |
|---|---|
| ಮಿಶ್ರತಳಿ (ಸಿ.ಬಿ) | 259-402 |
| ದ್ವಿತಳಿ (ಬಿ.ವಿ) | 279-497 |

## ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 11,850 | 11400 | 10950 | 157.05ಸೆಂಟ್ಸ್ |
| ಎಸಿ | 4700 | 4400 | 4350 | |
| ಆರ್‌ಪಿ | 5750 | 5700 | 5800 | ಲಂಡನ್ |
| ಆರ್‌ಸಿ | 3300 | 3300 | 3400 | 1756ಡಾಲರ್ಸ್ |

## ಮುಂಬೈ ಧಾರಣೆ

**ಶೇಂಗಾ**

16-7-2021

| | |
|---|---|
| ಜಾವಾ 70/80(ಹೊಸ) | 9700-9750 |
| ಜಾವಾ 80/90(ಹೊಸ) | 9200-9250 |
| ದಪ್ಪ ಮಧ್ಯಪ್ರದೇಶ(ಹೊಸ) | 9750-9850 |
| ದಪ್ಪ ಗುಜರಾತ್(ಹೊಸ) | 9250-9350 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1440 (1430) |
| ಒಂದು ವಾರದ ಡೆಲಿವರಿ | 1435 (1425) |
| ಸೋಯಾ ಕಚ್ಚಾ | 1330 (1325) |
| ಪಾಮ್ ವಾರದ ಡೆಲಿವರಿ | 1193 (1188) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1330 (1320) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
48200 (48,250)
ಬೆಳ್ಳಿ ಕೆ.ಜಿ
68,900 (69,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

# ಜಸ್ಟ್ ಡಯಲ್‌ನಲ್ಲಿ ರಿಲಯನ್ಸ್ ಹೂಡಿಕೆ

ನವದೆಹಲಿ (ಪಿಟಿಐ): ಜಸ್ಟ್ ಡಯಲ್ ಕಂಪನಿಯ ಶೇಕಡ 40.95ರಷ್ಟು ಷೇರುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿರುವುದಾಗಿ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್ (ಆರ್‌ಆರ್‌ವಿಎಲ್) ಶುಕ್ರವಾರ ಪ್ರಕಟಿಸಿದೆ. ಈ ಖರೀದಿಯ ಮೊತ್ತವು ₹ 3,497 ಕೋಟಿ.

ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಸಮೂಹವು ಡಿಜಿಟಲ್ ಜಗತ್ತಿನಲ್ಲಿ ತನ್ನ ಜಾಲವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಭಾಗವಾಗಿ ಜಸ್ಟ್ ಡಯಲ್ ಕಂಪನಿಯ ಷೇರುಗಳನ್ನು ಖರೀದಿಸುತ್ತಿದೆ. ನೆಟ್‌ಮೆಡ್ಸ್, ಅರ್ಬನ್ ಲ್ಯಾಡರ್‌ನಂತಹ ಕಂಪನಿಗಳಲ್ಲಿಯೂ ರಿಲಯನ್ಸ್ ಹೂಡಿಕೆ ಮಾಡಿದೆ.

# ‘ಆತುರದ ವಾಪಸಾತಿ’ ಅಫ್ಗಾನಿಸ್ತಾನಕ್ಕೆ ಅಪಾಯ ತಂದೊಡ್ಡಿದೆ: ರಷ್ಯಾ

ಮಾಸ್ಕೊ (ಎಎಫ್‌ಪಿ): ಅಮೆರಿಕ ಮತ್ತು ನ್ಯಾಟೊ ಪಡೆಗಳು ತಮ್ಮ ಸೈನ್ಯವನ್ನು ಆತುರವಾಗಿ ಹಿಂತೆಗೆದುಕೊಂಡಿರುವುದು ಅಫ್ಗಾನಿಸ್ತಾನದಲ್ಲಿ ಭದ್ರತೆಗೆ ಧಕ್ಕೆಯುಂಟಾಗಲು ಕಾರಣವಾಗಿದೆ ಎಂದು ರಷ್ಯಾ ಶುಕ್ರವಾರ ಆರೋಪಿಸಿದೆ.

ಭದ್ರತೆಯು ಕ್ಷೀಣಿಸುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ನೆರೆಯ ರಾಷ್ಟ್ರಗಳಲ್ಲೂ ಇಂಥ ಅಸ್ಥಿರತೆ ಉಂಟಾಗುವ ಸಾಧ್ಯತೆ ಇದೆಯೆಂದೂ ರಷ್ಯಾ ಎಚ್ಚರಿಸಿದೆ.

‘ದುರುದೃಷ್ಟವಶಾತ್ ಇತ್ತೀಚಿನ ದಿನಗಳಲ್ಲಿ ನಾವು ಅಫ್ಗಾನಿಸ್ತಾನದ ದುಃಸ್ಥಿತಿಯನ್ನು ನೋಡಬೇಕಾಗಿದೆ’ ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್‌ರೊವ್ ಅವರು ಸುದ್ದಿಸಂಸ್ಥೆಗಳಿಗೆ ನೀಡಿದ ಪ್ರತಿಕ್ರಿಯೆಯಲ್ಲಿ ತಿಳಿಸಿದ್ದಾರೆ.

# ಎಲ್‌ಐಸಿ ಐಪಿಒ: ಅರ್ಜಿ ಆಹ್ವಾನ

ನವದೆಹಲಿ (ಪಿಟಿಐ): ಭಾರತೀಯ ಜೀವವಿಮಾ ನಿಗಮದ (ಎಲ್‌ಐಸಿ) ಷೇರುಗಳನ್ನು ಸಾರ್ವಜನಿಕರಿಗೆ ಮುಕ್ತವಾಗಿಸುವ (ಐಪಿಒ) ಪ್ರಕ್ರಿಯೆ ಶುರುವಾಗಿದ್ದು, ಕೇಂದ್ರ ಸರ್ಕಾರವು ಮರ್ಚೆಂಟ್ ಬ್ಯಾಂಕರ್ ಹಾಗೂ ಕಾನೂನು ಸಲಹೆ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಿದೆ.

ಎಲ್‌ಐಸಿ ಐಪಿಒ ಗಾತ್ರವು ಭಾರತದ ಬಂಡವಾಳ ಮಾರುಕಟ್ಟೆಗಳಲ್ಲಿ ಇದುವರೆಗೆ ನಡೆದಿರುವ ಎಲ್ಲ ಐಪಿಒಗಳಿಗಿಂತ ಬಹಳ ದೊಡ್ಡದಾಗಿರುವ ನಿರೀಕ್ಷೆ ಇದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯು (ಡಿಐಪಿಎಎಂ) ಹೇಳಿದೆ.

ಷೇರುಗಳ ಮಾರಾಟಕ್ಕೆ ಸಂಬಂಧಿಸಿದಂತೆ ತನಗೆ ನೆರವಾಗಲು ಇಲಾಖೆಯು ಗರಿಷ್ಠ 10 ಮರ್ಚೆಂಟ್ ಬ್ಯಾಂಕರ್‌ಗಳನ್ನು ಹಾಗೂ ಒಂದು ಕಾನೂನು ಸಲಹಾ ಸಂಸ್ಥೆಯನ್ನು ನೇಮಕ ಮಾಡಿಕೊಳ್ಳಲಿದೆ.

ಮರ್ಚೆಂಟ್ ಬ್ಯಾಂಕರ್‌ಗಳು, ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಬೇಕಿರುವ ದಾಖಲೆಗಳನ್ನು ಸಿದ್ಧಪಡಿಸುವ, ಹೂಡಿಕೆದಾರರನ್ನು ಸೆಳೆಯಲು ರೋಡ್‌ಷೋ ನಡೆಸುವ, ಐಪಿಒ ಯಾವಾಗ ನಡೆದರೆ ಸೂಕ್ತ ಎಂಬ ಸಲಹೆಯನ್ನು ಸರ್ಕಾರಕ್ಕೆ ನೀಡುವ ಕೆಲಸಗಳನ್ನು ನಿಭಾಯಿಸುತ್ತಾರೆ.

## ಐಪಿಒ: ದಾಖಲೆ ಸಲ್ಲಿಸಿದ ಪೇಟಿಎಂ

ನವದೆಹಲಿ (ಪಿಟಿಐ): ಪಾವತಿ ಸೇವಾ ಕಂಪನಿ ಪೇಟಿಎಂ, ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ (ಐಪಿಒ) ಸಂಬಂಧ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಪ್ರಾಥಮಿಕ ದಾಖಲೆಗಳನ್ನು (ಡಿಆರ್‌ಎಚ್‌ಪಿ) ಸಲ್ಲಿಸಿದೆ.

ಒಟ್ಟು ₹ 16,600 ಕೋಟಿ ಬಂಡವಾಳವನ್ನು ಸಂಗ್ರಹಿಸುವ ಉದ್ದೇಶ ತನ್ನದು ಎಂದು ಕಂಪನಿಯು ಸೆಬಿಗೆ ಸಲ್ಲಿಸಿರುವ ದಾಖಲೆಗಳಲ್ಲಿ ವಿವರಿಸಿದೆ. ಈ ಬಂಡವಾಳದಲ್ಲಿ ಒಟ್ಟು ₹ 4,300 ಕೋಟಿ ಬಳಸಿ ಪೇಟಿಎಂ ಸೇವೆಗಳನ್ನು ಇನ್ನಷ್ಟು ಬಲಪಡಿಸುವ ಉದ್ದೇಶ ಕಂಪನಿಗೆ ಇದೆ. ಹೆಚ್ಚಿನ ಗ್ರಾಹಕರನ್ನು ಮತ್ತು ವರ್ತಕರನ್ನು ತನ್ನತ್ತ ಸೆಳೆದು, ಅವರಿಗೆ ತಂತ್ರಜ್ಞಾನ ಹಾಗೂ ಹಣಕಾಸು ಸೇವೆಗಳನ್ನು ಇನ್ನಷ್ಟು ನೀಡುವ ಉದ್ದೇಶವೂ ಅದಕ್ಕೆ ಇದೆ.

₹ 2,000 ಕೋಟಿ ಹಣವನ್ನು ಹೊಸ ಯೋಜನೆಗಳಿಗೆ, ಪಾಲುದಾರಿಕೆಗಳಿಗೆ ಮೀಸಲಿಡಲಿದೆ. 2019–20ರಲ್ಲಿ ಪೇಟಿಎಂ ನಷ್ಟ ₹ 2,943 ಕೋಟಿ ಆಗಿತ್ತು. 2020–21ರಲ್ಲಿ ನಷ್ಟವು ₹ 1,704 ಕೋಟಿಗೆ ತಗ್ಗಿದೆ.

# ಜೊಮ್ಯಾಟೊ: ಯುವಕರ ಉತ್ಸಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಸ್ಟೋರೆಂಟ್ ಮತ್ತು ಹೋಟೆಲ್‌ಗಳಿಂದ ತಿಂಡಿ–ತಿನಿಸುಗಳನ್ನು ಮನೆ ಬಾಗಿಲಿಗೆ ತಲುಪಿಸುವ ಜೊಮ್ಯಾಟೊ ಕಂಪನಿಯ ಷೇರುಗಳ ಖರೀದಿಗೆ ಬಿಡ್ ಸಲ್ಲಿಸಿದವರಲ್ಲಿ ಯುವಕರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಬಿಡ್ ಸಲ್ಲಿಸಿದವರ ಪೈಕಿ 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ಪ್ರಮಾಣ ಶೇಕಡ 27ರಷ್ಟಿದೆ.

ಷೇರು ಬ್ರೋಕರೇಜ್ ಸೇವೆಗಳನ್ನು ಡಿಜಿಟಲ್ ವೇದಿಕೆ ಮೂಲಕ ಒದಗಿಸುವ ಪೇಟಿಎಂ ಮನಿ ಕಂಪನಿಯು ಈ ಮಾಹಿತಿಯನ್ನು ಹಂಚಿಕೊಂಡಿದೆ. ಜೊಮ್ಯಾಟೊ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ (ಐಪಿಒ) ಮುಕ್ತವಾಗಿಸಿದ ಮೊದಲ ದಿನ ತನ್ನ ಮೂಲಕ ಸಲ್ಲಿಕೆಯಾದ ಬಿಡ್‌ಗಳ ವಿಶ್ಲೇಷಣೆ ನಡೆಸಿ, ಪೇಟಿಎಂ ಮನಿ ಈ ವಿವರ ನೀಡಿದೆ.

‘ಭಾರತದ ಷೇರು ಮಾರುಕಟ್ಟೆಗಳನ್ನು ಮುನ್ನಡೆಸುವ ಹೂಡಿಕೆದಾರರ ಸಮೂಹದಲ್ಲಿ ಆಗುತ್ತಿರಬಹುದಾದ ಬದಲಾವಣೆಯೊಂದನ್ನು ಜೊಮ್ಯಾಟೊ ಐಪಿಒ ಪ್ರಕ್ರಿಯೆಯು ಬಹಿರಂಗಪಡಿಸಿದೆ’ ಎಂದು ಪೇಟಿಎಂ ಮನಿ ಹೇಳಿದೆ. ಐಪಿಒ ಆರಂಭವಾದ ಮೊದಲ ದಿನ ಬಿಡ್ ಸಲ್ಲಿಸಿದ ಶೇಕಡ 22ರಷ್ಟಕ್ಕೂ ಹೆಚ್ಚಿನವರು ಮೊದಲ ಬಾರಿಗೆ ಹೂಡಿಕೆ ಜಗತ್ತಿಗೆ ಕಾಲಿರಿಸಿದವರು.

ಮೊದಲ ದಿನ ಬಿಡ್ ಸಲ್ಲಿಸಿದ ಶೇ 60ರಷ್ಟು ಜನ ಮೂವತ್ತು ವರ್ಷಕ್ಕಿಂತ ಕಡಿಮೆ ವಯಸ್ಸಿನವರು. ಸಾಮಾನ್ಯವಾಗಿ ಐಪಿಒಗಳ ಸಂದರ್ಭದಲ್ಲಿ ಷೇರುಗಳಿಗೆ ಬಿಡ್ ಸಲ್ಲಿಸುವವರ ಪೈಕಿ ಶೇ 55ರಷ್ಟು ಜನ ಮಾತ್ರ 30 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಿದ್ದರು. ಮಹಾನಗರಗಳಾದ ಬೆಂಗಳೂರು, ದೆಹಲಿ ಮತ್ತು ಮುಂಬೈ ಮಾತ್ರವೇ ಅಲ್ಲದೆ ಸಣ್ಣ ಪಟ್ಟಣಗಳಾದ ಗುಜರಾತ್‌ನ ಕೊಡೀನಾರ್, ನಾಗಾಲ್ಯಾಂಡ್‌ನ ತುಯೆನ್‌ಸಾಂಗ್, ಅಸ್ಸಾಂನ ರಂಗಾಪಾರಾದಿಂದಲೂ ಬಿಡ್ ಸಲ್ಲಿಕೆಯಾಗಿವೆ.

ಬಿಡ್ ಸಲ್ಲಿಸಿದವರ ಪೈಕಿ ಶೇ 10ರಷ್ಟು ಮಂದಿ ಮಹಿಳೆಯರು. ಪುರುಷರಿಗೆ ಹೋಲಿಸಿದರೆ ಇವರು ಹೂಡಿಕೆ ಮಾಡಲು ಮುಂದಾಗಿರುವ ಮೊತ್ತ ಕೂಡ ಜಾಸ್ತಿ ಇದೆ. ‘ಈ ರೀತಿ ಆಗಿರುವುದಕ್ಕೆ ಕಾರಣ ಜೊಮ್ಯಾಟೊ ಐಪಿಒಗೆ ಸಿಕ್ಕಿದ ಜನಪ್ರಿಯತೆ ಆಗಿರಬಹುದು. ಹಾಗೆಯೇ, ಸಣ್ಣ ಹೂಡಿಕೆದಾರರಲ್ಲಿ ರಿಸ್ಕ್ ತೆಗೆದುಕೊಳ್ಳುವ ಮನೋಭಾವ ಹೆಚ್ಚಾಗಿರುವುದು ಕೂಡ ಇದಕ್ಕೆ ಕಾರಣವಾಗಿರಬಹುದು’ ಎಂದು ಪೇಟಿಎಂ ಮನಿ ವಕ್ತಾರರೊಬ್ಬರು ಹೇಳಿದ್ದಾರೆ.

### ಬಿಡ್ ಅವಧಿ ಮುಕ್ತಾಯ

ನವದೆಹಲಿ (ಪಿಟಿಐ): ಜೊಮ್ಯಾಟೊ ಕಂಪನಿಯ ಐಪಿಒಗೆ ಭಾರಿ ಸ್ಪಂದನ ಬಂದಿದ್ದು, 38 ಪಟ್ಟು ಬಿಡ್‌ಗಳು ಸಲ್ಲಿಕೆಯಾಗಿವೆ. ಸಾಂಸ್ಥಿಕ ಹೂಡಿಕೆದಾರರು ಕೂಡ ಷೇರು ಖರೀದಿಗೆ ಹೆಚ್ಚಿನ ಆಸಕ್ತಿ ತೋರಿದ್ದಾರೆ. ಬಿಡ್ ಸಲ್ಲಿಸುವ ಅವಧಿ ಶುಕ್ರವಾರಕ್ಕೆ ಕೊನೆಗೊಂಡಿದೆ.

ಕಂಪನಿಯು ಮಾರಾಟಕ್ಕೆ ಮುಕ್ತವಾಗಿಸಿರುವ ಷೇರುಗಳ ಸಂಖ್ಯೆ 71.92 ಕೋಟಿ. ಇದಕ್ಕೆ ಪ್ರತಿಯಾಗಿ, 2,751.25 ಕೋಟಿ ಷೇರುಗಳಿಗೆ ಬಿಡ್‌ಗಳು ಸಲ್ಲಿಕೆಯಾಗಿವೆ ಎಂದು ಷೇರುಪೇಟೆ ಅಂಕಿ–ಅಂಶಗಳಿಂದ ಗೊತ್ತಾಗಿದೆ. 2020ರ ಮಾರ್ಚ್ ನಂತರ ದೇಶದಲ್ಲಿ ನಡೆಯುತ್ತಿರುವ ಅತಿದೊಡ್ಡ ಐಪಿಒ ಇದು. 65 ಲಕ್ಷ ಷೇರುಗಳು ಕಂಪನಿಯ ನೌಕರರಿಗೆ ಮೀಸಲಾಗಿದ್ದವು. ಈ ಪೈಕಿ ಶೇ 62ರಷ್ಟು ಷೇರುಗಳಿಗೆ ಮಾತ್ರ ಬಿಡ್ ಸಲ್ಲಿಕೆಯಾಗಿದೆ.




## ಸೈನಿಕರಿಗೆ ಕೊಟ್ಟು ಮದುವೆ ಮಾಡುವಂತೆ ಒತ್ತಡ

# 15 ವರ್ಷ ಮೇಲ್ಪಟ್ಟ ಹುಡುಗಿಯರ ಪಟ್ಟಿ ಕೇಳಿದ ತಾಲಿಬಾನ್

ಕುಂಡುಜ್ (ಎಎಫ್‌ಪಿ) : ಅಫ್ಗಾನಿಸ್ತಾನದ ಬಹುತೇಕ ಪ್ರಾಂತ್ಯಗಳನ್ನು ವಶಕ್ಕೆ ಪಡೆದುಕೊಂಡಿರುವ ತಾಲಿಬಾನ್, ಜನರ ಮೇಲೆ ತಮ್ಮದೇ ಪ್ರತ್ಯೇಕ ಕಾನೂನನ್ನು ಹೇರಲಾರಂಭಿದೆ.

‘ಮಹಿಳೆಯರು ಒಂಟಿಯಾಗಿ ಹೊರಗೆ ಓಡಾಡಬಾರದು. ಹೊರಗೆ ಹೋಗಬೇಕಿದ್ದರೆ ಪುರುಷ ಸಹಾಯಕನೊಬ್ಬ ಮಹಿಳೆಯರ ಜೊತೆಗೆ ಕಡ್ಡಾಯವಾಗಿ ಇರಬೇಕು. ಪುರುಷರು ಗಡ್ಡ ತೆಗೆಯುವಂತಿಲ್ಲ,’ ಎಂಬ ನಿಯಮಗಳನ್ನು ತಾಲಿಬಾನಿಗಳು ಜನರ ಮೇಲೆ ವಿಧಿಸಿದ್ದಾರೆ ಎಂದು ಕಲಾಫ್‌ಗಾನ್ ಜಿಲ್ಲೆಯ ನಿವಾಸಿ ಸೆಫತ್–ಉಲ್ಲಾ (25) ಎಂಬುವವರು ಹೇಳಿದ್ದಾರೆ.

ಈ ಮಧ್ಯೆ, ತಾಲಿಬಾನಿಗಳು ಹೊರಡಿಸಿರುವುದು ಎನ್ನಲಾದ ಆದೇಶ ಪತ್ರವೊಂದು ಈ ವಾರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ‘ಗ್ರಾಮಸ್ಥರು ತಮ್ಮ ಹೆಣ್ಣುಮಕ್ಕಳು ಮತ್ತು ವಿಧವೆಯರನ್ನು ತಾಲಿಬಾನಿ ಚಳವಳಿಯ ಸೈನಿಕರಿಗೆ ಕೊಟ್ಟು ಮದುವೆ ಮಾಡಬೇಕು’ ಎಂದು ಅದರಲ್ಲಿ ಆದೇಶಿಸಲಾಗಿದೆ.

‘ತಾಲಿಬಾನ್ ಹೋರಾಟಗಾರರನ್ನು ಮದುವೆಯಾಗಲು 15 ವರ್ಷಕ್ಕಿಂತ ಮೇಲ್ಪಟ್ಟ ಹುಡುಗಿಯರು ಮತ್ತು 45 ವರ್ಷದೊಳಗಿನ ವಿಧವೆಯರ ಪಟ್ಟಿಯನ್ನು ಒದಗಿಸಬೇಕು. ತಾಲಿಬಾನ್ ವಶದಲ್ಲಿರುವ ಪ್ರದೇಶಗಳಲ್ಲಿನ ಎಲ್ಲಾ ಇಮಾಮ್‌ಗಳು ಮತ್ತು ಮುಲ್ಲಾಗಳು ಈ ಕೆಲಸ ಮಾಡಬೇಕು’ ಎಂದು ತಾಲಿಬಾನ್‌ನ ಸಾಂಸ್ಕೃತಿಕ ಆಯೋಗದ ಹೆಸರಿನಲ್ಲಿರುವ ಆದೇಶ ಪತ್ರವೊಂದರಲ್ಲಿ ಹೇಳಲಾಗಿದೆ.

‘ಇಂಥ ಆದೇಶವನ್ನು ಹೊರಡಿಸಿಲ್ಲ. ಇದು ಸಂಘಟನೆಯ ವಿರುದ್ಧದ ಅಪಪ್ರಚಾರ’ ಎಂದು ತಾಲಿಬಾನ್ ವಕ್ತಾರ ಜಬಿಹ್ ಉಲ್ಲಾ ಮುಜಾಹಿದ್ ಸ್ಪಷ್ಟಪಡಿಸಿದ್ದಾರೆ.

ಆದರೆ, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಆದೇಶ ಪತ್ರಗಳು ನಿಜ ಎಂದು ತಾಲಿಬಾನ್ ಆಕ್ರಮಿತ ಪ್ರದೇಶಗಳ ನಾಗರಿಕರು ಹೇಳಿಕೊಂಡಿದ್ದಾರೆ.

## ಮಲ್ಯ ಪ್ರಕರಣ: ಬ್ಯಾಂಕ್‌ಗಳಿಂದ ₹ 792 ಕೋಟಿ ವಸೂಲು

ನವದೆಹಲಿ (ಪಿಟಿಐ): ಉದ್ಯಮಿ ವಿಜಯ್ ಮಲ್ಯ ಅವರಿಗೆ ಸಾಲ ನೀಡಿದ ಎಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟಕ್ಕೆ ಶುಕ್ರವಾರ ₹ 792.11 ಕೋಟಿ ಮರುಪಾವತಿ ಆಗಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಅಡಿ ಈ ಹಿಂದೆ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದ ಕೆಲವು ಷೇರುಗಳನ್ನು ಮಾರಾಟ ಮಾಡಿ ಈ ಮೊತ್ತವನ್ನು ಪಡೆಯಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ತಿಳಿಸಿದೆ.

ಹಿಂದಿನ ತಿಂಗಳಲ್ಲಿ ಕೂಡ ಇದೇ ಬಗೆಯಲ್ಲಿ ಷೇರುಗಳ ಮಾರಾಟದ ಮೂಲಕ ಸ್‌ಬಿಐ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟವು ಮಲ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು ₹ 7,181 ಕೋಟಿ ವಸೂಲು ಮಾಡಿತ್ತು. ಮಲ್ಯ ಅವರು ಭಾರತದ ಬ್ಯಾಂಕ್‌ಗಳಿಗೆ ₹ 9 ಸಾವಿರ ಕೋಟಿ ವಂಚಿಸಿರುವ ಆರೋಪ ಎದುರಿಸುತ್ತಿದ್ದಾರೆ.

### ಸಮರಾಭ್ಯಾಸ: ಹಿಂದೂ ಮಹಾಸಾಗರದತ್ತ ಬ್ರಿಟಿಷ್ ಯುದ್ಧನೌಕೆಗಳು

ನವದೆಹಲಿ (ಪಿಟಿಐ): ಭಾರತ ಮತ್ತು ಬ್ರಿಟನ್ ನೌಕಾಪಡೆಗಳು ಈ ತಿಂಗಳ ಅಂತ್ಯದಲ್ಲಿ ಜಂಟಿ ಸಮರಾಭ್ಯಾಸ ನಡೆಸಲಿದ್ದು, ಇದಕ್ಕಾಗಿ ಎಚ್‌ಎಂಎಸ್ ಕ್ವೀನ್ ಎಲಿಜಬೆತ್ ನೇತೃತ್ವದ ಯುದ್ಧ ನೌಕೆಗಳು ಹಿಂದೂ ಮಹಾಸಾಗರದತ್ತ ಪ್ರಯಾಣ ಬೆಳೆಸಿವೆ.

ಜುಲೈ 26ರ ಆಸುಪಾಸಿನಲ್ಲಿ ಈ ಸಮರಾಭ್ಯಾಸ ನಡೆಯಲಿದ್ದು, ಸಂಕೀರ್ಣ ಅಭ್ಯಾಸಗಳನ್ನು ನಡೆಸಲಾಗುವುದು ಎಂದು ಭಾರತೀಯ ರಕ್ಷಣಾ ಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

# ಕೊರೊನಾ ವೈರಸ್: ಪ್ರಯೋಗಾಲಯ ಸೋರಿಕೆ ಸಿದ್ಧಾಂತವನ್ನು ತಳ್ಳಿಹಾಕಲಾಗದು– ಡಬ್ಲ್ಯುಎಚ್‌ಒ

ಬರ್ಲಿನ್ (ಪಿಟಿಐ): ಕೋವಿಡ್ ಪಿಡುಗು ಮತ್ತು ಚೀನಾದ ವುಹಾನ್ ಪ್ರಯೋಗಾಲಯದ ಸೋರಿಕೆ ಆರೋಪದ ನಡುವಿನ ಸಂಭಾವ್ಯ ಸಂಬಂಧವನ್ನು ಈಗಲೇ ಸಾರಾಸಗಟಾಗಿ ತಳ್ಳಿಹಾಕಲಾಗದು ಎಂದು ವಿಶ್ವ ಆರೋಗ್ಯ ಸಂಘಟನೆಯ (ಡಬ್ಲ್ಯುಎಚ್‌ಒ) ಮುಖ್ಯಸ್ಥ ಟೆಡ್ರೊಸ್ ಗೆಬ್ರೆಷಿಯಸ್ ಹೇಳಿದ್ದಾರೆ.

ಈ ಮೂಲಕ ಪ್ರಯೋಗಾಲಯದಿಂದ ಕೊರೊನಾ ವೈರಸ್ ಸೋರಿಕೆಯಾಗಿರುವ ಸಾಧ್ಯತೆ ‘ ಅತ್ಯಂತ ಅಸಂಭವ’ ಎಂಬ ತನ್ನ ಮಾರ್ಚ್ ತಿಂಗಳ ವರದಿಯಿಂದ ಡಬ್ಲ್ಯುಎಚ್‌ಒ ಹಿಂದೆ ಸರಿದಿರುವುದು ಇದೀಗ ಸ್ಪಷ್ಟವಾಗಿದೆ.

ಕೊರೊನಾ ವೈರಸ್‌ನ ಉಗಮದ ಶೋಧ ಕಾರ್ಯ ಕೈಗೊಂಡಿರುವ ವಿಜ್ಞಾನಿಗಳ ಜತೆ ಚೀನಾ ಹೆಚ್ಚು ಪಾರದರ್ಶಕವಾಗಿರಬೇಕು ಎಂದು ಟೆಡ್ರೊಸ್ ಅವರು ಸೂಚಿಸಿದ್ದಾರೆ.

‘ಈ ವಿಚಾರದಲ್ಲಿ ವಾಸ್ತವವಾಗಿ ಚೀನಾ ಪಾರದರ್ಶಕ ಮತ್ತು ಮುಕ್ತವಾಗಿ ನಡೆದುಕೊಳ್ಳಬೇಕು. ತನಿಖೆಗೆ ಅಗತ್ಯ ಸಹಕಾರ ನೀಡಬೇಕು. ಪ್ರಮುಖವಾಗಿ ರೋಗದ ಆರಂಭಿಕ ದಿನಗಳಿಗೆ ಸಂಬಂಧಿಸಿದಂತೆ ನಾವು ಕೇಳಿದ ಮಾಹಿತಿ ಮತ್ತು ದತ್ತಾಂಶಗಳನ್ನು ಒದಗಿಸಬೇಕು’ ಎಂದು ಟೆಡ್ರೊಸ್ ಸುದ್ದಿಗಾರರಿಗೆ ತಿಳಿಸಿದರು.

‘ನಾನು ಲ್ಯಾಬ್ ತಂತ್ರಜ್ಞನಾಗಿ, ಲ್ಯಾಬ್‌ನಲ್ಲಿ ಕೆಲಸವನ್ನೂ ಮಾಡಿದ್ದೇನೆ. ಲ್ಯಾಬ್‌ನಲ್ಲಿ ಅವಘಡಗಳು ಸಂಭವಿಸುತ್ತವೆ. ಅದು ಸಾಮಾನ್ಯ ಕೂಡ. ಚೀನಾ ಸರಿಯಾದ ಮಾಹಿತಿಯನ್ನು ನೀಡಿದರೆ ಪ್ರಯೋಗಾಲಯದಿಂದ ನಿಜಕ್ಕೂ ವೈರಸ್ ಸೋರಿಕೆ ಆಗಿದೆಯೇ, ಇಲ್ಲವೇ ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಾಗುತ್ತದೆ’ ಎಂದು ಟೆಡ್ರೊಸ್ ತಿಳಿಸಿದರು.

## ಮುಂದುವರಿದ ರಕ್ಷಣಾ ಕಾರ್ಯಾಚರಣೆ

# ಯುರೋಪ್: ಪ್ರವಾಹ– ಕನಿಷ್ಠ 110 ಮಂದಿ ಸಾವು

ಬರ್ಲಿನ್ (ಎಪಿ): ಯುರೋಪ್‌ನ ಹಲವು ದೇಶಗಳಲ್ಲಿ ಭಾರಿ ಮಳೆಯಾಗುತ್ತಿದೆ. ಪಶ್ಚಿಮ ಜರ್ಮನಿ ಮತ್ತು ಬೆಲ್ಜಿಯಂನ ಕೆಲವು ಭಾಗಗಳಲ್ಲಿ ಕಂಡು ಬಂದಿರುವ ಭೀಕರ ಪ್ರವಾಹದಲ್ಲಿ ಕನಿಷ್ಠ 110 ಜನರು ಸಾವಿಗೀಡಾಗಿದ್ದು, ನೂರಾರು ಮಂದಿ ಕಣ್ಮರೆಯಾಗಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

‘ಜರ್ಮನಿಯ ರೈನ್‌ಲ್ಯಾಂಡ್ ಪಲಾಟಿನೇಟ್ ರಾಜ್ಯದಲ್ಲಿ ಸುಮಾರು 60 ಮಂದಿ ಪ್ರವಾಹದಲ್ಲಿ ಸಾವಿಗೀಡಾಗಿದ್ದಾರೆ. ಇದರಲ್ಲಿ ಕನಿಷ್ಠ 9 ಮಂದಿ ವಿಕಲಚೇತನರು ಸೇರಿದ್ದಾರೆ. ಉತ್ತರ ರೈನ್–ವೆಸ್ಟ್‌ಫಾಲಿಯಾ ರಾಜ್ಯದಲ್ಲಿ ಒಟ್ಟು 43 ಮಂದಿ ಸಾವಿಗೀಡಾಗಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**1,300 ಮಂದಿ ಕಣ್ಮರೆ:** ಜರ್ಮನಿಯಲ್ಲಿ ಸುಮಾರು 1,300 ಮಂದಿ ಕಾಣೆಯಾಗಿದ್ದಾರೆ. ರಸ್ತೆಗಳು ಜಲಾವೃತವಾಗಿದ್ದು, ಫೋನ್ ಸಂಪರ್ಕಕ್ಕೆ ಅಡ್ಡಿ ಎದುರಾಗಿದೆ. ಹಾಗಾಗಿ, ಸಂಕಷ್ಟದಲ್ಲಿರುವ ಜನರ ಬಳಿ ತಲುಪಲು ತೊಂದರೆಯಾಗುತ್ತಿದೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೆಲ್ಜಿಯಂನಲ್ಲಿ ಸಾವಿನ ಸಂಖ್ಯೆ 12ಕ್ಕೆ ಏರಿದ್ದು, 5 ಮಂದಿ ಕಾಣೆಯಾಗಿದ್ದಾರೆ ಎಂದು ಅಲ್ಲಿನ ಸ್ಥಳೀಯ ಮಾಧ್ಯಮಗಳು ಶುಕ್ರವಾರ ವರದಿ ಮಾಡಿವೆ.

**ನೆರವಿನ ಭರವಸೆ:** ಭೀಕರ ಪ್ರವಾಹದಿಂದ ಆದ ವಿನಾಶಕ್ಕೆ ಜರ್ಮನಿಯ ಅಧ್ಯಕ್ಷ ಫ್ರಾಂಕ್ ವಾಲ್ಟರ್ ಸ್ಟೇನ್‌ಮಿಯರ್ ಅವರು ದಿಗ್ಭ್ರಮೆ ವ್ಯಕ್ತಪಡಿಸಿದ್ದು, ಪ್ರವಾಹದಲ್ಲಿ ಸಾವಿಗೀಡಾದವರ ಕುಟುಂಬಗಳು ಮತ್ತು ಅಪಾರವಾಗಿ ಹಾನಿಗೀಡಾಗಿರುವ ನಗರ ಮತ್ತು ಪಟ್ಟಣಗಳಿಗೆ ನೆರವಿನ ಭರವಸೆ ನೀಡಿದ್ದಾರೆ.

‘ಪ್ರವಾಹದಲ್ಲಿ ಎಲ್ಲವನ್ನೂ ಕಳೆದುಕೊಂಡವರಿಗೆ ನಾವೆಲ್ಲಾ ಒಗ್ಗಟ್ಟಾಗಿ ಬೆಂಬಲ ತೋರಬೇಕಾದದ್ದು ಅಗತ್ಯ’ ಎಂದು ಅವರು ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ಎಚ್ಚರಿಕೆ:** ‘ಹಮಾಮಾನ ವೈಪರೀತ್ಯದ ಕಾರಣದಿಂದ ಇಂತಹ ವಿಪತ್ತುಗಳು ಉಂಟಾಗುತ್ತಿವೆ’ ಎಂದು ತಜ್ಞರು ಎಚ್ಚರಿಸಿದ್ದಾರೆ.

‘ಪಶ್ಚಿಮ ಯುರೋಪಿನ ಕೆಲವು ಭಾಗಗಳಲ್ಲಿ ಎರಡು ದಿನಗಳ ಅಂತರದಲ್ಲಿ ಎರಡು ತಿಂಗಳಿಗಾಗುವಷ್ಟು ಪ್ರಮಾಣದ ಮಳೆಯಾಗಿದೆ. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಹವಾಮಾನ ವೈಪರೀತ್ಯ ಉಂಟಾಗುತ್ತಿದೆ. ಮುಂದಿನ ದಿನಗಳಲ್ಲಿ ಜಾಗತಿಕ ತಾಪಮಾನ ಏರಿಕೆ ತಡೆಯುವ ಪ್ರಯತ್ನಗಳನ್ನು ಚುರುಕುಗೊಳಿಸಬೇಕಾಗಿದೆ’ ಎಂದು ವಿಶ್ವ ಹವಾಮಾನ ಸಂಸ್ಥೆಯ ವಕ್ತಾರ ಕ್ಲೇರ್ ನುಲ್ಲಿಸ್ ಹೇಳಿದ್ದಾರೆ.



ಜರ್ಮನಿಯ ಎರ್ಫ್ಟ್‌ಸ್ಟಾಡ್ ಪಟ್ಟಣದಲ್ಲಿ ಉಂಟಾದ ಪ್ರವಾಹದ ವೈಮಾನಿಕ ನೋಟ –ಎಎಫ್‌ಪಿ ಚಿತ್ರ

ಟೋಕಿಯೊ ಒಲಿಂಪಿಕ್ಸ್ 2020 ಭಾರತದ ಕನಸಿನ ಪಯಣ

# ಬೆಳ್ಳಿಗೆ ಚಿನ್ನದ ಹೊಳಪು ತುಂಬುವತ್ತ ಚಿತ್ತ



ಪಿ.ವಿ.ಸಿಂಧು –ಎಎಫ್‌ಪಿ ಚಿತ್ರ

ಬಿ.ಸಾಯಿ ಪ್ರಣೀತ್ –ಎಎಫ್‌ಪಿ ಚಿತ್ರ

ಒಲಿಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್ ಕ್ರೀಡೆಯನ್ನು ಸೇರ್ಪಡೆಗೊಳಿಸಿದಾಗಿನಿಂದ 36 ದೇಶಗಳು ಪದಕಗಳಿಗಾಗಿ ಪೈಪೋಟಿ ನಡೆಸಿವೆ. ಈ ಪೈಕಿ ಎಲ್ಲ ಆವೃತ್ತಿಗಳಲ್ಲಿ ಪಾಲ್ಗೊಂಡ ದೇಶಗಳು 18 ಮಾತ್ರ. ಇದರಲ್ಲಿ ಒಂದು ಭಾರತ. ಆದರೆ ಪದಕಗಳನ್ನು ಗೆದ್ದ ರಾಷ್ಟ್ರಗಳ ಪಟ್ಟಿಯ ಮೇಲೆ ಕಣ್ಣಾಡಿಸಿದರೆ ಈ 18 ದೇಶಗಳಲ್ಲಿ ಭಾರತದ ಸ್ಥಾನ ತೀರಾ ಕೆಳಗೆ. ಚೀನಾ, ಇಂಡೊನೇಷ್ಯಾ ಮತ್ತು ದಕ್ಷಿಣ ಕೊರಿಯಾ ಪದಕಗಳ ಸಂಖ್ಯೆಯಲ್ಲಿ ಎರಡಂಕಿ ದಾಟಿದ್ದರೆ ಡೆನ್ಮಾರ್ಕ್ ಹಾಗೂ ಮಲೇಷ್ಯಾದ ಸಾಧನೆಯೂ ಕಡಿಮೆಯೇನಲ್ಲ.

2012ರ ಒಲಿಂಪಿಕ್ಸ್‌ನಲ್ಲಿ ಸೈನಾ ನೆಹ್ವಾಲ್ ಪದಕಕ್ಕೆ ಮುತ್ತಿಡುವ ವರೆಗೆ ಭಾರತದ ಯಾರೊಬ್ಬರೂ ಬ್ಯಾಡ್ಮಿಂಟನ್‌ನಲ್ಲಿ ವಿಜೇತರ ವೇದಿಕೆ ಏರಿರಲಿಲ್ಲ. ನೆಹ್ವಾಲ್ ಲಂಡನ್‌ನಲ್ಲಿ ಗೆದ್ದ ಕಂಚಿನ ಪದಕಕ್ಕೆ ರಿಯೊ ಡಿ ಜನೈರೊದಲ್ಲಿ ನಡೆದ ಮುಂದಿನ ಆವೃತ್ತಿಯಲ್ಲಿ ಬೆಳ್ಳಿಯ ಹೊಳಪು ತುಂಬಿದವರು ಪಿ.ವಿ.ಸಿಂಧು. ಅವರು ತಮ್ಮದೇ ಸಾಧನೆಯನ್ನು ಉತ್ತಮಪಡಿಸಿ ದೇಶದ ಮುಕುಟಕ್ಕೆ ಚಿನ್ನದ ಪದಕ ತೊಡಿಸುವರೇ ಎಂಬುದು ಸದ್ಯದ ಕುತೂಹಲ.

ಬ್ಯಾಡ್ಮಿಂಟನ್ ಕ್ರೀಡೆಯನ್ನು 1972ರ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಪ್ರದರ್ಶನಕ್ಕಾಗಿ ಸೇರ್ಪಡೆಗೊಳಿಸಲಾಗಿತ್ತು. ಸ್ಪರ್ಧೆಯಾಗಿ ಇದಕ್ಕೆ ಒಲಿಂಪಿಕ್ಸ್ ಮಾನ್ಯತೆ ಸಿಕ್ಕಿದ್ದು 1992ರ ಬಾರ್ಸಿಲೋನಾ ಕೂಟದಲ್ಲಿ. ಸತತ ಐದು ವರ್ಷ ಭಾರತದಿಂದ ಗರಿಷ್ಠ ಮೂವರು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದರು. 2012 ಮತ್ತು 2016ರಲ್ಲಿ ಕ್ರಮವಾಗಿ ಐದು ಮತ್ತು ಏಳು ಮಂದಿ ಕಣಕ್ಕೆ ಇಳಿದರು; ಭಾರತಕ್ಕೆ ಯಶಸ್ಸೂ ದೊರೆಯಿತು.



ಇನ್ನು 6 ದಿನ

ಈ ವರ್ಷ ಸಿಂಗಲ್ಸ್ ವಿಭಾಗಗಳಲ್ಲಿ ಪಿ.ವಿ.ಸಿಂಧು ಮತ್ತು ಬಿ.ಸಾಯಿ ಪ್ರಣೀತ್, ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ ಟೋಕಿಯೊ ಟಿಕೆಟ್ ಗಳಿಸಿದ್ದಾರೆ. ಸಿಂಧು ಮತ್ತು ಡಬಲ್ಸ್ ಜೋಡಿ ಮೇಲೆ ಭಾರತ ಅಪಾರ ನಿರೀಕ್ಷೆ ಇರಿಸಿಕೊಂಡಿದೆ. ವಿಶ್ವ ಚಾಂಪಿಯನ್ ಸಿಂಧುಗೆ ಪ್ರಬಲ ಎದುರಾಳಿಯಾಗಬೇಕಿದ್ದ ಕರೋಲಿನಾ ಮರಿನ್ ಗಾಯದಿಂದಾಗಿ ಒಲಿಂಪಿಕ್ಸ್‌ನಲ್ಲಿ ಆಡುತ್ತಿಲ್ಲ. ಜಪಾನ್, ಚೀನಾ, ಚೀನಾ ಥೈಪೆ ಮತ್ತು ಥಾಯ್ಲೆಂಡ್ ಆಟಗಾರ್ತಿಯರ ಸವಾಲು ಮೀರಿದರೆ ಸಿಂಧು ಚಿನ್ನದ ನಗೆ ಬೀರಬಹುದಾಗಿದೆ.

ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಇತ್ತೀಚೆಗೆ ಬ್ಯಾಡ್ಮಿಂಟನ್ ಲೋಕದಲ್ಲಿ ಹೆಸರು ಮಾಡಿದ್ದಾರೆ. 2017ರಿಂದ ವಿಯೆಟ್ನಾಂ, ಹೈದರಾಬಾದ್, ಬ್ರೆಜಿಲ್, ಥಾಯ್ಲೆಂಡ್ ಓಪನ್ ಟೂರ್ನಿಗಳಲ್ಲಿ ಪ್ರಶಸ್ತಿ ಗೆದ್ದಿರುವ ಈ ಜೋಡಿ ಸೈಯದ್ ಮೋದಿ ಮತ್ತು ಫ್ರೆಂಚ್ ಓಪನ್‌ಗಳಲ್ಲಿ ರನ್ನರ್ ಅಪ್ ಆಗಿದ್ದಾರೆ. ಜಗತ್ತಿನ ಯಾವುದೇ ಆಟಗಾರರಿಗೆ ಪ್ರಬಲ ಪೈಪೋಟಿ ನೀಡುವ ಸಾಮರ್ಥ್ಯ ಅವರಿಗಿದೆ.

2013ರ ಇಂಡೊನೇಷ್ಯಾ ಓಪನ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ಮತ್ತು ಒಲಿಂಪಿಕ್ ಚಾಂಪಿಯನ್ ತೌಫಿಕ್ ಹಿದಾಯತ್ ಅವರನ್ನು ಮಣಿಸಿ ಗಮನ ಸೆಳೆದಿದ್ದ ಸಾಯಿ ಪ್ರಣೀತ್ 2016ರ ಆಲ್ ಇಂಗ್ಲೆಂಡ್ ಸೀರಿಸ್‌ನಲ್ಲಿ ಮಲೇಷ್ಯಾದ ಲೀ ಚಾಂಗ್ ವೀ ವಿರುದ್ಧ ಗೆದ್ದ ನಂತರ ಸ್ಥಿರ ಪ್ರದರ್ಶನ ನೀಡುತ್ತಿದ್ದಾರೆ.



ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ – ಎಎಫ್‌ಪಿ ಚಿತ್ರ

ಈ ವರೆಗೆ ಪಾಲ್ಗೊಂಡವರ ಸಂಖ್ಯೆ

| ವರ್ಷ | 1992 | 1996 | 2000 | 2004 | 2008 | 2012 | 2016 |
|---|---|---|---|---|---|---|---|
| ಸಂಖ್ಯೆ | 3 | 2 | 2 | 3 | 2 | 5 | 7 |

ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣಗೆ ಹೊಸ ಜೊತೆಗಾರ: ದಿವಿಜ್ ಹೊರಕ್ಕೆ

# ಟೆನಿಸ್: ಸುಮಿತ್ ನಗಾಲ್ ಕಣಕ್ಕೆ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಸಿಂಗಲ್ಸ್ ವಿಭಾಗದಲ್ಲಿ ಆಡಲು ಭಾರತದ ಟೆನಿಸ್ ಆಟಗಾರ ಸುಮಿತ್ ನಗಾಲ್ ಅರ್ಹತೆ ಗಳಿಸಿದ್ದಾರೆ. ಈ ಕುರಿತು ಅಖಿಲ ಭಾರತ ಟೆನಿಸ್ ಸಂಸ್ಥೆಗೆ (ಎಐಟಿಎ) ಶುಕ್ರವಾರ ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್ (ಐಟಿಎಫ್) ಮಾಹಿತಿ ನೀಡಿದೆ.

ಈ ಬೆಳವಣಿಗೆ ಬಳಿಕ ಎಐಟಿಎ, ಪುರುಷರ ಡಬಲ್ಸ್ ವಿಭಾಗದಲ್ಲಿ ರೋಹನ್ ಬೋಪಣ್ಣಗೆ ಜೊತೆಗಾರನಾಗಿ ನಗಾಲ್ ಅವರನ್ನು ಹೆಸರಿಸಿದೆ. ಈ ಹಿಂದೆ ಮಾಡಿದ್ದ ದಿವಿಜ್ ಶರಣ್ ಅವರ ನಾಮನಿರ್ದೇಶನವನ್ನು ರದ್ದು ಮಾಡಿದೆ.

ಕ್ರೀಡಾಕೂಟಕ್ಕೆ ನೇರ ಪ್ರವೇಶಕ್ಕಾಗಿ ಪರಿಗಣಿಸಲು ಕೊನೆಯ ದಿನವಾದ ಜೂನ್ 14ರಂದು ನಗಾಲ್ 144ನೇ ರ‍್ಯಾಂಕಿಂಗ್‌ನಲ್ಲಿದ್ದರು. ಹೀಗಾಗಿ ಅವರಿಗೆ ಟೋಕಿಯೊಗೆ ತೆರಳಲು ಅನುಮೋದನೆ ದೊರೆತಿದೆ. ಭಾರತದ ಪ್ರಜ್ಞೇಶ್ ಗುಣೇಶ್ವರನ್ 148ನೇ ಸ್ಥಾನದಲ್ಲಿದ್ದರು.

ಹೀಗಾಗಿ ಅವರೂ ಪ್ರವೇಶ ಗಿಟ್ಟಿಸುವರೇ ಎಂಬು ದನ್ನು ನಿರೀಕ್ಷಿಸಲಾಗುತ್ತಿದೆ. ಕೋವಿಡ್ ತಡೆಗಾಗಿ ಜಾರಿಗೊಳಿಸುತ್ತಿರುವ ಕಠಿಣ ನಿಯಮಗಳ ಹಿನ್ನೆಲೆಯಲ್ಲಿ ಅನೇಕರು ಟೂರ್ನಿಯಿಂದ ಹಿಂದೆ ಸರಿಯುತ್ತಿರುವ ಕಾರಣ ಅರ್ಹತಾ ರ‍್ಯಾಂಕಿಂಗ್ ಮಾನದಂಡ ಕಡಿಮೆಯಾಗುತ್ತ ಬರುತ್ತಿದೆ.

‘ಸಿಂಗಲ್ಸ್ ಆಡಲು ಸುಮಿತ್ ಅರ್ಹತೆ ಪಡೆದಿದ್ದಾರೆಂದು ನಮಗೆ ಐಟಿಎಫ್‌ನಿಂದ ಸಂದೇಶ ಬಂದಿದೆ. ಆಟಗಾರನ ವಿವರಗಳನ್ನು ಒದಗಿಸಲು ಕೇಳಿದ್ದಾರೆ. ಆ ಪ್ರಕ್ರಿಯೆ ಜಾರಿಯಲ್ಲಿದೆ’ ಎಂದು ಎಐಟಿಎ ಪ್ರಧಾನ ಕಾರ್ಯದರ್ಶಿ ಅನಿಲ್ ಧುಪರ್ ತಿಳಿಸಿದ್ದಾರೆ.

‘ನಾವು ದಿವಿಜ್ ಶರಣ್ ಅವರ ನಾಮನಿರ್ದೇಶನವನ್ನು ಹಿಂದೆಗೆದುಕೊಂಡಿದ್ದು, ಹೊಸ ತಂಡವನ್ನು ಕಳುಹಿಸಲಿದ್ದೇವೆ. ಬೋಪಣ್ಣ ಮತ್ತು ನಗಾಲ್‌ಗೆ ಡಬಲ್ಸ್‌ನಲ್ಲಿ ಅವಕಾಶ ಸಿಗುವುದೇ ಕಾದು ನೋಡಬೇಕಿದೆ’ ಎಂದು ಅನಿಲ್ ತಿಳಿಸಿದರು.


ಸುಮಿತ್ ನಗಾಲ್


ರೋಹನ್ ಬೋಪಣ್ಣ — ಪಿಟಿಐ ಚಿತ್ರಗಳು

ನಗಾಲ್‌ಗೆ ಪ್ರವೇಶ ದೊರೆತಿರುವುದರಿಂದ ಭಾರತಕ್ಕೆ ಈಗ ಮಿಶ್ರ ಡಬಲ್ಸ್‌ನಲ್ಲೂ ಆಡುವ ಅವಕಾಶ ಇದೆ. ಆದರೆ ನಗಾಲ್ ಹಾಗೂ ಸಾನಿಯಾ ಮಿರ್ಜಾ ಮಿಶ್ರ ಡಬಲ್ಸ್‌ನಲ್ಲಿ ಆಡುವ ಅವಕಾಶ ಪಡೆಯುವುದು ಬಹುತೇಕ ಅಸಂಭವವಾಗಿದ್ದು, ಬೋಪಣ್ಣ ಅವರು ಪುರುಷರ ಡಬಲ್ಸ್‌ನಲ್ಲಿ ಆಡುವುದು ಸಾಧ್ಯವಾಗಬಹುದು.

ಆದರೆ ಐಟಿಎಫ್, ಬೋಪಣ್ಣ ಮತ್ತು ನಗಾಲ್ ಅವರ, ಪುರುಷರ ಡಬಲ್ಸ್ ಸ್ಪರ್ಧೆಯ ಅರ್ಹತೆಯನ್ನು ಇನ್ನೂ ಖಚಿತಪಡಿಸಿಲ್ಲ.

ಮಹಿಳಾ ಡಬಲ್ಸ್ ವಿಭಾಗದಲ್ಲಿ ಸಾನಿಯಾ ಮಿರ್ಜಾ ಮತ್ತು ಅಂಕಿತಾ ರೈನಾ ಕಣಕ್ಕಿಳಿಯುತ್ತಿದ್ದಾರೆ.

**ಯೂಕಿ ಅಲಭ್ಯ:** 127ನೇ ರ‍್ಯಾಂಕ್‌ನಲ್ಲಿರುವ ಯೂಕಿ ಭಾಂಬ್ರಿ ಕೂಡ ಟೋಕಿಯೊ ಟಿಕೆಟ್ ಗಿಟ್ಟಿಸಿದ್ದರು. ಆದರೆ ಮೊಣಕಾಲು ಗಾಯಕ್ಕೆ ಅಮೆರಿಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರು ಕೂಟದಲ್ಲಿ ಆಡುವುದಿಲ್ಲ ಎಂದಿದ್ದಾರೆ.

## ಉಗಾಂಡ ವೇಟ್‌ಲಿಫ್ಟರ್ ನಾಪತ್ತೆ

ಟೋಕಿಯೊ (ಎಎಫ್‌ಪಿ): ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿದ ಉಗಾಂಡದ ವೇಟ್‌ಲಿಫ್ಟರ್ ಒಬ್ಬರು ಜಪಾನ್‌ನ ಒಲಿಂಪಿಕ್ಸ್ ತರಬೇತಿ ಶಿಬಿರದಿಂದ ಶುಕ್ರವಾರ ನಾಪತ್ತೆಯಾಗಿದ್ದಾರೆ. ಜಪಾನ್ ಮತ್ತು ಉಗಾಂಡದ ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ.

ನಾಪತ್ತೆಯಾಗಿರುವ ವೇಟ್‌ಲಿಫ್ಟರ್, 20 ವರ್ಷದ ಜೂಲಿಯಸ್ ಸೆಕಿಟೊಲೆಕೊ ಅವರಿಗಾಗಿ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ.

ಇಜುಮಿಸಾನೊದ ಹೋಟೆಲ್‌ನಲ್ಲಿ ತಂಗಿದ್ದ ಸೆಕಿಟೊಲೆಕೊ, ಕೊರೊನಾ ವೈರಸ್ ಪರೀಕ್ಷೆಗೆ ಹಾಜರಾಗಲು ವಿಫಲರಾಗಿದ್ದರು. ಕೋಟಾ ಪದ್ಧತಿಯ ಕಾರಣ ತಾನು ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಆತ ತಿಳಿದಿದ್ದ ಎಂದು ಅಧಿಕಾರಿಗಳು ಹೇಳಿದ್ದಾರೆ.


ನಿಹಾಲ್ ಸರೀನ್ ಟ್ವಿಟರ್ ಚಿತ್ರ

## ಚೆಸ್: ಅಧಿಬನ್ ಪ್ರಗ್ನಾನಂದ, ನಿಹಾಲ್‌ಗೆ ಗೆಲುವು

ಸೋಚಿ, ರಷ್ಯಾ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್‌ಗಳಾದ ಆರ್. ಪ್ರಗ್ನಾನಂದ, ಬಿ. ಅಧಿಬನ್ ಮತ್ತು ನಿಹಾಲ್ ಸರೀನ್ ಅವರು ಫಿಡೆ ಚೆಸ್ ವಿಶ್ವಕಪ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿದ್ದಾರೆ.

15 ವರ್ಷದ ಪ್ರಗ್ನಾನಂದ ಶುಕ್ರವಾರ ನಡೆದ ಪಂದ್ಯದಲ್ಲಿ ಅಮೆರಿಕದ ಅನುಭವಿ ಆಟಗಾರ ಗಾಬ್ರಿಯೆಲ್ ಸರ್ಗಿಸಿಯಾನ್ ಎದುರು ಗೆದ್ದರು. ಎರಡು ಗೇಮ್‌ಗಳ ಮಿನಿ ಪಂದ್ಯದಲ್ಲಿ ಭಾರತದ ಆಟಗಾರ 2–0 ಅಂತರದ ಜಯ ಸಾಧಿಸಿದರು. ಮುಂದಿನ ಸುತ್ತಿನಲ್ಲಿ ಅವರು ಪೋಲೆಂಡ್‌ನ ಮಿಖಾಯಲ್ ಕ್ರಸೆನ್‌ಕೊವ್ ಎದುರು ಸೆಣಸುವರು.


ಅಧಿಬನ್ 2–0ಯಿಂದ ಪರಾಗ್ವೆಯ ನ್ಯೂರಿಸ್ ಡೆಲ್ಗಾಡೊ ರಮಿರೆಜ್‌ಗೆ ಸೋಲುಣಿಸಿದರು. 22 ನಡೆಗಳ ಮೊದಲ ಗೇಮ್‌ನಲ್ಲಿ ಸುಲಭವಾಗಿ ಗೆದ್ದ ಅವರು 58 ನಡೆಗಳ ಎರಡನೇ ಗೇಮ್‌ನಲ್ಲಿ ಪ್ರಯಾಸದಿಂದ ಗೆದ್ದರು.

17 ವರ್ಷದ ನಿಹಾಲ್ ಸರೀನ್ ಸನಾನ್ ಜುಗಿರೊವ್ ಎದುರು 1.5, 0.5 ಅಂತರದಲ್ಲಿ ಗೆಲುವು ಸಾಧಿಸಿದರು. ರಷ್ಯಾದ ಎವ್ಜಿನ್‌ಗೆ ಮಣಿದು ಪಿ. ಇನಿಯನ್ ಹೊರಬಿದ್ದರೆ ಅರವಿಂದ ಚಿದಂಬರಂ ನೊಡೀರ್‌ಬೇಕ್ ವಿರುದ್ಧ ಸೋಲುಂಡರು.

# ಒಲಿಂಪಿಕ್ಸ್: ಅಥ್ಲೆಟಿಕ್ಸ್‌ಗೆ ಭಾರತದಲ್ಲೇ ನಿರ್ಮಿಸಿದ ಕ್ರೀಡಾ ಸಲಕರಣೆಗಳು

ನವದೆಹಲಿ (ಪಿಟಿಐ): ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಬಳಸಲಾಗುವ ಕ್ರೀಡಾ ಸಲಕರಣೆಗಳನ್ನು ಭಾರತದ ಕಂಪನಿಗಳೂ ತಯಾರಿಸಿ ಕೊಡಲಿವೆ. ವಿಶ್ವ ಅಥ್ಲೆಟಿಕ್ಸ್ ಮಂಡಳಿ (ಐಎಎಎಫ್) ಪಟ್ಟಿ ಮಾಡಿರುವ ಆರು ಕಂಪನಿಗಳಲ್ಲಿ ದೇಶದ ಕಂಪನಿಗಳ ಹೆಸರಿದೆ.

ಶಾಟ್ ಪಟ್, ಡಿಸ್ಕಸ್ ಥ್ರೊ ಮತ್ತು ಹ್ಯಾಮರ್ ಥ್ರೊ ಸ್ಪರ್ಧೆಗಳಿಗೆ ಸಲಕರಣೆಗಳನ್ನು ಉತ್ಪಾದಿಸುವವರ ಪಟ್ಟಿಯಲ್ಲಿ ಭಾರತ ಮೂಲದ ಆನಂದ್ ಟ್ರ್ಯಾಕ್ ಆ್ಯಂಡ್ ಫೀಲ್ಡ್ ಇಕ್ವಿಪ್‌ಮೆಂಟ್ (ಎಟಿಇ), ಭಲ್ಲಾ ಇಂಟರ್‌ನ್ಯಾಶನಲ್ ಮತ್ತು ನೆಲ್ಕೊ ಕಂಪನಿಗಳು ಇವೆ. ಶಾಟ್‌ಪಟ್ (7.26 ಕೆಜಿ), ಡಿಸ್ಕಸ್ (2 ಕೆಜಿ) ಮತ್ತು ಹ್ಯಾಮರ್‌ಗಳನ್ನು (7.26 ಕೆಜಿ) ಈ ಕಂಪನಿಗಳು ಒದಗಿಸಲಿವೆ.



‘ನಾವು ಶಾಟ್ ಪುಟ್, ಡಿಸ್ಕಸ್ ಥ್ರೋ ಮತ್ತು ಹ್ಯಾಮರ್ ಥ್ರೋಗಳಲ್ಲಿ ತಲಾ ಆರು ಉಪಕರಣಗಳನ್ನು ಒದಗಿಸುತ್ತಿದ್ದೇವೆ. ಆದ್ದರಿಂದ, ಪುರುಷರು ಮತ್ತು ಮಹಿಳೆಯರ ಸ್ಪರ್ಧೆಗಳಿಗಾಗಿ ನಾವು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಒಟ್ಟು 36 ಉಪಕರಣಗಳನ್ನು ಒದಗಿಸುತ್ತಿದ್ದೇವೆ’ ಎಂದು ಎಟಿಇ ಕಂಪನಿಯ ಆದರ್ಶ್ ಆನಂದ್ ತಿಳಿಸಿದ್ದಾರೆ.

‘1992ರ ಬಾರ್ಸಿಲೋನಾ ಕ್ರೀಡಾಕೂಟದಿಂದ ಇಲ್ಲಿಯವರೆಗೆ ನಮ್ಮ ಉಪಕರಣಗಳು ಬಳಕೆಯಲ್ಲಿವೆ. ವಾಸ್ತವವಾಗಿ, ಅಥ್ಲೆಟಿಕ್ಸ್‌ನೊಂದಿಗಿನ ನಮ್ಮ ಪಯಣವು ಟೋಕಿಯೊದಲ್ಲಿ ನಡೆದ 1991ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಾರಂಭವಾಯಿತು’ ಎಂದು ಅವರು ಹೇಳಿದರು.

# ಟೋಕಿಯೊ ತಲುಪಿದ ಮೀರಾಬಾಯಿ

ಟೋಕಿಯೊ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಮೀರಾಬಾಯಿ ಚಾನು ಅವರು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಶುಕ್ರವಾರ ಟೋಕಿಯೊಗೆ ಬಂದಿಳಿದರು. ಅಮೆರಿಕದಲ್ಲಿ ತರಬೇತಿಯಲ್ಲಿದ್ದ ಅವರು ಅಲ್ಲಿಂದಲೇ ನೇರವಾಗಿ ನಗರಕ್ಕೆ ತಲುಪಿದ್ದು ಸಾಮಾಜಿಕ ತಾಣಗಳಲ್ಲಿ ಚಿತ್ರಗಳನ್ನು ಹಂಚಿಕೊಂಡಿದ್ದಾರೆ.

ಕ್ರೀಡಾಕೂಟದಲ್ಲಿ ಸ್ಪರ್ಧಿಸುತ್ತಿರುವ ಭಾರತದ ಏಕೈಕ ವೇಟ್‌ಲಿಫ್ಟರ್ ಮೀರಾ. ಅವರೊಂದಿಗೆ ರಾಷ್ಟ್ರೀಯ ಕೋಚ್ ವಿಜಯ್ ಶರ್ಮಾ, ಸಹಾಯಕ ಕೋಚ್ ಸಂದೀಪ್ ಕುಮಾರ್, ಇನ್ನೋರ್ವ ತರಬೇತುದಾರ ಪ್ರಮೋದ್ ಶರ್ಮಾ ಮತ್ತು ಫಿಸಿಯೊಥೆರಪಿಸ್ಟ್ ಆಲಾಪ್ ಜಾವಡೇಕರ್ ಕೂಡ ಇದ್ದರು.

49 ಕೆಜಿ ವಿಭಾಗದಲ್ಲಿ ಕಣಕ್ಕಿಳಿಯಲಿರುವ 26 ವರ್ಷದ ಮೀರಾ ಅವರಿಗೆ ಇದು ಎರಡನೇ ಒಲಿಂಪಿಕ್ಸ್.


ಟೋಕಿಯೊ ಕ್ರೀಡಾಗ್ರಾಮದಲ್ಲಿ ಮೀರಾಬಾಯಿ ಚಾನು– ಟ್ವಿಟರ್ ಚಿತ್ರ

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ ವಿವರಣೆ

ಫೈನಲ್‌ನಿಂದ ಎರಡೂ ತಂಡಗಳು ಹೊರಗುಳಿಯುವ ಪರಿಸ್ಥಿತಿ ಬಂದರೆ ಇಬ್ಬರಿಗೂ ಚಿನ್ನದ ಪದಕ ಸಿಗಲಿದೆ. ನಿಯಮಗಳಲ್ಲಿ ಇದಕ್ಕೆ ಅವಕಾಶವಿದೆ ಎನ್ನಲಾಗಿದೆ.

# ಫೈನಲ್ ನಡೆಯದಿದ್ದರೆ ಎರಡೂ ತಂಡಗಳಿಗೆ ಚಿನ್ನ

ಟೋಕಿಯೊ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಕೋವಿಡ್ ಪ್ರಕರಣಗಳ ಕಾರಣದಿಂದ ಫೈನಲ್‌ನಲ್ಲಿ ಒಂದು ತಂಡ ಆಡಲು ಸಾಧ್ಯವಾಗದಿದ್ದರೆ ಪ್ರಶಸ್ತಿ ಸುತ್ತಿಗೆ ತಲುಪಿದ ಎರಡೂ ತಂಡಗಳಿಗೂ ಚಿನ್ನದ ಪದಕ ನೀಡಲಾಗುವುದು ಎಂದು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಶುಕ್ರವಾರ ತಿಳಿಸಿದೆ.

ಆದರೆ ಸೋಂಕು ಪ್ರಕರಣಗಳು ದೃಢಪಟ್ಟರೆ ಸ್ಪರ್ಧೆಗಳಿಂದ ಹಿಂದೆ ಸರಿಯುವ ವಿವೇಚನೆಯು ಆಯಾ ತಂಡದ್ದಾಗಿರಲಿದೆ ಎಂದು ಎಫ್‌ಐಎಚ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಥಿಯರಿ ವೇಲ್ ಹೇಳಿದ್ದಾರೆ.



ಟೋಕಿಯೊ ಕ್ರೀಡಾಕೂಟಕ್ಕಾಗಿ ಎಫ್‌ಐಎಚ್ ರೂಪಿಸಿದ ನಿರ್ದಿಷ್ಟ ಕ್ರೀಡಾ ನಿಯಮಗಳ (ಎಸ್‌ಎಸ್‌ಆರ್) ಪ್ರಕಾರ, ತಂಡವೊಂದು ಗುಂಪು ಹಂತದ ಪಂದ್ಯವನ್ನು ಆಡಲು ಸಾಧ್ಯವಾಗದಿದ್ದರೆ, ಎದುರಾಳಿ ತಂಡಕ್ಕೆ 5–0 ಗೋಲುಗಳ ಅಂತರದ ಗೆಲುವು ಎಂದು ಪರಿಗಣಿಸಲಾಗುತ್ತದೆ. ಒಂದೊಮ್ಮೆ ಎರಡೂ ತಂಡಗಳು ಕಣಕ್ಕಿಳಿಯದಿದ್ದರೆ ಆ ಪಂದ್ಯವನ್ನು ಡ್ರಾ ಎಂದು ಪರಿಗಣಿಸಲಾಗುವುದು. ಆದಾಗ್ಯೂ ತಮಗೆ ಸಾಧ್ಯ ಎನಿಸಿದರೆ ಗುಂಪಿನ ಉಳಿದ ಪಂದ್ಯಗಳನ್ನು ಆ ತಂಡಗಳು ಆಡಬಹುದಾಗಿದೆ.

‘ಎಲ್ಲ ಕ್ರೀಡಾಕೂಟಗಳಿಗಿಂತ ಈ ಬಾರಿಯ ಒಲಿಂಪಿಕ್ಸ್ ಭಿನ್ನವಾಗಿದೆ. ಈ ಕೂಟ ಇತಿಹಾಸದ ಪುಟದಲ್ಲಿ ದಾಖಲಾಗಲಿದೆ. ಸಾರ್ವಜನಿಕರ ಆರೋಗ್ಯ ಅಪಾಯದಲ್ಲಿದೆ ಎಂದು ಕ್ರೀಡಾಪಟುಗಳು ಮತ್ತು ಕೂಟದ ಭಾಗೀದಾರರಿಗೆ ತಿಳಿದಿದೆ’ ಎಂದು ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ವೇಲ್ ನುಡಿದರು.

‘ಸೋಂಕು ಪ್ರಕರಣಗಳಿದ್ದರೂ ಆಡಬಹುದು’: ಆರರಿಂದ ಏಳು ಪ್ರಕರಣಗಳು ದೃಢಪಟ್ಟಿದ್ದರೂ ಆ ತಂಡವು ಪಂದ್ಯದಲ್ಲಿ ಆಡಬಹುದಾಗಿದೆ. ಇಡೀ ತಂಡವೇ ಸೋಂಕಿಗೆ ಒಳಪಟ್ಟಿದ್ದರೆ ಮಾತ್ರ ಹಿಂದೆ ಸರಿಯಬಹುದು. ಆದರೆ ಹಾಗೆ ಆಗುವುದಿಲ್ಲ ಎಂಬುದು ನನ್ನ ಅಭಿಪ್ರಾಯ ಎಂದು ವೇಲ್ ಹೇಳಿದರು.

ಹಾಕಿ ಪಂದ್ಯಗಳ ಆಯೋಜನೆಯ ಕುರಿತು ಇನ್ನೂ ಹಲವು ಸಂದೇಹಗಳು ಮುಂದುವರಿದಿದ್ದು, ಇವುಗಳಿಗೆ ಸ್ಪಷ್ಟತೆ ಸಿಗಬೇಕಿದೆ.

# ಜೊಕೊವಿಚ್ ಸ್ಪರ್ಧೆಗೆ ಸಜ್ಜು

ಬೆಲ್‌ಗ್ರೇಡ್ (ಎಪಿ/ಪಿಟಿಐ): ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ನೊವಾಕ್ ಜೊಕೊವಿಚ್ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುವುದಾಗಿ ಶುಕ್ರವಾರ ಪ್ರಕಟಿಸಿದ್ದಾರೆ. ಇದರೊಂದಿಗೆ ಈ ಕುರಿತು ಇದ್ದ ಸಂದೇಹಗಳಿಗೆ ತೆರೆ ಎಳೆದಿದ್ದಾರೆ.


ಜೊಕೊವಿಚ್

ಈ ಕುರಿತು ಟ್ವೀಟ್ ಮಾಡಿರುವ 34 ವರ್ಷದ ಜೊಕೊವಿಚ್, ಒಲಿಂಪಿಕ್ ಮಹಾಕ್ರೀಡಾ ಕೂಟದಲ್ಲಿ ಸರ್ಬಿಯಾವನ್ನು ಪ್ರತಿನಿಧಿಸಲು ಹೆಮ್ಮೆಯಾಗುತ್ತದೆ ಎಂದಿದ್ದಾರೆ.

‘ಈ ಬಾರಿ ಟೋಕಿಯೊಗೆ ತೆರಳಬೇಕೆ ಎಂಬುದರ ಕುರಿತು ಗೊಂದಲದಲ್ಲಿದ್ದೇನೆ’ ಎಂದು ವಿಂಬಲ್ಡನ್ ಪ್ರಶಸ್ತಿ ಜಯಿಸಿದ ಬಳಿಕ ಜೊಕೊವಿಚ್ ನುಡಿದಿದ್ದರು.

ಫ್ರೆಂಚ್ ಓಪನ್ ಬೆನ್ನಲ್ಲೇ ವಿಂಬಲ್ಡನ್ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲೂ ಪ್ರಶಸ್ತಿ ಗೆದ್ದುಕೊಂಡಿರುವ ಜೊಕೊವಿಚ್ ‘ಗೋಲ್ಡನ್ ಸ್ಲ್ಯಾಮ್’ ಮೇಲೆ ಕಣ್ಣಿಟ್ಟಿದ್ದಾರೆ.

ಈಗಾಗಲೇ ಆಸ್ಟ್ರೇಲಿಯಾ ಓಪನ್, ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್‌ಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿರುವ ಜೊಕೊವಿಚ್ ಅವರು ಟೋಕಿಯೊದಲ್ಲಿ ಮತ್ತು ವರ್ಷದ ಕೊನೆಗೆ ಅಮೆರಿಕ ಓಪನ್‌ನಲ್ಲಿ ಪ್ರಶಸ್ತಿ ಗೆದ್ದರೆ ‘ಚಿನ್ನದ ಸ್ಲ್ಯಾಮ್’ ಸಾಧನೆ ಮಾಡಿದಂತಾಗುತ್ತದೆ. ಈವರೆಗೆ ಜರ್ಮನಿಯ ಆಟಗಾರ್ತಿ ಸ್ಟೆಫಿ ಗ್ರಾಫ್ (1988ರಲ್ಲಿ) ಮಾತ್ರ ಇಂಥ ಅಪೂರ್ವ ಸಾಧನೆಗೆ ಪಾತ್ರರಾಗಿದ್ದಾರೆ. ರೋಜರ್ ಫೆಡರರ್, ರಫೆಲ್ ನಡಾಲ್, ಡಾಮಿನಿಕ್ ಥೀಮ್ ಒಲಿಂಪಿಕ್ಸ್‌ನಿಂದ ಈಗಾಗಲೇ ಹಿಂದೆ ಸರಿದಿದ್ದಾರೆ.


ದೀಪಿಕಾ ಕುಮಾರಿ– ಟ್ವಿಟರ್ ಚಿತ್ರ

# ನಕಾರಾತ್ಮಕ ವಿಚಾರಗಳಿಂದ ದೂರವಿರಲು ಯತ್ನ: ದೀಪಿಕಾ

ಕೋಲ್ಕತ್ತ (ಪಿಟಿಐ): ಹಿಂದಿನ ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಗೆಲ್ಲಲಾಗದ ಯೋಚನೆ ಕಾಡುತ್ತಿದೆ. ಆದರೂ ನಕಾರಾತ್ಮಕ ವಿಚಾರಗಳಿಂದ ದೂರ ಇರಲು ಪ್ರಯತ್ನಿಸುವುದಾಗಿ ಭಾರತದ ಮಹಿಳಾ ಆರ್ಚರಿ ಪಟು ದೀಪಿಕಾ ಕುಮಾರಿ ಹೇಳಿದ್ದಾರೆ.

ರಾಂಚಿಯ 27 ವರ್ಷದ ದೀಪಿಕಾ ಸದ್ಯ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದೊಂದಿಗೆ ಟೋಕಿಯೊ ಕೂಟಕ್ಕೆ ತೆರಳುತ್ತಿದ್ದಾರೆ. 2012 ಲಂಡನ್ ಒಲಿಂಪಿಕ್ಸ್ ವೇಳೆಯಲ್ಲೂ ಅವರು ಮೊದಲ ಸ್ಥಾನದಲ್ಲಿದ್ದರು.

ಲಂಡನ್‌ನಲ್ಲಿ ನಿರೀಕ್ಷೆಗೆ ತಕ್ಕ ಸಾಮರ್ಥ್ಯ ಅವರಿಂದ ಹೊಮ್ಮಿರಲಿಲ್ಲ. ಮೊದಲ ಸುತ್ತಿನಲ್ಲೇ ಸೋಲು ಅನುಭವಿಸಿದ್ದರು. 2016ರ ರಿಯೊ ಕೂಟದಲ್ಲಿ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ವೈಯಕ್ತಿಕ ವಿಭಾಗದಲ್ಲಿ 16ರ ಘಟ್ಟದ ಪಂದ್ಯದಲ್ಲಿ ಮುಗ್ಗರಿಸಿದ್ದ ಅವರು, ತಂಡ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ರಷ್ಯಾ ಎದುರು ಎಡವಿದ್ದರು.

‘ಹಳೆಯ ವಿಚಾರವನ್ನು ಕೆದಕಲು ಹೋಗುವುದಿಲ್ಲ. ಆದರೆ ಅದು ನನ್ನ ಮನಸ್ಸಿಗೆ ಕಾಡಲಿದೆ. ಸ್ವಲ್ಪ ಒತ್ತಡವೂ ಇದೆ’ ಎಂದು ದೀಪಿಕಾ ನುಡಿದರು.

‘ನಕಾರಾತ್ಮಕ ವಿಚಾರಗಳಿಂದ ದೂರ ಇರಲು ಮತ್ತು ಒತ್ತಡ ಕಡಿಮೆ ಮಾಡಿಕೊಳ್ಳಲು ಸಾಧ್ಯವಾದಷ್ಟು ಪ್ರಯತ್ನಿಸುತ್ತೇನೆ. ಗುರಿಯ ಕಡೆಗೆ ಗಮನಹರಿಸುತ್ತೇನೆ’ ಎಂದು ಅವರು ಹೇಳಿದರು.

ದೀಪಿಕಾ ಅವರು ಈ ವರ್ಷ ವಿಶ್ವಕಪ್ ಟೂರ್ನಿಗಳಲ್ಲಿ ವೈಯಕ್ತಿಕ ವಿಭಾಗದಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದುಕೊಂಡಿದ್ದು ಅಮೋಘ ಲಯದಲ್ಲಿದ್ದಾರೆ.

ದೀಪಿಕಾ ಮತ್ತು ಅವರ ಪತಿ ಅತನು ದಾಸ್ ಒಲಿಂಪಿಕ್ಸ್‌ನ ಮಿಶ್ರ ವಿಭಾಗದಲ್ಲಿ ಪದಕ ಜಯಿಸುವ ವಿಶ್ವಾಸ ಮೂಡಿಸಿದ್ದಾರೆ.

# ಕೆಎಸ್‌ಸಿಎ: ಕೋಚ್, ಆಯ್ಕೆ ಸಮಿತಿಯಲ್ಲಿ ಬದಲಾವಣೆ ಇಲ್ಲ

ಬೆಂಗಳೂರು: ರಾಜ್ಯ ಕ್ರಿಕೆಟ್ ಸಂಸ್ಥೆಯು ಎಲ್ಲ ವಿಭಾಗದ ಕೋಚ್‌ಗಳು ಮತ್ತು ಆಯ್ಕೆ ಸಮಿತಿಯನ್ನು ಬದಲಿಸದೇ ಇರಲು ನಿರ್ಧರಿಸಿದೆ. ಈಗಿರುವವರನ್ನೇ ಮುಂದಿನ ಕ್ರಿಕೆಟ್ ಋತುವಿಗೂ ಮುಂದುವರಿಸಲು ಶುಕ್ರವಾರ ನಡೆದ ಆಡಳಿತ ಸಮಿತಿಯಲ್ಲಿ ತೀರ್ಮಾನಿಸಲಾಯಿತು ಎಂದು ಪ್ರಕಟಣೆ ತಿಳಿಸಿದೆ.

**ಪುರುಷರ ತಂಡದ ಆಯ್ಕೆ ಸಮಿತಿ:** ಫಜಲ್ ಆರ್. ಖಲೀಲ್ (ಅಧ್ಯಕ್ಷ), ಬಿ.ಸಿದ್ದರಾಮು, ಆನಂದ ಪಿ.ಕಟ್ಟಿ, ರಮೇಶ್ ಹೆಜಮಾಡಿ (ಸದಸ್ಯರು); ಕೋಚ್: ಕೆ.ಯರೇಗೌಡ, ಬೌಲಿಂಗ್ ಕೋಚ್: ಎಸ್.ಅರವಿಂದ.

**ಮಹಿಳೆಯರ ಆಯ್ಕೆ ಸಮಿತಿ:** ಡಿ.ಜಯಶ್ರೀ (ಅಧ್ಯಕ್ಷೆ), ಮುಕ್ತ ಆರ್. ಅಳಗೇರಿ, ಲೀನಾ ಪ್ರಸಾದ್, ಪಿ.ಜೆ. ಹೇಮಲತ (ಸದಸ್ಯರು); ಕೋಚ್: ಮಮತ ಮಾಬೆನ್, ಸಹಾಯಕ ಕೋಚ್: ರಚಲ್ ವಿನೋದ್ ಶೆಟ್ಟಿ.

**23 ವರ್ಷದೊಳಗಿನ ಬಾಲಕರ ಆಯ್ಕೆ ಸಮಿತಿ:** ಫಜಲ್ ಆರ್. ಖಲೀಲ್ (ಅಧ್ಯಕ್ಷ), ಕೆ.ಎಲ್.ಅಶ್ವತ್ಥ್, ತೇಜಪಾಲ್ ಕೊಠಾರಿ, ರಘುತ್ತಮ್ ವನಲಿ (ಸದಸ್ಯರು), ಎಂ.ಎಸ್. ರವೀಂದ್ರ (ಮೈಸೂರು ವಲಯದ ಆಹ್ವಾನಿತರು); ಬ್ಯಾಟಿಂಗ್ ಕೋಚ್: ದೀಪಕ್ ಚೌಗುಲೆ, ಬೌಲಿಂಗ್ ಕೋಚ್: ಜಿ.ಚೈತ್ರ.

**19 ವರ್ಷದೊಳಗಿನ ಬಾಲಕರ ಆಯ್ಕೆ ಸಮಿತಿ:** ಆನಂದ ಪಿ.ಕಟ್ಟಿ (ಅಧ್ಯಕ್ಷ), ಎ.ಆರ್.ಮಹೇಶ್, ಸಿ.ರಾಘವೇಂದ್ರ, ಸಂತೋಷ್ ಕುಮಾರ್ ವಿ (ಸದಸ್ಯರು); ಬ್ಯಾಟಿಂಗ್ ಕೋಚ್: ನಿಖಿಲ್ ಹಲ್ದಿಪುರ್, ಬೌಲಿಂಗ್ ಕೋಚ್: ಎನ್.ಸಿ.ಅಯ್ಯಪ್ಪ.

**16 ಮತ್ತು 14 ವರ್ಷದೊಳಗಿನ ಬಾಲಕರ ಆಯ್ಕೆ ಸಮಿತಿ:** ಎಚ್. ಸುರೇಂದ್ರ (ಅಧ್ಯಕ್ಷ), ಎಂ.ವಿ. ಪ್ರಶಾಂತ್, ಎಚ್.ಚಂದ್ರಶೇಖರ್, ಎಸ್.ಪ್ರಕಾಶ್ (ಸದಸ್ಯರು), ಕೆ.ಶಶಿಧರ್ (ತುಮಕೂರು ವಲಯದಿಂದ ಆಹ್ವಾನಿತರು); ಕೋಚ್‌ಗಳು: ಸಿ.ರಘು ಮತ್ತು ರಾಜಶೇಖರ್ ಶಾನಬಾಲ್

**ಜೂನಿಯರ್ ಬಾಲಕಿಯರ ಆಯ್ಕೆ ಸಮಿತಿ:** ಚಂದ್ರಿಕ ಶ್ರೀಧರ್ (ಅಧ್ಯಕ್ಷೆ), ಆಶ್ರಯಿ ರಾಮ್, ಅನುರಾಧ ಪ್ರಸಾದ್, ನಿವೇದಿತ ರೇಷ್ಮೆ (ಸದಸ್ಯರು); ಕೋಚ್ ಲಕ್ಷ್ಮಿ ಹರಿಹರನ್.

ಎಲ್ಲ ವಿಭಾಗದ ಆಯ್ಕೆ ಸಮಿತಿಗೆ ಕಾರ್ಯದರ್ಶಿ ಮತ್ತು ಸಂಯೋಜಕರು: ಸಂತೋಷ್ ಮೆನನ್.

## ಬೆಂಗಳೂರು ಎಫ್‌ಸಿಗೆ ಪ್ರಿನ್ಸ್ ಇಬಾರ

ಬೆಂಗಳೂರು (ಪಿಟಿಐ): ಐಎಸ್‌ಎಲ್ ನಲ್ಲಿ ಆಡುವ ಬಿಎಫ್‌ಸಿ ತಂಡವು ಕಾಂಗೊ ಆಟಗಾರ ಪ್ರಿನ್ಸ್ ವಿನ್ನಿ ಇಬಾರ ಡೋನಿಯಾಮ ಅವರನ್ನು ಸೇರಿಸಿಕೊಂಡಿದೆ. ಇತ್ತೀಚೆಗೆ ಲೀಗ್ 2 ಟೂರ್ನಿಯಲ್ಲಿ ಶಟುವುರಕ್ಸ್ ತಂಡದಲ್ಲಿ ಆಡಿದ್ದ ಪ್ರಿನ್ಸ್, ಬೆಂಗಳೂರು ತಂಡದೊಂದಿಗೆ ಎರಡು ವರ್ಷಗಳ ಅವಧಿಗೆ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಹಲವು ಲೀಗ್‌ಗಳಲ್ಲಿ ಆಡಿರುವ ಪ್ರಿನ್ಸ್, 13 ಪಂದ್ಯಗಳಲ್ಲಿ ಕಾಂಗೊ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದಾರೆ. ನಾಲ್ಕು ಗೋಲುಗಳನ್ನು ಗಳಿಸಿದ್ದಾರೆ.

# ‘ಎಲ್ಲ ಸಂದರ್ಭದಲ್ಲಿ ಮಾಸ್ಕ್ ಧರಿಸಲು ಆಗುವುದಿಲ್ಲ’


ಸೌರವ್ ಗಂಗೂಲಿ

ಮಸ್ಕತ್ (ಪಿಟಿಐ): ಇಂಗ್ಲೆಂಡ್‌ನಲ್ಲಿ ಆರೋಗ್ಯ ಶಿಷ್ಟಾಚಾರದಲ್ಲಿ ಕೆಲವು ಸಡಿಲಿಕೆಗಳನ್ನು ನೀಡಲಾಗಿದೆ. ಆದ್ದರಿಂದ ಎಲ್ಲ ಸಮಯದಲ್ಲಿಯೂ ಮಾಸ್ಕ್ ಧರಿಸಬೇಕಾಗಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

ಇಂಗ್ಲೆಂಡ್‌ನಲ್ಲಿರು ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ರಿಷಭ್ ಪಂತ್ ಅವರಿಗೆ ಕೊರೊನಾ ಸೋಂಕು ಇರುವುದು ಖಚಿತವಾಗಿದೆ. ಅವರನ್ನು ಲಂಡನ್‌ನಲ್ಲಿ ಪ್ರತ್ಯೇಕವಾಸದಲ್ಲಿರಿಸಲಾಗಿದೆ. ಅವರಲ್ಲದೆ ಥ್ರೋಡೌನ್ ಪರಿಣತ ದಯಾನಂದ್ ಗರಣಿ ಅವರಿಗೂ ಸೋಂಕು ಇದೆ. ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ, ಬ್ಯಾಟ್ಸ್‌ಮನ್ ಅಭಿಮನ್ಯು ಈಶ್ವರನ್ ಮತ್ತು ಬೌಲಿಂಗ್ ಕೋಚ್ ಭರತ್ ಅರುಣ್ ಅವರನ್ನೂ ಕ್ವಾರಂಟೈನ್ ಮಾಡಲಾಗಿದೆ.

ಈ ವಿಷಯದ ಕುರಿತು ಪ್ರತಿಕ್ರಿಯಿಸಿರುವ ಗಂಗೂಲಿ, ‘ಇಂಗ್ಲೆಂಡ್‌ನಲ್ಲಿ ನಡೆದ ಯುರೊ ಕಪ್ ಫುಟ್‌ಬಾಲ್ ಪಂದ್ಯಗಳು ಮತ್ತು ವಿಂಬಲ್ಡನ್ ಟೆನಿಸ್ ಟೂರ್ನಿಗಳ ವೀಕ್ಷಣೆಗೆ ಪ್ರೇಕ್ಷಕರಿಗೆ ಅವಕಾಶ ನೀಡಲಾಗಿದೆ. ಅಲ್ಲಿ ನಿಯಮಗಳು ಬದಲಾಗಿವೆ. ಅಷ್ಟಕ್ಕೂ ಎಲ್ಲರೂ ಎಲ್ಲ ಸಂದರ್ಭದಲ್ಲಿ ನಿರಂತರವಾಗಿ ಮಾಸ್ಕ್ ಧರಿಸಲಾಗುವುದಿಲ್ಲ’ ಎಂದರು.

‘ಯಾವುದೇ ಆತಂಕಪಡಬೇಕಾದ ಅಗತ್ಯವಿಲ್ಲ. ಎಲ್ಲರೂ ಗುಣಮುಖರಾಗುತ್ತಾರೆ’ ಎಂದು ಗಂಗೂಲಿ ಹೇಳಿದರು.

ಟಿ20 ವಿಶ್ವಕಪ್ ಆಯೋಜನೆಗೆ ಸಂಬಂಧಿಸಿದ ಸಭೆಯಲ್ಲಿ ಪಾಲ್ಗೊಳ್ಳಲು ಗಂಗೂಲಿ ಮಸ್ಕತ್‌ಗೆ ತೆರಳಿದ್ದಾರೆ.

# ಒಪ್ಪಂದ ನವೀಕರಣ: ಮೆಸ್ಸಿ ಸಿದ್ಧತೆ

ಬಾರ್ಸಿಲೋನಾ (ಎಪಿ): ಅರ್ಜೆಂಟೀನಾ ಫುಟ್‌ಬಾಲ್ ತಾರೆ ಲಯೊನೆಲ್ ಮೆಸ್ಸಿ ಅವರು ಬಾರ್ಸಿಲೋನಾ ಕ್ಲಬ್ ಜೊತೆಗೆ ಹೊಸ ಒಪ್ಪಂದ ಮಾಡಿಕೊಳ್ಳುವ ಸನ್ನಾಹದಲ್ಲಿದ್ದಾರೆ. ಈ ಸ್ಪ್ಯಾನಿಷ್ ಕ್ಲಬ್ ಜೊತೆ ಮೆಸ್ಸಿ ಅವರು ವೃತ್ತಿಜೀವನದ ಕೊನೆಯವರೆಗೆ ಮುಂದುವರಿಯುವ ಸಾಧ್ಯತೆಯಿದೆ.

ಬಾರ್ಸಿಲೋನಾ ಕ್ಲಬ್ ಮತ್ತು ಮೆಸ್ಸಿ ನಡುವಿನ ಮಾತುಕತೆಗಳ ಬಗ್ಗೆ ಬಲ್ಲ ಮೂಲಗಳು ಶುಕ್ರವಾರ ಅಸೋಸಿಯೇಟೆಡ್ ಪ್ರೆಸ್‌ಗೆ ಮಾಹಿತಿ ನೀಡಿವೆ. ಕ್ಲಬ್‌ನ ಐದು ವರ್ಷಗಳ ಒಪ್ಪಂದವನ್ನು ತನ್ನ ಹಿಂದಿನ ವೇತನದ ಶೇಕಡಾ 50ರಷ್ಟಕ್ಕೆ ಸ್ವೀಕರಿಸಲು ಮೆಸ್ಸಿ ಸಜ್ಜಾಗಿದ್ದಾರೆ ಎಂದು ತಿಳಿದುಬಂದಿದೆ.

ಮೆಸ್ಸಿ ಮೊದಲು 2017ರಲ್ಲಿ ಈ ಕ್ಲಬ್ ಜೊತೆ ಮಾಡಿಕೊಂಡಿದ್ದರು.

### ಯುಎಇಯಲ್ಲಿ ಅಕ್ಟೋಬರ್ 17ರಿಂದ ಟೂರ್ನಿ: ಗುಂಪುಗಳ ಮಾಹಿತಿ ಪ್ರಕಟಿಸಿದ ಐಸಿಸಿ

# ಟಿ20 ವಿಶ್ವಕಪ್: ಭಾರತ–ಪಾಕ್ ಹಣಾಹಣಿ

ದುಬೈ(ಪಿಟಿಐ): ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ತಂಡಗಳು ಅಕ್ಟೋಬರ್‌ನಲ್ಲಿ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಒಂದೇ ಗುಂಪಿನಲ್ಲಿ ಕಣಕ್ಕಿಳಿಯಲಿವೆ.

ಶುಕ್ರವಾರ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ವಿಶ್ವಕಪ್ ಟೂರ್ನಿಯ ಗುಂಪುಗಳನ್ನು ಪ್ರಕಟಿಸಿದೆ. ಸೂಪರ್ 12ರ ಹಂತದ ಎರಡನೇ ಗುಂಪಿನಲ್ಲಿ ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕ್ ಸ್ಥಾನ ಪಡೆದಿವೆ.

ಭಾರತದಲ್ಲಿ ಕೋವಿಡ್ ಪ್ರಕರಣಗಳ ಹೆಚ್ಚಳದಿಂದಾಗಿ ಕ್ರಿಕೆಟ್ ಚಟುವಟಿಕೆಗಳನ್ನು ಮೇ ತಿಂಗಳಿನಿಂದ ಸ್ಥಗಿತಗೊಳಿಸಲಾಗಿತ್ತು. ಅಕ್ಟೋಬರ್‌ನಲ್ಲಿ ಭಾರತದಲ್ಲಿಯೇ ನಡೆಯಬೇಕಿದ್ದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಯುಎಇಗೆ ಸ್ಥಳಾಂತರಿಸಿದೆ. ಅಕ್ಟೋಬರ್ 17 ರಿಂದ ನವೆಂಬರ್ 14ರವರೆಗೆ ಟೂರ್ನಿ ನಡೆಯುವುದು.

ಸೂಪರ್ 12 ಗುಂಪಿಗೆ ಅರ್ಹತೆ ಗಳಿಸಲು ರೌಂಡ್ ಒನ್ ನಡೆಯಲಿದೆ. ಅದರಲ್ಲಿ ಎಂಟು ತಂಡಗಳು ಮುಖಾಮುಖಿಯಾಗಲಿವೆ. ಎರಡು ಗುಂಪುಗಳಲ್ಲಿ ತಲಾ ನಾಲ್ಕು ತಂಡಗಳು ಆಡಲಿವೆ. ‘ಎ’ ಗುಂಪಿನಲ್ಲಿ ಶ್ರೀಲಂಕಾ, ಐರ್ಲೆಂಡ್, ಹಾಲೆಂಡ್, ನಮೀಬಿಯಾ, ಬಿ ಗುಂಪಿನಲ್ಲಿ ಬಾಂಗ್ಲಾದೇಶ, ಸ್ಕಾಟ್ಲೆಂಡ್, ಪಪುವಾ ನ್ಯೂಗಿನಿ ಮತ್ತು ಒಮನ್ ತಂಡಗಳಿವೆ. ಎರಡೂ ಗುಂಪುಗಳಲ್ಲಿ ಅಗ್ರಸ್ಥಾನ ಗಳಿಸುವ ತಲಾ ಎರಡು ತಂಡಗಳು ಸೂಪರ್ 12ರ ಸುತ್ತಿಗೆ ಪ್ರವೇಶಿಸಲಿವೆ.

'ಸೂಪರ್ 12'ರ ಹಂತದಲ್ಲಿ ಎರಡು ಗುಂಪುಗಳಿವೆ. ತಲಾ ಆರು ತಂಡಗಳು ಈ ಗುಂಪುಗಳಲ್ಲಿವೆ. ಒಂದನೇ ಗುಂಪಿನಲ್ಲಿ ಇಂಗ್ಲೆಂಡ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ವೆಸ್ಟ್‌ಇಂಡೀಸ್ ಮತ್ತು ಅರ್ಹತಾ ಸುತ್ತಿನ 'ಎ' ಗುಂಪಿನ ವಿಜೇತ ತಂಡ ಮತ್ತು ಬಿ ಗುಂಪಿನ ರನ್ನರ್‌-ಅಪ್ ತಂಡಗಳು ಕಾಣಿಸಿಕೊಳ್ಳಲಿವೆ.

ಅದೇ ರೀತಿ ಎರಡನೇ ಗುಂಪಿನಲ್ಲಿ ಭಾರತ, ಪಾಕಿಸ್ತಾನ, ನ್ಯೂಜಿಲೆಂಡ್, ಅಫ್ಗಾನಿಸ್ತಾನ, ಅರ್ಹತಾ ಸುತ್ತಿನ ಬಿ ಗುಂಪಿನ ವಿಭಾಗದ ವಿಜೇತ ತಂಡ ಮತ್ತುಎ ಗುಂಪು ವಿಭಾಗದ ರನ್ನರ್‌-ಅಪ್ ತಂಡಗಳು ಆಡಲಿವೆ.

**ಐಸಿಸಿ ಟ್ವೆಂಟಿ-20 ವಿಶ್ವ ಕಪ್ ತಂಡಗಳ ವಿಂಗಡಣೆ ಇಂತಿದೆ:**

**ಅರ್ಹತಾ ಟೂರ್ನಿ:** ಗುಂಪು ಎ: ಶ್ರೀಲಂಕಾ, ಐರ್ಲೆಂಡ್, ಹಾಲೆಂಡ್, ನಮೀಬಿಯಾ ಗುಂಪು ಬಿ: ಬಾಂಗ್ಲಾದೇಶ, ಸ್ಕಾಟ್ಲೆಂಡ್, ಪಪುವಾ ನ್ಯೂ ಗಿನಿ, ಒಮಾನ್

**ಸೂಪರ್ 12: ಗುಂಪು 1:** ಇಂಗ್ಲೆಂಡ್, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ವೆಸ್ಟ್‌ಇಂಡೀಸ್, ಎ1 ಮತ್ತು ಬಿ2. ಗುಂಪು 2: ಭಾರತ, ಪಾಕಿಸ್ತಾನ, ನ್ಯೂಜಿಲೆಂಡ್, ಅಫ್ಗಾನಿಸ್ತಾನ, ಎ2 ಮತ್ತು ಬಿ1.


ಶತಕ ಗಳಿಸಿದ ಲಿಟನ್ ದಾಸ್ ಸಂಭ್ರಮ –ಪಿಟಿಐ ಚಿತ್ರ

# ಕ್ರಿಕೆಟ್: ಬಾಂಗ್ಲಾದೇಶ ತಂಡಕ್ಕೆ ಭಾರಿ ಜಯ

ಹರಾರೆ (ಎಎಫ್‌ಪಿ): ಆರಂಭಿಕ ಬ್ಯಾಟ್ಸ್‌ಮನ್ ಮತ್ತು ವಿಕೆಟ್ ಕೀಪರ್ ಲಿಟನ್ ದಾಸ್ ಅವರ ಅಮೋಘ ಶತಕ (102; 114 ಎಸೆತ, 8 ಬೌಂಡರಿ) ಮತ್ತು ಎಡಗೈ ಸ್ಪಿನ್ನರ್ ಶಕೀಬ್ ಅಲ್ ಹಸನ್ ಅವರ ಪರಿಣಾಮಕಾರಿ ದಾಳಿಯ ನೆರವಿನಿಂದ ಬಾಂಗ್ಲಾದೇಶ ತಂಡ ಜಿಂಬಾಬ್ವೆಯನ್ನು ಭಾರಿ ಅಂತರದಿಂದ ಮಣಿಸಿತು.

ಶುಕ್ರವಾರ ನಡೆದ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ತಂಡ 155 ರನ್‌ಗಳ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ಒಂಬತ್ತು ವಿಕೆಟ್‌ಗಳಿಗೆ 276 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ಜಿಂಬಾಬ್ವೆ ಒಂಬತ್ತು ವಿಕೆಟ್‌ಗಳಿಗೆ 121 ರನ್ ಗಳಿಸಿತು. ಗಾಯಗೊಂಡ ತಿಮಿಸೆನ್ ಮರುಮಾ ಅವರು ಬ್ಯಾಟಿಂಗ್‌ಗೆ ಇಳಿದಿರಲಿಲ್ಲ.

**ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ:** 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 276 (ಲಿಟನ್ ದಾಸ್ 102, ಮಹಮ್ಮದುಲ್ಲ ರಿಯಾದ್ 33, ಅಫೀಫ್ ಹೊಸೇನ್ 45, ಮೆಹದಿ ಹಸನ್ ಮಿರಾಜ್ 26; ಮುಜರಬಾನಿ 47ಕ್ಕೆ2, ಚಟಾರ 49ಕ್ಕೆ1, ಗವಾರ್ 61ಕ್ಕೆ2, ಜೊಂಗ್ವೆ 51ಕ್ಕೆ3); **ಜಿಂಬಾಬ್ವೆ:** 28.5 ಓವರ್‌ಗಳಲ್ಲಿ 121ಕ್ಕೆ ಆಲೌಟ್ (ಟೇಲರ್ 24, ಚಕಾಬ್ವ 54; ತಸ್ಕಿನ್ 22ಕ್ಕೆ1, ಸೈಫುದ್ದೀನ್ 23ಕ್ಕೆ1, ಶಕೀಬ್ 30ಕ್ಕೆ5, ಶೊರಿಫುಲ್ 28ಕ್ಕೆ1). ಫಲಿತಾಂಶ: ಬಾಂಗ್ಲಾದೇಶಕ್ಕೆ 155 ರನ್‌ಗಳ ಜಯ; 3 ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ. ಪಂದ್ಯಶ್ರೇಷ್ಠ: ಲಿಟನ್ ದಾಸ್.

### ಭಾರತ ಎದುರಿನ ಏಕದಿನ, ಟಿ20 ಸರಣಿಗೆ ಶ್ರೀಲಂಕಾ ತಂಡ ಪ್ರಕಟ

# ಪೆರೇರ ಬದಲಿಗೆ ಶನಕ ನಾಯಕ


ದಸುನ್ ಶನಕ –ರಾಯಿಟರ್ಸ್ ಚಿತ್ರ

ಕೊಲಂಬೊ (ರಾಯಿಟರ್ಸ್): ದಸುನ್ ಶನಕ, ಭಾರತದ ಎದುರಿನ ನಿಗದಿತ ಓವರ್‌ಗಳ ಕ್ರಿಕೆಟ್ ಸರಣಿಯಲ್ಲಿ ಶ್ರೀಲಂಕಾ ತಂಡವನ್ನು ಮುನ್ನಡೆಸುವರು. ಏಕದಿನ ಮತ್ತು ಟಿ20 ಸರಣಿಗಳಿಗೆ 25 ಆಟಗಾರರ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದ್ದು ಗಾಯಗೊಂಡ ಕುಶಲ್ ಪೆರೇರ ಅವರನ್ನು ಕೈಬಿಡಲಾಗಿದೆ.

ಮೇ ತಿಂಗಳಲ್ಲಿ ಕುಶಲ್ ಪೆರೇರ ತಂಡದ ನಾಯಕನಾಗಿ ನೇಮಕವಾಗಿದ್ದರು. ಅವರ ನೇತೃತ್ವದಲ್ಲಿ ಶ್ರೀಲಂಕಾ ಆಡಿದ ಮೂರು ಸರಣಿಗಳಲ್ಲೂ ಸೋಲು ಕಂಡಿತ್ತು. ಈ ಹಿನ್ನೆಲೆಯಲ್ಲಿ ಶನಕ ಹೆಗಲಿಗೆ ನಾಯಕತ್ವದ ಹೊಣೆ ಹೊರಿಸುವ ಸಾಧ್ಯತೆ ಇದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದ್ದವು. ಶನಕ, ಐದು ವರ್ಷಗಳಲ್ಲಿ ಲಂಕಾ ತಂಡಕ್ಕೆ ನೇಮಕವಾಗುತ್ತಿರುವ 10ನೇ ನಾಯಕ.

‘ಗಾಯಗೊಂಡಿರುವ ಕುಶಲ್ ಪೆರೇರ ಅವರಿಗೆ ಭಾರತ ಎದುರಿನ ಏಕದಿನ ಮತ್ತು ಟಿ20 ಸರಣಿಯಲ್ಲಿ ಪಾಲ್ಗೊಳ್ಳಲು ಆಗುತ್ತಿಲ್ಲ’ ಎಂದು ತಂಡವನ್ನು ಪ್ರಕಟಿಸುವ ಮೊದಲು ಶ್ರೀಲಂಕಾ ಕ್ರಿಕೆಟ್ ಹೊರಡಿಸಿದ್ದ ಪ್ರಕಟಣೆಯಲ್ಲಿ ತಿಳಿಸಿತ್ತು.

ಭಾರತ ಎದುರಿನ ಸರಣಿ ಭಾನುವಾರ ನಡೆಯುವ ಮೊದಲ ಏಕದಿನ ಪಂದ್ಯದೊಂದಿಗೆ ಆರಂಭವಾಗಲಿದೆ. ಅಭ್ಯಾಸ ನಡೆಸುತ್ತಿದ್ದ ವೇಳೆ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಕುಶಲ್ ಪೆರೇರ ಅವರ ಬಲಭಾಗದ ಭುಜಕ್ಕೆ ಗಾಯ ಆಗಿತ್ತು. ಇಂಗ್ಲೆಂಡ್‌ನಲ್ಲಿ ಬಯೊಬಬಲ್ ನಿಯಮಗಳನ್ನು ಉಲ್ಲಂಘಿಸಿದ ಕಾರಣ ತಂಡದ ಮತ್ತೊಬ್ಬ ವಿಕೆಟ್ ಕೀಪರ್ ನಿರೋಷನ್ ಡಿಕ್ವೆಲ್ಲಾ ಅವರ ಮೇಲೆ ನಿಷೇಧ ಹೇರಲಾಗಿದೆ. ಹೀಗಾಗಿ ಯುವ ವಿಕೆಟ್ ಕೀಪರ್‌ಗಳಾದ ಮಿನೋದ್ ಭಾನುಕ ಲಾಹಿರು ಉದರ ಅವರಿಗೆ ಅವಕಾಶ ನೀಡಲಾಗಿದೆ. ಅಭ್ಯಾಸದ ಸಂದರ್ಭದಲ್ಲಿ ಎಡಗಾಲಿನ ಹಿಮ್ಮಡಿ ಉಳುಕಿದ ಕಾರಣದಿಂದ ಎಡಗೈ ವೇಗಿ ಬಿನುರ ಫರ್ನಾಂಡೊ ಏಕದಿನ ತಂಡಕ್ಕೆ ಲಭ್ಯರಿಲ್ಲ. ಟಿ20 ಸರಣಿಗೆ ಅವರನ್ನು ಪರಿಗಣಿಸಲಾಗಿದೆ.

ವಿರಾಟ್ ಕೊಹ್ಲಿ ನೇತೃತ್ವದ ಭಾರತ ತಂಡ ಇಂಗ್ಲೆಂಡ್ ಪ್ರವಾಸದಲ್ಲಿದ್ದು ಆತಿಥೇಯರ ಎದುರಿನ ಟೆಸ್ಟ್ ಸರಣಿ ಆಗಸ್ಟ್ ನಾಲ್ಕರಿಂದ ನಡೆಯಲಿದೆ. ಆರಂಭಿಕ ಬ್ಯಾಟ್ಸ್‌ಮನ್ ಶಿಖರ್ ಧವನ್ ನೇತೃತ್ವದ ಎರಡನೇ ತಂಡವನ್ನು ಶ್ರೀಲಂಕಾಕ್ಕೆ ಕಳುಹಿಸಲಾಗಿದೆ.

ಶ್ರೀಲಂಕಾ ತಂಡ: ದಸುನ್ ಶನಕ (ನಾಯಕ), ಧನಂಜಯ ಡಿ‘ಸಿಲ್ವ, ಆವಿಷ್ಕ ಫರ್ನಾಂಡೊ, ಭಾನುಕ ರಾಜಪಕ್ಸ, ಪಾತುಮ್ ನಿಸಾಂಕ, ಚರಿತ ಅಸಲಂಕ, ವನಿಂದು ಹಸರಂಗ, ಆಶೆನ್ ಬಂಡಾರ, ಮಿನೋದ್ ಭಾನುಕ, ಲಾಹಿರು ಉದರ, ರಮೇಶ್ ಮೆಂಡಿಸ್, ಚಮಿಕ ಕರುಣರತ್ನೆ, ಬಿನುರ ಫರ್ನಾಂಡೊ, ದುಷ್ಮಂತ ಚಮೀರ, ಲಕ್ಷಣ್ ಸಂಡಗನ್, ಅಕಿಲ ಧನಂಜಯ, ಶಿರಾನ್ ಫರ್ನಾಂಡೊ, ಧನಂಜಯ ಲಕ್ಷಣ್, ಇಶಾನ್ ಜಯರತ್ನೆ, ಪ್ರವೀಣ್ ಜಯವಿಕ್ರಮ, ಅಸಿತ ಫರ್ನಾಂಡೊ, ಕಾಸುನ್ ರಜಿತ, ಲಾಹಿರು ಕುಮಾರ, ಇಸುರು ಉಡಾನ.

# ಕುಲದೀಪ್‌ಗೆ ರಾಜು ಸಲಹೆ

ಮುಂಬೈ (ಪಿಟಿಐ): ಸ್ಪಿನ್ನರ್ ಕುಲದೀಪ್ ಯಾದವ್ ತಮ್ಮ ಸಮಸ್ಯೆಗೆ ತಾವೇ ಪರಿಹಾರ ಕಂಡುಕೊಳ್ಳಬೇಕು. ಯಾಕೆಂದರೆ ಇನ್ನು ಯಾವುದೇ ಪಂದ್ಯದಲ್ಲಿಯೂ ವಿಕೆಟ್ ಹಿಂದೆ ಮಹೇಂದ್ರಸಿಂಗ್ ಧೋನಿ ಇರುವುದಿಲ್ಲ ಎಂದು ಮಾಜಿ ಸ್ಪಿನ್ನರ್ ವೆಂಕಟಪತಿ ರಾಜು ಹೇಳಿದ್ದಾರೆ.

ಚೈನಾಮೆನ್ ಬೌಲರ್ ಕುಲದೀಪ್ ಅವರಿಗೆ ಬೌಲಿಂಗ್ ಮಾಡುವಾಗ ವಿಕೆಟ್‌ಕೀಪರ್ ಆಗಿದ್ದ ಮಹೇಂದ್ರಸಿಂಗ್ ಧೋನಿ ಹಲವು ಬಾರಿ ಸಲಹೆ ಕೊಡುತ್ತಿದ್ದರು. ಅದನ್ನು ಪಾಲಿಸುತ್ತಿದ್ದ ಕುಲದೀಪ್ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ, ಈಚೆಗೆ ಅವರು ಲಯದಲ್ಲಿಲ್ಲ. ಅದರಿಂದಾಗಿ ಟೆಸ್ಟ್ ತಂಡಕ್ಕೆ ಆಯ್ಕೆಯಾಗಿಲ್ಲ.

ಈ ಕುರಿತು ಮಾತನಾಡಿರುವ ರಾಜು, ‘ಶ್ರೀಲಂಕಾದ ಪಿಚ್‌ಗಳಲ್ಲಿ ಚೆಂಡು ನಿಧಾನಗತಿಯಲ್ಲಿ ಚಲಿಸುತ್ತದೆ. ಕುಲದೀಪ್‌ಗೆ ಇಂತಹ ಪಿಚ್‌ಗಳು ಅನುಕೂಲಕರ. ಐಪಿಎಲ್ ಮತ್ತು ಟಿ20 ಪಂದ್ಯಗಳು ನಡೆಯಲಿರುವ ಯುಎಇಯ ಪಿಚ್‌ಗಳು ಶುಷ್ಕವಾಗಿದ್ದು ಸ್ಪಿನ್ ಸ್ನೇಹಿಯಾಗಿರುತ್ತವೆ‘ ಎಂದರು.

‘ಕುಲದೀಪ್ ಆಡುವಷ್ಟು ವರ್ಷಗಳವರಗೆ ಧೋನಿಯೇ ಇರುತ್ತಾರಾ? ಈ ವಿಷಯವನ್ನು ಕುಲದೀಪ್ ಅರಿಯಬೇಕು. ತಮ್ಮ ಸಮಸ್ಯೆಗೆ ಪರಿಹಾರವನ್ನು ತಾವೇ ಕಂಡುಕೊಳ್ಳಬೇಕು‘ ಎಂದರು.

## ಭುವನೇಶ್ವರ್‌ಗೆ ಟೆಸ್ಟ್ ಕ್ರಿಕೆಟ್‌ಗೆ ಮರಳುವ ಭರವಸೆ

ಕೊಲಂಬೊ (ಪಿಟಿಐ): ‘ಎಲ್ಲ ಮಾದರಿಯ ಕ್ರಿಕೆಟ್ ಕೂಡ ಇಷ್ಟ. ಯಾವುದೇ ಮಾದರಿಗೆ ಹೆಚ್ಚು ಆದ್ಯತೆ ನೀಡಲಿಲ್ಲ’ ಎಂದು ಹೇಳಿರುವ ಭಾರತದ ವೇಗದ ಬೌಲರ್ ಭುವನೇಶ್ವರ್ ಕುಮಾರ್ ‘ಟೆಸ್ಟ್ ಕ್ರಿಕೆಟ್‌ಗೆ ಮರಳುವ ಭರವಸೆ ಇದೆ’ ಎಂದು ತಿಳಿಸಿದ್ದಾರೆ.

‘ಟೆಸ್ಟ್ ಪಂದ್ಯದಲ್ಲಿ ಆಡಲು ಕರೆ ಬಂದರೆ ತಂಡಕ್ಕೆ ನನ್ನಿಂದಾಗುವ ಕಾಣಿಕೆ ನೀಡಲು ಸಿದ್ಧ’ ಎಂದು ಶ್ರೀಲಂಕಾ ಎದುರಿನ ಏಕದಿನ ಕ್ರಿಕೆಟ್‌ಗೆ ಸಜ್ಜಾಗುತ್ತಿರುವ ಭುವನೇಶ್ವರ್ ಹೇಳಿದರು. 2018ರಲ್ಲಿ ಭಾರತ ತಂಡ ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಂಡಿದ್ದಾಗ ಭುವನೇಶ್ವರ್ ಕೊನೆಯದಾಗಿ ಟೆಸ್ಟ್ ಆಡಿದ್ದರು.

ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯ ನಂತರ ನ್ಯೂಜಿಲೆಂಡ್ ವಿರುದ್ಧ ಭಾರತದಲ್ಲಿ ಸರಣಿ ನಡೆಯಲಿದ್ದು ಆ ನಂತರ ಭಾರತ ತಂಡ ದಕ್ಷಿಣ ಆಫ್ರಿಕಾಕ್ಕೆ ತೆರಳಲಿದೆ. ಮುಂದಿನ ವರ್ಷ ತವರಿನಲ್ಲಿ ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ವಿರುದ್ಧ ಭಾರತ ಟೆಸ್ಟ್ ಆಡಲಿದೆ. ಭುವನೇಶ್ವರ್ ಎಲ್ಲ ಮಾದರಿಗಳಲ್ಲಿ 186 ಪಂದ್ಯ ಆಡಿದ್ದು 246 ವಿಕೆಟ್ ಉರುಳಿಸಿದ್ದಾರೆ.